ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಬ್ರೆಜಿಲ್ ಕಮ್ಯೂನಿಸ್ಟ್ ಎಡ ಅಧ್ಯಕ್ಷೀಯ ಅಭ್ಯರ್ಥಿ

ಮ್ಯಾನುವೆಲಾ

ಸಂಪುಟ 11 | ಸಂಚಿಕೆ 52 | ಪುಟ 16 | ಡಿಸೆಂಬರ್ 18–24, 2017 | ರೂ. 10/- web: www.janashakthi.co.in | e-mail : js_weekly@yahoo.com



ಉ.ಕ. ಉದ್ವಿಗ್ನ

ಶಾ ಫಾರ್ಮುಲಾ ಮತ್ತು ಡೆಡ್‌ಬಾಡಿ ಪಾಲಿಟಿಕ್ಸ್

ಉತ್ಪಾದನಾ ವಲಯಗಳ ಸ್ಥಳಾಂತರ

ಬೆಂಗಳೂರು ನಗರ ರೂಪಾಂತರ



ಮಹಿಳೆಯರ ನಾಗರಿಕ ಹಕ್ಕುಗಳ ಮೇಲೆ ದಾಳಿ ನಿಲ್ಲಲಿ






ದಿಟ್ಟ ಸಂದೇಶ ನೀಡಿದ ಸಾಮರಸ್ಯ ನಡಿಗೆ



ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು



FRDI ಮಸೂದೆ: ಮತ್ತೊಂದು ಅನರ್ಥ ಕ್ರಾಂತಿ

ಓಖೀ ಸುಂಟರಗಾಳಿಯಿಂದ ವ್ಯಾಪಕ ಹಾನಿ: ಕೇಂದ್ರ ಸರಕಾರ ಅಗತ್ಯ ಪರಿಹಾರ ಒದಗಿಸಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಡಿಸೆಂಬರ್ 9 ಮತ್ತು 10 ರಂದು ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇರಳ ಮತ್ತು ತಮಿಳುನಾಡಿನಲ್ಲಿ ಅಪಾರ ಸಾವು–ನೋವುಗಳನ್ನುಂಟು ಮಾಡಿರುವ ಓಖೀ ಸುಂಟರಗಾಳಿ ಬಹಳಷ್ಟು ಸಾವು–ನೋವುಗಳನ್ನುಂಟುಮಾಡಿದೆ. ಇದಕ್ಕೆ ಪರಿಹಾರವನ್ನು ಕೇಂದ್ರ ಸರಕಾರ ಒದಗಿಸಬೇಕು ಎಂದು ಆಗ್ರಹಿಸಿದೆ.

ಈ ಸಭೆ ಡಿಸೆಂಬರ್ 6ರಂದು ರಾಜಸ್ಥಾನದಲ್ಲಿ ವಲಸೆ ಕಾರ್ಮಿಕನ ಬರ್ಬರ ಕೊಲೆಯನ್ನು ಬಲವಾಗಿ ಖಂಡಿಸಿದೆ, ದೇಶದಲ್ಲಿ ವಿಪರೀತ ಧಾಂಧಲೆ ನಡೆಸುತ್ತಿರುವ ಗೋರಕ್ಷಕರು ಮತ್ತು ನೈತಿಕ ಪೋಲಿಸ್‌ಗಿರಿಯ ಖಾಸಗಿ ಪಡೆಗಳನ್ನು ನಿಷೇಧಿಸಬೇಕು ಎಂದೂ ಅಗ್ರಹಿಸಿದೆ.

ನಮ್ಮ ದೇಶದ ಹತ್ತಾರು ಕೋಟಿ ಸಾಮಾನ್ಯ ಠೇವಣಿದಾರರ ಜೀವನವಿಡೀ ಉಳಿತಾಯಕ್ಕೆ ಸಂಚಕಾರ ತರುತ್ತಿರುವ ಎಫ್‌ಆರ್‌ಡಿಐ ಮಸೂದೆಯನ್ನು ತರಾತುರಿಯಿಂದ ಪಾಸು ಮಾಡಿಕೊಳ್ಳುವ ಹುನ್ನಾರ ನಡೆಸಿದೆ. ಇದನ್ನು ಸಿಪಿಐ(ಎಂ) ವಿರೋಧಿಸುವುದಾಗಿ ಪೊಲಿಟ್‌ಬ್ಯುರೊ ಹೇಳಿದೆ.

ರಾಷ್ಟ್ರೀಯ ಅನಾಹುತ ನಿರ್ವಹಣೆ ಪ್ರಾಧಿಕಾರದ ತೀವ್ರ ದುರಸ್ತಿ ಅಗತ್ಯ

ಓಖೀ ಸುಂಟರಗಾಳಿ ಕೇರಳ ಮತ್ತು ತಮಿಳುನಾಡಿನಲ್ಲಿ ಅಪಾರ ಅನಾಹುತಗಳನ್ನು ಮಾಡಿದೆ. ಕೇರಳದಲ್ಲಿ ನೂರಕ್ಕೂ ಹೆಚ್ಚು ಮಂದಿಯ ಸಾವು ಸಂಭವಿಸಿದೆ ಮತ್ತು ಸುಮಾರು ನೂರು ಮಂದಿ ನಾಪತೆಯಾಗಿದ್ದಾರೆ ಎಂದು ವರದಿಯಾಗಿದೆ. ಸಾವಿರಾರು ಮನೆಗಳು ಮತ್ತು ಯಾಂತ್ರೀಕೃತ ಮತ್ತು ನಾಡದೋಣಿಗಳು ಹಾನಿಗೊಳಗಾಗಿವೆ.

ತಮಿಳುನಾಡಿನಲ್ಲಿ ಮೂವತ್ತು ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಒಂದು ಸಾವಿರಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ ಮನೆಗಳು, ಬೆಳೆಗಳು ಮತ್ತು ಆಸ್ತಿಪಾಸ್ತಿಗಳಿಗೆ ಅಪಾರ ಹಾನಿಗಳುಂಟಾಗಿವೆ.

ನಾಪತ್ತೆಯಾಗಿರುವವರ ಸಂಖ್ಯೆ ಬಹಳ ದೊಡ್ಡದಿರುವುದರಿಂದ ನೌಕಾಪಡೆ, ವಾಯುಪಡೆ ಮತ್ತು ಕರಾವಳಿ ರಕ್ಷಣಾಪಡೆಯಿಂದ ಹುಡುಕಾಟ ಮತ್ತು ರಕ್ಷಣೆಯ ಕಾರ್ಯಾಚರಣೆಯನ್ನು ಇನ್ನೂ ಕೆಲವು ದಿನ ಮುಂದುವರೆಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಸಂಬಂಧಪಟ್ಟ ರಾಜ್ಯಗಳಿಗೆ ಇಂತಹ ಅನಾಹುತಗಳ ಎಚ್ಚರಿಕೆ ಸರಿಯಾದ ಸಮಯದಲ್ಲಿ ಸಿಗುವಂತೆ ಮಾಡಲು ರಾಷ್ಟ್ರೀಯ ಅನಾಹುತ ನಿರ್ವಹಣೆ ಪ್ರಾಧಿಕಾರ(ಎನ್‌ಡಿಎಂಎ)ದ ತೀವ್ರವಾದ ದುರಸ್ತಿ ನಡೆಯಬೇಕಾಗಿದೆ ಎಂದು ಹೇಳಿದೆ.

ಕೇರಳ ಸರಕಾರ ಓಖೀ ಸುಂಟರಗಾಳಿಯನ್ನು ತೀವ್ರ ಸ್ವರೂಪದ ಅನಾಹುತ ಎಂದು ಘೋಷಿಸಬೇಕು ಮತ್ತು 1843 ಕೋಟಿ ರೂ.ಗಳ ತಕ್ಷಣದ ಪರಿಹಾರ ಒದಗಿಸಬೇಕು ಎಂದು ಕೇಂದ್ರ ಸರಕಾರವನ್ನು ಕೇಳಿದೆ.

ರಾಜಸ್ತಾನದಲ್ಲಿ ಮತ್ತೊಂದು ಬರ್ಬರ ದ್ವೇಷ ಹತ್ಯೆ

ರಾಜಸ್ಥಾನದ ರಜ್ಸಾಮಂಡ್‌ದಲ್ಲಿ ಮಹಮ್ಮದ್ ಅಫ್ರಝುಲ್ ಎಂಬ ಒಬ್ಬ ವಲಸೆ ಕಾರ್ಮಿಕನನ್ನು ಡಿಸೆಂಬರ್ 6 ರಂದು ಬರ್ಬರವಾಗಿ ಹತ್ಯೆ ಮಾಡಿರುವುದನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಶಂಭುಲಾಲ್ ರೇಗರ್ ಎಂದು ಗುರುತಿಸಲ್ಪಟ್ಟಿರುವ ಕೊಲೆಯ ಆರೋಪಿಯನ್ನು ಕಾನೂನಿನ ಪ್ರಕಾರ ತೀವ್ರ ಶಿಕ್ಷೆಗೆ ಗುರಿಪಡಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ದ್ವೇಷದ ರಾಜಕಾರಣ ಮತ್ತು ಹಿಂದುತ್ವ ಪಡೆಗಳು ಉಂಟುಮಾಡಿರುವ ವಾತಾವರಣ ದೇಶಾದ್ಯಂತ ಹುಚ್ಚಾಟಗಳನ್ನು ಮುಂದುವರೆಸುತ್ತಿದ್ದು ಮುಸ್ಲಿಮರು ಮತ್ತು ದಲಿತರ ಮೇಲೆ ದಾಳಿಗಳು ನಡೆಯುತ್ತಿವೆ. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳು ಒದಗಿಸಿರುವ ಕೃಪಾಪೋಷಣೆ, ವಾಸ್ತವವಾಗಿ ಇಂತಹ ದ್ವೇಷ ಕೃತ್ಯಗಳಿಗೆ ಪ್ರೋತ್ಸಾಹ ಮತ್ತು ರಕ್ಷಣೆ ಕೊಡುತ್ತಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಅಖ್ಲಾಕ್‌ನ ಕೊಲೆಗಡುಕರಿಗೆ ಸಾರ್ವಜನಿಕ ವಲಯದ ಎನ್‌ಟಿಪಿಸಿಯಲ್ಲಿ ಉದ್ಯೋಗ ಕೊಡಲಾಗಿದೆ. ಪೆಹ್ಲೂ ಖಾನ್ ಸಾಯುವ ಮುನ್ನ ನೀಡಿದ ಹೇಳಿಕೆಯಲ್ಲಿ ಹೆಸರಿಸಿದ ಆರೋಪಿಗಳನ್ನೆಲ್ಲರನ್ನೂ ಮುಕ್ತ ಗೊಳಿಸಲಾಗಿದೆ. ಕೊಲೆಗಡುಕರು ಮುಕ್ತವಾಗಿ ನಿರ್ಭೀತಿಯಿಂದ ಓಡಾಡಿಕೊಂಡಿದ್ದರೆ, ದಾಳಿಗಳಿಗೆ ಗುರಿಯಾದವರನ್ನೇ ಕಾನೂನಿನ ಅಡಿಯಲ್ಲಿ ತಪ್ಪಿತಸ್ಥರೆಂದು ವಿಚಾರಣೆಗೆ ಗುರಿಪಡಿಸಲಾಗುತ್ತಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರಕಾರ ದೇಶದೆಲ್ಲೆಡೆಗಳಲ್ಲಿ ಹಾವಳಿ ಮಾಡುತ್ತಿರುವ ಗೋರಕ್ಷಕರು ಮತ್ತು 'ನೈತಿಕ ಪೋಲೀಸ್‌ಗಿರಿ' ನಡೆಸುವ ಖಾಸಗಿ ಪಡೆಗಳನ್ನು ನಿಷೇಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

22ನೇ ಮಹಾಧಿವೇಶನಕ್ಕೆ ಸಿದ್ಧತೆ

ಪೊಲಿಟ್‌ಬ್ಯುರೊ ರಾಜ್ಯಸಮ್ಮೇಳನಗಳ ವೇಳಾಪಟ್ಟಿಯನ್ನು ಮತ್ತು ಅವುಗಳಲ್ಲಿ ಭಾಗವಹಿಸುವ ಕೇಂದ್ರೀಯ ಮುಖಂಡರ ಪಟ್ಟಿಯನ್ನು ಅಂತಿಮಗೊಳಿಸಿದೆ. ಹೈದರಾಬಾದಿನಲ್ಲಿ ಎಪ್ರಿಲ್ 18ರಿಂದ 22 ರವರೆಗೆ ನಡೆಯಲಿರುವ ಸಿಪಿಐ(ಎಂ)ನ 22ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ 25 ರಾಜ್ಯ ಸಮಿತಿಗಳು ತಮ್ಮ ಸಮ್ಮೇಳನಗಳನ್ನು ನಡೆಸಲಿವೆ.

ಈ ಮಹಾಧಿವೇಶನಕ್ಕೆ ಕರಡು ರಾಜಕೀಯ ನಿರ್ಣಯವನ್ನು ಪೊಲಿಟ್‌ಬ್ಯುರೊ ಚರ್ಚಿಸಿತು. ಇವನ್ನು ಕೊಲ್ಕತಾದಲ್ಲಿ ಜನವರಿ 19ರಿಂದ 21 ರ ವರೆಗೆ ನಡೆಯಲಿರುವ ಕೇಂದ್ರ ಸಮಿತಿ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಬ್ಯಾಂಕ್, ಕಾರ್ಪೊರೇಟ್‌ಗಳ ರಕ್ಷಣೆಗೆ ಸಾಮಾನ್ಯ ಠೇವಣಿದಾರರ ಹಿತಗಳ ಬಲಿ

ಸಂಸತ್ತಿನ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಹಣಕಾಸು ಇತ್ಯರ್ಥ ಮತ್ತು ಠೇವಣಿ ವಿಮಾ(ಎಫ್‌ಆರ್‌ಡಿಐ) ಮಸೂದೆಯನ್ನು ತರಾತುರಿಯಿಂದ ಪಾಸು ಮಾಡಿಕೊಳ್ಳುತ್ತಿದೆ ಎಂಬುದು ಸ್ಪಷ್ಟವಾಗಿದೆ. ಇದು ತಮ್ಮ ಜೀವಮಾನದ ಉಳಿತಾಯಗಳನ್ನು ಬ್ಯಾಂಕಿನಲ್ಲಿಟ್ಟಿರುವ ಕೋಟ್ಯಂತರ ಸಾಮಾನ್ಯ ಠೇವಣಿದಾರರ ಮೇಲೊಂದು ನಗ್ನ ದಾಳಿ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಠೇವಣಿದಾರರ ದುಡ್ಡಿನಲ್ಲಿ ತಮ್ಮ ಆರೋಗ್ಯವನ್ನು

ಪುಟ 12 ಕ್ಕೆ

"ಹೋರಾಟವಿಲ್ಲದೆ ಮಹಿಳೆಯರಿಗೆ ಈ ದೇಶದಲ್ಲಿ ಸಮಾನ ಹಕ್ಕುಗಳು ಸಿಗವು"

ಪ್ರತಿಗಾಮಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟ: 'ಭಾರತ ಉಳಿಸಿ" ಸಮಾವೇಶದ ಕರೆ

ನವದೆಹಲಿಯಲ್ಲಿ ನವಂಬರ್ 8ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) "ಮಹಿಳೆಯರ ನಾಗರಿಕತ್ವದ ಹಕ್ಕುಗಳ ಮೇಲೆ ಪ್ರಹಾರದ ವಿರುದ್ಧ ಭಾರತ ಉಳಿಸಿ ಸಮಾವೇಶ" ಎಂಬ ಒಂದು ಬೃಹತ್ ಸಮಾವೇಶವನ್ನು ನಡೆಸಿತು. "ಹೋರಾಟವಿಲ್ಲದೆ ಮಹಿಳೆಯರಿಗೆ ಈ ದೇಶದಲ್ಲಿ ಸಮಾನ ಹಕ್ಕುಗಳು ಸಿಗವು" ಎಂದು ಈ ಸಮಾವೇಶದ ಹಿನ್ನೆಲೆಯನ್ನು ಎಐಡಿಡಬ್ಲ್ಯುಎ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಮಂಡಿಸಿದರು.

ನಮ್ಮ ದೇಶದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಹಂದರವನ್ನು ಕಾಪಾಡಲು ಮತ್ತು ಹೋರಾಟ ನಡೆಸಲು ಮಹಿಳೆಯರನ್ನು ಅಣಿನೆರೆಸಲು ಈ ಸಭೆಯನ್ನು ಆಯೋಜಿಸಲಾಗಿತ್ತು. "ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ಫ್ಯಾಸಿಸ್ಟ್ ಶಕ್ತಿಗಳು ಅಲ್ಪಸಂಖ್ಯಾತರು, ಅದರಲ್ಲೂ ವಿಶೇಷವಾಗಿ ಮುಸ್ಲಿಮರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಮೇಲೆ ಗುರಿಯಿಟ್ಟಿದ್ದಾರೆ. ಮನುಸ್ಮೃತಿಯಲ್ಲಿ ನಂಬಿಕೆಯಿಟ್ಟಿರುವ ಇವರು ಆ ವಿಚಾರಗಳೊಂದಿಗೆ ನಮ್ಮ ದೇಶದ ಕಣ್ಣೋಟವನ್ನು ಬದಲಿಸ ಬಯಸುತ್ತಿದ್ದಾರೆ. ಅವರ ದಾಳಿಗಳು ಮಹಿಳೆಯರನ್ನು ಅತಿ ಹೆಚ್ಚಾಗಿ ಬಾಧಿಸಿವೆ" ಎಂದು ಈ ಸಂದರ್ಭದಲ್ಲಿ ಮಾತಾಡುತ್ತ ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ ಹೇಳಿದರು.

ಸಮಾವೇಶದ ಮುಖ್ಯ ಅತಿಥಿಗಳಾಗಿದ್ದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ಮಾತಾಡುತ್ತ, ಈ ಸರಕಾರದ ಧೋರಣೆಗಳು ಈ ದೇಶದ ಮಹಿಳೆಯರನ್ನು ನಕಾರಾತ್ಮಕವಾಗಿ ತಟ್ಟುತ್ತಿವೆ ಮತ್ತು ಈ ಧೋರಣೆಗಳನ್ನು ಪ್ರತಿರೋಧಿಸುವ ಹೊಣೆ ಮೊದಲಿಗೆ ಮಹಿಳೆಯರದ್ದು, ಆದರೆ ಮಹಿಳೆಯರೆಲ್ಲ ಒಟ್ಟುಗೂಡಿದರೆ, ಈ ದೇಶದಲ್ಲಿ ಯಾವ ಶಕ್ತಿಯೂ ದಮನ ಮಾಡಲಾರದು ಎಂದರು. ಒಂದೆಡೆಯಲ್ಲಿ ಮನುಸ್ಮೃತಿಯಿಂದ ಪ್ರೇರಣೆ, ಇನ್ನೊಂದೆಡೆಯಲ್ಲಿ, ಶ್ರೀಮಂತರ ಪಕ್ಷ ವಹಿಸುವುದು., "ಹಿಂದುತ್ವ ಆಳ್ವಿಕೆಯಿಂದ ಪ್ರಯೋಜನವಾಗಿರುವುದು ಯಾರಿಗೆ? ಅದಾಣಿ, ಅಂಬಾನಿ, ಮಿತ್ತಲ್ ಮತ್ತು ಎಲ್ಲ ಬಂಡವಾಳಶಾಹಿಗಳ ಸಂಪತ್ತು ಕಳೆದ ಮೂರು ವರ್ಷಗಳಲ್ಲಿ 10% ಏರಿತು. ಇಂದು ದೇಶದ 58% ಸಂಪತ್ತು 1% ಜನಗಳ ಕೈಯಲ್ಲಿದೆ. ಇಲ್ಲಿ ರೇಶನ್ ಅಂಗಡಿ ಮೂಲಕ ಆಹಾರಧಾನ್ಯ ಒದಗಿಸದಿರುವುದರಿಂದ ಸಂತೋಷಿಯಂತವರು ಹಸಿವಿನಿಂದ ಸಾಯುತ್ತಾರೆ. ಇದು ಹಿಂದುತ್ವ ಧೋರಣೆಗಳ ಆರ್ಥಿಕ ಮುಖ" ಎಂದು ಬೃಂದಾ ಅವರು ಕಟುವಾಗಿ ಟೀಕಿಸಿದರು.

ಸಮಾವೇಶದಲ್ಲಿ ಬಲಪಂಥೀಯ ಶಕ್ತಿಗಳ ದಾಳಿಗಳಿಗೆ ಗುರಿಯಾದವರು ಮಾತಾಡಿದರು. ಅಖ್ಲಾಕ್ ಮಗಳು ಶಯಿಸ್ತ ತನ್ನ ತಂದೆಯನ್ನು ಕೊಂದ ಆ ಕರಾಳ ರಾತ್ರಿಯನ್ನು ನೆನಪಿಸಿಕೊಂಡಳು. "ನನ್ನ ತಂದೆಯವರನ್ನು ಕೊಂದವರಿಗೆ ಎನ್‌ಟಿಪಿಸಿಯಂತಹ ಸರಕಾರೀ ಸಂಸ್ಥೆಗಳಲ್ಲಿ ಕೆಲಸ ಕೊಟ್ಟಿದ್ದರೆ, ವಿದ್ಯಾವಂತನಾದ ನನ್ನ ತಮ್ಮನಿಗೆ ಸರಕಾರ ಬೆಂಬಲವನ್ನೇ ನೀಡುತ್ತಿಲ್ಲ. ಇದೆಂತಾ ನ್ಯಾಯ" ಎಂದು ಕೇಳಿದಳು.

ಝಾರ್ಖಂಡ್‌ನ ಆದಿವಾಸಿ ಮಹಿಳೆ ಅನಿತಾ ಮಿಂಝ್‌ಳ ಗಂಡನನ್ನು ಆಗಸ್ಟ್ 19ರಂದು ಗೋರಕ್ಷಕರು ಹೊಡೆದು ಗಾಯಗೊಳಿಸಿದರು. ಪೋಲೀಸರು ಆತನನ್ನು ಆಸ್ಪತ್ರೆಗೆ ಒಯ್ಯುವ ಬದಲು ಲಾಕಪ್ಪಿಗೆ ಹಾಕಿದರು. ಅಲ್ಲಿಯೇ ಆತನ ಸಾವು ಉಂಟಾಯಿತು. ಅವನನ್ನು ಕೊಂದವರು ಆರಾಮವಾಗಿ ಅಡ್ಡಾಡಿಕೊಂಡಿದ್ದಾರೆ, ಆದರೆ ತನಗೆ ಇದುವರೆಗೂ ತನ್ನ ಗಂಡನ ಮರಣ ಪ್ರಮಾಣ ಪತ್ರವನ್ನೂ ಕೊಡುತ್ತಿಲ್ಲ, ಪೋಲೀಸರು ಮತ್ತು ಆಸ್ಪತ್ರೆಯವರು ನೆರವಿಗೆ ಬರುತ್ತಿಲ್ಲ ಎಂದು ಭಾರವಾದ ಮನಸ್ಸಿನಿಂದ ಆಕೆ ಹೇಳಿದಳು.

ದಿಲ್ಲಿಗೆ ಹೋಗುವ ರೈಲಿನಲ್ಲಿ ಇರಿದು ಸಾಯಿಸಲ್ಪಟ್ಟ 15ವರ್ಷದ ಬಾಲಕ ಜುನೈದನ ತಾಯಿ ಸಾಯಿರಾ ಸಮಾವೇಶದಲ್ಲಿ ಮಾತಾಡುತ್ತ "ನಾವು ಅವರನ್ನು ನ್ಯಾಯ ಕೇಳುತ್ತಿದ್ದೇವೆ, ಪೋಲೀಸರು ಆರೋಪಿಗಳ ಮೇಲೆ ಕಾನೂನಿನ ಸಾಧಾರಣ ಸೆಕ್ಷನ್‌ಗಳನ್ನು ಹಾಕಿ ಈ ಪ್ರಕ್ರಿಯೆಯ ಹಳಿ ತಪ್ಪಿಸಲು ನೋಡುತ್ತಿದ್ದಾರೆ. ನಾವು ಕೇಸನ್ನು ಹಿಂದಕ್ಕೆ ಪಡೆಯುವಂತೆ ಎಲ್ಲ ತಂತ್ರಗಳನ್ನು ಪ್ರಯೋಗಿಸುತ್ತಿದ್ದಾರೆ" ಎಂದಳು. ಆದರೆ ಸ್ವಂತ ಮಗುವಿಗಿಂತ ಬೆಲೆಬಾಳುವಂತದ್ದು ಬೇರೇನಿಲ್ಲ, ನಾವು ನ್ಯಾಯಕ್ಕಾಗಿ ಹೋರಾಡುತ್ತೇವೆ ಎಂದಳು ಆಕೆ.

ಸುಳ್ಳು ಕೇಸಿನಲ್ಲಿ ಈಗಲೂ ಜೈಲಿನಲ್ಲಿರುವ ಉತ್ತರಪ್ರದೇಶದ ಶಬೀರ್‌ಪುರ್‌ನ ದಲಿತ ಸರಪಂಚ್‌ನ ಹೆಂಡತಿ ಸೋಂಪಲ್ಲಿ, ಝಾರ್ಖಂಡ್‌ನಲ್ಲಿ ರೇಶನ್ ನಿರಾಕರಣೆಯಿಂದ ಸತ್ತ ಸಂತೋಷಿಯ ಸೋದರಿ ಗುಡಿಯಾ, ಮನರೇಗದಲ್ಲಿ ಕೂಲಿ ವಂಚಿತೆ ಮಹಾರಾಷ್ಟ್ರದ ಹೀನಾ ವಂಗಾ, ವಿಧವಾ ಪೆನ್ಶನ್ ವಂಚಿತೆ ಕೌಶಲ್ಯ, ಬಾಲವಿವಾಹಕ್ಕೆ ಗುರಿಯಾದ ಸೋನಿಯ, ಅಂತರ್ಜಾತಿ ವಿಬಾಹದಿಂದಾಗಿ ಕಿರುಕುಳಕ್ಕೆ ಗುರಿಯಾಗಿರುವ ಆಝ್ರು ಮತ್ತು ಸುಮೀತ್

ಪುಟ 14 ಕ್ಕೆ





ಶಾ ಫಾರ್ಮುಲಾ ಮತ್ತು ಡೆಡ್ ಬಾಡಿ ಪಾಲಿಟಿಕ್ಸ್

ಸಂಪಾದಕೀಯ

ಹುಣಸೂರು ಮತ್ತು ಚಂದಾವರಗಳಲ್ಲಿ ಹನುಮ ಜಯಂತಿ-ಈದ್ ಮಿಲಾದ್ ಸಂದರ್ಭದಲ್ಲಿ ಕೋಮು ಗಲಭೆ ನಡೆಸುವ ಪ್ರಯತ್ನ, ಬಾಬಾ ಬುಡನ್ ಗಿರಿಯಲ್ಲಿ ಗೋರಿಗೆ ಹಾನಿಗಳ ನಂತರವೂ, ಬಿಜೆಪಿ ಮತ್ತು ಸಂಘ ಪರಿವಾರದ ಕೋಮು ದಾಹ ಆರಿಲ್ಲ. ಬಹುಶಃ ಪರಿವರ್ತನಾ ಯಾತ್ರೆಯ ಶೂನ್ಯ (ಅಥವಾ ನಕಾರಾತ್ಮಕ) ಸಂಪಾದನೆ, ಗುಜರಾತಿನ ವಿಧಾನಸಭೆ ಚುನಾವಣೆಗಳಲ್ಲಿ ಸೋಲಿನ ಭೀತಿ ಮತ್ತು ಕರ್ನಾಟಕದಲ್ಲೂ ಮುಂಬರುವ ಪರಾಭವದ ಭೀತಿ ಅವರ ಹತಾಶೆಯನ್ನು ಇನ್ನಷ್ಟು ಹೆಚ್ಚಿಸಿದೆ. ಹುಣಸೂರಿನಲ್ಲಿ ಪ್ರತಾಪಸಿಂಹರ ದುಷ್ಕೃತ್ಯ ಬೆಂಬಲಿಸಿ, "ಉಕ ಜಿಲ್ಲೆಯಲ್ಲಿ ಇಷ್ಟು ಹೊತ್ತಿಗೆ ಹೊತ್ತಿ ಉರಿಯುತ್ತಿತ್ತು" ಎಂದು ಕೊಚ್ಚಿಕೊಂಡದ್ದನ್ನು ಸಾಧಿಸಿ ತೋರಿಸುವ ಒತ್ತಡ ಸಹ ಅನಂತ ಕುಮಾರ ಹೆಗಡೆ ಮೇಲೆ ಬಿದ್ದಿರಬೇಕು.

ಕಳೆದ ಹಲವು ದಿನಗಳಲ್ಲಿ ಹೊನ್ನಾವರ, ಕುಮಟಾ, ಶಿರಸಿ ಮತ್ತು ವ್ಯವಸ್ಥಿತವಾಗಿ ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ "ಬೆಂಕಿ ಹಚ್ಚಿ ಉರಿಸುವ" ಕೆಲಸ ನಡೆದಿದೆ. ಹೊನ್ನಾವರದಲ್ಲಿ ಒಂದು ಸಣ್ಣ ಅಪಘಾತ, ಕಾಣೆಯಾಗಿ ಶವವಾಗಿ ಪತ್ತೆಯಾದ ಯುವಕನ ಪ್ರಕರಣವನ್ನು ವ್ಯಾಪಕ ಪ್ರಚೋದನೆಗೆ ಬಳಸಲಾಗಿದೆ. ಪೋಸ್ಟ್ ಮಾರ್ಟಂ ವರದಿ ಬರುವ ಮೊದಲೇ ಅದು ಇಸ್ಲಾಮಿಕ್ ಭಯೋತ್ಪಾದಕರ ಕೃತ್ಯ ಎಂದು ವಾಟ್ಸಪ್ ಫೇಸ್ ಬುಕ್ ಮುಂತಾದ ಸಾಮಾಜಿಕ ಮಾಧ್ಯಮಗಳ ಮೂಲಕ ಅತ್ಯಂತ ಪ್ರಚೋದನಾಕಾರಿ ಅಪಪ್ರಚಾರ ಮಾಡಲಾಗಿತ್ತು. ಇಡೀ ಜಿಲ್ಲೆಯಲ್ಲಿ ಇದನ್ನು ಅಲ್ಪಸಂಖ್ಯಾತರ ಮತ್ತು ಅವರ ಮನೆ, ಆಸ್ತಿ-ಪಾಸ್ತಿಗಳ ಮೇಲೆ ದಾಳಿ ನಡೆಸಲು ನೆಪವಾಗಿಸಲಾಯಿತು. ಕಳೆದ ಕೆಲವು ದಿನಗಳಲ್ಲಿ ನಡೆದದ್ದು ಕೋಮುಗಲಭೆಗಳಲ್ಲ. ಅದು ಅಲ್ಪಸಂಖ್ಯಾತರ ಮೇಲೆ ಏಕಪಕ್ಷೀಯ ದಾಳಿ. ಇದು ಈ ಸಂಚಿಕೆಯ ಪುಟ 8-11ರಲ್ಲಿರುವ ವಿವರವಾದ ವರದಿಗಳಿಂದ ಸ್ಪಷ್ಟವಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ದೇಶಪಾಂಡೆ ಮತ್ತು ಮಾರ್ಗರೆಟ್ ಬಣದ ಒಳಜಗಳಗಳಿಂದಾಗಿ ಮತ್ತು ಮೃದು-ಹಿಂದುತ್ವ ಧೋರಣೆಯಿಂದಾಗಿ, ಜಿಲ್ಲೆ ಹತ್ತಿ ಉರಿಯುತ್ತಿರುವಾಗ ಕಾಂಗ್ರೆಸ್ ಮೌನ ಪ್ರೇಕ್ಷಕವಾಗಿತ್ತು. ಯಾವುದೇ ಸಕಾರಾತ್ಮಕ ರಾಜಕೀಯ ಪಾತ್ರ ವಹಿಸಲಿಲ್ಲ. ಆಡಳಿತ ಸಹ ಹುಣಸೂರಿನಂತೆ ದಿಟ್ಟ ಕಟು ಕ್ರಮ ಕೈಗೊಳ್ಳುವುದರಲ್ಲಿ ವಿಫಲವಾಯಿತು. ವಾಟ್ಸಪ್ ಫೇಸ್ ಬುಕ್ ಮುಂತಾದ ಸಾಮಾಜಿಕ ಮಾಧ್ಯಮಗಳ ಮೂಲಕ ಅತ್ಯಂತ ಪ್ರಚೋದನಾಕಾರಿ ಅಪಪ್ರಚಾರಗಳ ವಿರುದ್ಧ ಹಾಗೂ ಅಲ್ಪಸಂಖ್ಯಾತರ ಮೇಲೆ ದಾಳಿ, ಬೆಂಕಿ ಹಚ್ಚಿ ದಾಂಧಲೆ ಮಾಡುವ ಬುಡಮೇಲು ಕೃತ್ಯಗಳ ವಿರುದ್ಧ ಸಕಾಲಿಕ ಕಟು ಕ್ರಮ ಕೈಗೊಳ್ಳಲಿಲ್ಲ. ಜಿಲ್ಲಾಧಿಕಾರಿಗಳಿಗೆ ಅತ್ಯಂತ ಅವಮಾನಕಾರಿ ಭಾಷೆಯಲ್ಲಿ ಜರಿದರೂ ಮತ್ತು ಎಡಿಜಿಪಿ ಕಾರು ಸುಟ್ಟರೂ ಆಡಳಿತದ ಪ್ರತಿಕ್ರಿಯೆ ಬಹಳ ನಿರಾಶಾದಾಯಕವಾಗಿತ್ತು. ನಿಷೇಧಾಜ್ಞೆ ಜಾರಿಯಲ್ಲಿರುವಾಗ ಸಾವು-ನೋವು, ಅಗ್ನಿಸ್ಪರ್ಶದ ಘಟನೆಗಳು ನಡೆದವು. ಪರೇಶ ಮೇಸ್ತನದ್ದು ಬರ್ಬರ ಕೊಲೆ ಎಂಬ ಬಿಜೆಪಿ-ಸಂಘೀ ಅಪಪ್ರಚಾರವನ್ನು ಮಣಿಪಾಲ ಆಸ್ಪತ್ರೆ ಸ್ಪಷ್ಟನೆ ಬಂದ ಮೇಲೂ ಮಟ್ಟ ಹಾಕಲು ಆಡಳಿತಕ್ಕೆ ಸಾಧ್ಯವಾಗಲಿಲ್ಲ. ಮಣಿಪಾಲ ಆಸ್ಪತ್ರೆ ಸ್ಪಷ್ಟನೆ ಬಂದ ಮೇಲೆ, ಪೂರ್ಣ ಪೋಸ್ಟ್ ಮಾರ್ಟಂ ವರದಿಗೆ ಕಾಯದೆ – ಸರಕಾರ ಆಸ್ಪತ್ರೆ ಮೇಲೆ ಒತ್ತಡ ಹಾಕಿದೆ, ಪೋಸ್ಟ್ ಮಾರ್ಟಂ ಮಾಡಿದ ಡಾಕ್ಟರನನ್ನು ನಾಪತ್ತೆ ಮಾಡಲಾಗಿದೆ ಎಂದೆಲ್ಲಾ ಬಿಜೆಪಿ-ಸಂಘೀ ನಾಯಕರು ಹೇಳುತ್ತಿದ್ದಾರೆ. ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಹಾಗೂ ಸೌಹಾರ್ದತೆ ಕಾಪಾಡುವಲ್ಲಿ, ಕಾಂಗ್ರೆಸ್‌ನ ರಾಜಕೀಯ ಮತ್ತು ಸರಕಾರದ ಆಡಳಿತಾತ್ಮಕವಾದ ಪೂರ್ಣ ವೈಫಲ್ಯದಿಂದಾಗಿ ಬಿಜೆಪಿ-ಸಂಘೀ ಸಿಬಿಐ ತನಿಖೆಯ ಒತ್ತಾಯಕ್ಕೆ ಮಣಿಯಬೇಕಾಗಿ ಬಂದಿದೆ. ಕೋಮುವಾದಿ ಶಕ್ತಿಗಳಿಗೆ ರಾಜಕೀಯ ವಿಜಯ ಕೊಟ್ಟಂತಾಗಿದೆ.

ಪರೇಶ ಮೇಸ್ತ ಯಾವುದೇ ಹಿಂದೂ ಸಂಘಟನೆ ಕಾರ್ಯಕರ್ತನಲ್ಲ ಎಂದು ಹಲವು ವರದಿಗಳು ಹೇಳಿವೆ. ಅಪರಿಚಿತ ಯುವಕನ ಅಸಹಜ ಸಾವನ್ನು ಕಾಂಗ್ರೆಸ್ ಮತ್ತು ಸರಕಾರದ ವಿರುದ್ಧ ಬಳಸುವ "ಡೆಡ್ ಬಾಡಿ ಪಾಲಿಟಿಕ್ಸ್" ತಂತ್ರವನ್ನು ಇದರೊಂದಿಗೆ ಬಿಜೆಪಿ ಹೊಸೆಯುವುದರಲ್ಲಿ ಸಫಲವಾಗಿದೆ. ಇದನ್ನು ಕರ್ನಾಟಕದಲ್ಲಿ ಹಿಂದೆನೂ ಬಳಸಿತ್ತು. ಈ ಬಾರಿಯ ಸಫಲತೆಯ ನಂತರ ಮತ್ತೆ ಮತ್ತೆ ಬಳಸಲಿದೆ. ಶಾ ಫಾರ್ಮುಲಾ ಮತ್ತು ಹೊಸ ಕರ್ನಾಟಕ ನಾಯಕ ಅನಂತ ಹೆಗಡೆಯ ಮೇಲ್ಪಂಕ್ತಿಯಿಂದಾಗಿ, "ಡೆಡ್ ಬಾಡಿ ಪಾಲಿಟಿಕ್ಸ್" ಮಾಡಿ ಗರಿಷ್ಟ ದೊಂಬಿಗೆ (ಸಾಧ್ಯವಾದರೆ "ಲಾಠಿ ಚಾರ್ಜ್-ಟಿಯರ್ ಗ್ಯಾಸ್" ಮಟ್ಟದ ಶಾ ಫಾರ್ಮುಲಾ ಮೀರಿ, "ಫಯರಿಂಗ್" ಮಟ್ಟ ತಲುಪುವ) ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಪ್ರಯತ್ನಿಸಲಿದ್ದಾರೆ. ಅದರಲ್ಲೂ "ಒರಿಜಿನಲ್" ಮತ್ತು "ಪಕ್ಷಾಂತರಿ" ಬಿಜೆಪಿಗರ ಪೈಪೋಟಿಯಲ್ಲಿ ಇದು ಹೆಚ್ಚಾಗಲಿದೆ. ಉತ್ತರ ಕನ್ನಡ ಉದಿಗ್ನವಾಗುವುದಕ್ಕೆ ಕುಮಟಾ, ಭಟ್ಕಳ ಮತ್ತು ಕಾರವಾರ ಕ್ಷೇತ್ರಕ್ಕೆ ಟಿಕೆಟ್ ಆಕಾಂಕ್ಷಿಗಳಾದ – ಜೆ.ಡಿ.ಎಸ್. ಪಕ್ಷಾಂತರಿ ದಿನಕರ ಶೆಟ್ಟಿ, ಉದ್ಯಮಿ ಯಶೋಧರ ನಾಯ್ಕ, ನಿವೃತ್ತ ಅಧಿಕಾರಿ ನಾಗರಾಜ್ ನಾಯಕ, ಶ್ರೀಕುಮಾರ್ ಟ್ರಾವೆಲ್ಸ ಮಾಲಿಕ ವೆಂಕಟ್ರಮಣ ಹೆಗಡೆ – ಇವರುಗಳ ನಡುವೆ ಸೀಟಿಗಾಗಿ ಪೈಪೋಟಿ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಬಿಜೆಪಿಯ "ಶಾ ಫಾರ್ಮುಲಾ ಮತ್ತು ಡೆಡ್ ಬಾಡಿ ಪಾಲಿಟಿಕ್ಸ್" ತಂತ್ರ ವಿಫಲಗೊಳಿಸಿ ಸೌಹಾರ್ದತೆ ಕಾಪಾಡಲು, ಕಾಂಗ್ರೆಸ್ ಮತ್ತು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಗಂಭೀರ ರಾಜಕೀಯ ಪ್ರಯತ್ನ ನಡೆಸಬೇಕಾಗಿದೆ. ಇದಕ್ಕೆ ಈ ವಾರ ಡಿಸೆಂಬರ್ 12ರಂದು ದಕ್ಷಿಣ ಕನ್ನಡದಲ್ಲಿ ನಡೆದ 'ಸಾಮರಸ್ಯ ನಡಿಗೆ ಸೌಹಾರ್ದದೆಡೆಗೆ' ಮಾದರಿಯಾಗಬೇಕಾಗಿದೆ. (ಈ ಸಂಚಿಕೆಯ ಪುಟ 5ರಲ್ಲಿ ಈ ಬಗ್ಗೆ ವಿವರವಾದ ವರದಿ ಇದೆ). ಕೋಮುವಾದಿಗಳಿಗೆ ಇದು ತಕ್ಕ ಮತ್ತು ದಿಟ್ಟ ಉತ್ತರ ನೀಡಿದೆ. ಇದರ ಮುಂದುವರಿಕೆ ಎಂಬಂತೆ ಸೆಕ್ಯೂಲರ್ ಪಕ್ಷಗಳು, ಸಂಘಟನೆಗಳು, ಗಣ್ಯರು ಒಂದಾಗಿ ಬರುವ ಜನವರಿ 30 ರಂದು ಬಸವಕಲ್ಯಾಣದಿಂದ ಚಾಮರಾಜ ನಗರದ ವರೆಗೂ ಕಾರವಾರದಿಂದ ಮಡಿಕೇರಿಯ ವರೆಗೂ ಸೌಹಾರ್ದ ಮಾನವ ಸರಪಳಿ ಮಾಡಲು ಸೌಹಾರ್ದಕ್ಕಾಗಿ ಕರ್ನಾಟಕ ಎಂಬ ಸಂಘಟನೆ ಮೂಲಕ ಆಹ್ವಾನ ನೀಡಲಾಗಿದೆ. ಇದನ್ನೂ ರಾಜ್ಯದ ಜನತೆ ಯಶಸ್ವಿಗೊಳಿಸಿ ಕೋಮುವಾದಿಗಳಿಗೆ ತಕ್ಕ ಉತ್ತರ ನೀಡಬೇಕಾಗಿದೆ. ಇದಕ್ಕೆ ಎಡ-ಪ್ರಜಾಶತ್ತಾತ್ಮಕ ಶಕ್ತಿಗಳು ಶಕ್ತಿಮೀರಿ ಪ್ರಯತ್ನಿಸಬೇಕಾಗಿದೆ. ಕಾಂಗ್ರೆಸ್ ತನ್ನ ರಾಜಕೀಯ ಉಳಿವಿಗಾಗಿಯಾದರೂ ಬಿಜೆಪಿಯ "ಶಾ ಫಾರ್ಮುಲಾ ಮತ್ತು ಡೆಡ್ ಬಾಡಿ ಪಾಲಿಟಿಕ್ಸ್" ತಂತ್ರ ವಿಫಲಗೊಳಿಸಲು, ತನ್ನ ಮೃದು-ಹಿಂದುತ್ವದ ಚುನಾವಣಾ ತಂತ್ರ ಬಿಟ್ಟು, ದಿಟ್ಟ ಕಟು ರಾಜಕೀಯ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅವರ ಜತೆ ಪಕ್ಷದ ನಾಯಕರ ತಂಡ ಡಿಸೆಂಬರ್ 13 ರಂದು ಗೃಹ ಮಂತ್ರಿ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋಮುಗಲಭೆಗಳನ್ನು ಪ್ರಚೋದಿಸುತ್ತಿರುವ ಶಕ್ತಿಗಳ ವಿರುದ್ಧ ದೃಢವಾದ ಕಾನೂನು ಕ್ರಮ ಕೈಗೊಂಡು ಜಿಲ್ಲೆಯಾದ್ಯಂತ ಶಾಂತಿ ನೆಲೆಸುವಂತೆ ಮಾಡಲು ಆಗ್ರಹ ಪಡಿಸಿ ಇಲ್ಲಿರುವ ಪತ್ರವನ್ನು ಸಲ್ಲಿಸಿದರು

ಶ್ರೀಮಾನ್ ರಾಮಲಿಂಗಾರೆಡ್ಡಿ,
ಮಾನ್ಯ ಗೃಹ ಸಚಿವರು,
ಕರ್ನಾಟಕ ಸರ್ಕಾರ, ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋಮುಗಲಭೆಗಳನ್ನು ಪ್ರಚೋದಿಸುತ್ತಿರುವ ಶಕ್ತಿಗಳ ವಿರುದ್ಧ ದೃಢವಾದ ಕಾನೂನು ಕ್ರಮ ಕೈಗೊಂಡು ಜಿಲ್ಲೆಯಾದ್ಯಂತ ಶಾಂತಿ ನೆಲೆಸುವಂತೆ ಮಾಡಲು ಆಗ್ರಹ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ ಮತ್ತು ಶಿರಸಿ ಪಟ್ಟಣಗಳಲ್ಲಿ ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ದೊಂಬಿ, ಹಿಂಸಾಚಾರ, ಜನರನ್ನು ಬೆದರಿಸಿ ಭಯದ ವಾತಾವರಣವನ್ನು ಸೃಷ್ಟಿಸುತ್ತಿರುವ ಕೃತ್ಯಗಳನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ. ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಕೋಮು ಗಲಭೆಗಳಿಗೆ ಪ್ರಚೋದನೆ ನೀಡುತ್ತಿರುವ ಶಕ್ತಿಗಳನ್ನು ಮತ್ತು ವ್ಯಕ್ತಿಗಳನ್ನು ಅವರು ಯಾರೇ ಆಗಿರಲಿ, ಎಷ್ಟೇ ದೊಡ್ಡ ವ್ಯಕ್ತಿಗಳಾಗಿರಲಿ, ಅವರನ್ನು ದೃಢವಾದ ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ. ಇಂತಹ ವಿಧ್ವಂಸಕಾರಿ ಶಕ್ತಿಗಳನ್ನು ಹತ್ತಿಕ್ಕಲು ತಮ್ಮ ಸರ್ಕಾರ ಕೈಗೊಳ್ಳುವ ದೃಢವಾದ ಕ್ರಮಗಳಿಗೆ ರಾಜ್ಯದ ಎಲ್ಲ ಪ್ರಗತಿಪರ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಜನತೆಯ ಸಂಪೂರ್ಣ ಬೆಂಬಲ ಇದೆ ಎಂದು ಸ್ಪಷ್ಟಪಡಿಸ ಬಯಸುತ್ತೇವೆ.

ನಿಮ್ಮ ಪೊಲೀಸ್ ಇಲಾಖೆ ಈ ವಿಷಯದಲ್ಲಿ ಧೃತಿಗೆಡದೆ ಧೈರ್ಯದಿಂದ ಪರಿಸ್ಥಿತಿಯನ್ನು ನಿಭಾಯಿಸುವಂತೆ ಅವರಿಗೆ ಎಲ್ಲ ಪ್ರೋತ್ಸಾಹ ನೀಡಬೇಕೆಂದು ಸಹ ಆಗ್ರಹಿಸುತ್ತೇವೆ.

ಈ ಪತ್ರದೊಂದಿಗೆ ನಮ್ಮ ಉತ್ತರಕನ್ನಡ ಜಿಲ್ಲಾ ಘಟಕ ನೀಡಿದ ವರದಿಯನ್ನು ಮತ್ತು ಅವರು ಸರ್ಕಾರದ ಮುಂದಿಟ್ಟ ಹಕ್ಕೊತ್ತಾಯಗಳನ್ನು ಲಗತ್ತಿಸಲಾಗಿದ್ದು ಅವುಗಳನ್ನು ಗಂಭೀರವಾಗಿ ಪರಿಶೀಲಿಸಬೇಕೆಂದು ಆಗ್ರಹಿಸುತ್ತೇವೆ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ

ಜಿ.ವಿ. ಶ್ರೀರಾಮರೆಡ್ಡಿ
ಕಾರ್ಯದರ್ಶಿ

ಸಿಪಿಐ(ಎಂ)
ಜಿಲ್ಲಾ ಸಮ್ಮೇಳನಗಳು

ಬೆಂಗಳೂರು ದಕ್ಷಿಣ	: ಡಿಸೆಂಬರ್ 15-17, ಬೆಂಗಳೂರು.
ಮೈಸೂರು	: ಡಿಸೆಂಬರ್ 16-17, ಹುಣಸೂರು
ಹಾಸನ	: ಡಿಸೆಂಬರ್ 16-17, ಸಕಲೇಶಪುರ.
ದಕ್ಷಿಣ ಕನ್ನಡ	: ಡಿಸೆಂಬರ್ 17-18, ಮಂಗಳೂರು.
ಉತ್ತರ ಕನ್ನಡ	: ಡಿಸೆಂಬರ್ 17-18, ದಾಂಡೇಲಿ.
ವಿಜಯಪುರ	: ಡಿಸೆಂಬರ್ 21-22
ಚಿಕ್ಕಬಳ್ಳಾಪುರ	: ಡಿಸೆಂಬರ್ 21-23
ರಾಯಚೂರು	: ಡಿಸೆಂಬರ್ 23-24, ರಾಯಚೂರು.
ಬೆಳಗಾವಿ	: ಡಿಸೆಂಬರ್ 23-24, ರಾಮದುರ್ಗ
ದಾವಣಗೆರೆ	: ಡಿಸೆಂಬರ್ 24-25, ದಾವಣಗೆರೆ.
ಉಡುಪಿ	: ಡಿಸೆಂಬರ್ 24-26, ಬೈಂದೂರು.
ಧಾರವಾಡ	: ಡಿಸೆಂಬರ್ 25-26, ಗಜೇಂದ್ರಗಡ
ಕೋಲಾರ	: ಡಿಸೆಂಬರ್ 29-30, ಕೋಲಾರ.

ದಿಟ್ಟ ಸಂದೇಶ ನೀಡಿದ ಸಾಮರಸ್ಯ ನಡಿಗೆ
“ಕೊಲೆಯನ್ನು ರಾಜಕೀಯಕ್ಕೆ ಬಳಸುವವರು ರಾಕ್ಷಸರು”

ವಾಸುದೇವ ಉಚ್ಚಿಲ

ದ.ಕ.ಜಿಲ್ಲೆಯಲ್ಲಿ ಮತೀಯ ದ್ವೇಷ ಹಬ್ಬಿಸುತ್ತಿರುವ ಶಕ್ತಿಗಳ ವಿರುದ್ಧ ಜಾಗೃತಿ ಮೂಡಿಸುವ ಉದ್ದೇಶದಿಂದ ಸೆಕ್ಯೂಲರ್ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಬಂಟ್ವಾಳ ತಾಲೂಕಿನ ಫರಂಗಿಪೇಟೆಯಿಂದ ಮಾಣಿ (ನೇರಳಕಟ್ಟೆ) ವರೆಗೆ ಡಿಸೆಂಬರ್ 12 ರಂದು 24 ಕಿ.ಮೀ.ಗಳ 'ಸಾಮರಸ್ಯ ನಡಿಗೆ ಸೌಹಾರ್ದದೆಡೆಗೆ' ಅನಿರೀಕ್ಷಿತ ಯಶಸ್ಸನ್ನು ಪಡೆಯಿತು.

ರಾಜ್ಯದ ಅರಣ್ಯ ಸಚಿವರು ಹಾಗೂ ದ.ಕ.ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಬಿ.ರಮಾನಾಥ ರೈಯವರು ನೇತೃತ್ವ ವಹಿಸಿ ಹಮ್ಮಿಕೊಂಡಿದ್ದ ಈ ಸಾಮರಸ್ಯ ನಡಿಗೆ ಜಿಲ್ಲೆಯಲ್ಲಿ ಆಗಲೇ ಬೇಕಾಗಿದ್ದ ಕಾರ್ಯಕ್ರಮ ಎಂಬ ಭಾವನೆಯನ್ನು ಜಿಲ್ಲೆಯ ಸಾಮಾನ್ಯ ನಾಗರಿಕರಿಗೂ ಅರಿವು ಮಾಡಿಕೊಟ್ಟಿತು.

ಬಿ.ರಮಾನಾಥ ರೈಯವರು ಪ್ರತಿನಿಧಿಸುವ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಫರಂಗಿಪೇಟೆ, ಬಿ.ಸಿ.ರೋಡ್, ಕಲ್ಲಡ್ಕ ಪೇಟೆಗಳು ಪದೇ ಪದೇ ಮತೀಯ ದ್ವೇಷದ ಹಾಗೂ ಹಿಂಸಾಚಾರದ ಘಟನೆಗಳು ನಡೆಯುವ ಸ್ಥಳಗಳಾಗಿದ್ದು, ಕಲ್ಲಡ್ಕವಂತೂ 1970 ರಿಂದಲೂ ಕೋಮು ಹಿಂಸಾಚಾರದ ಕೇಂದ್ರ ಸ್ಥಾನವೆನಿಸಿದೆ. ಇಂಥ ಸ್ಥಳಗಳ ಮೂಲಕವೇ ಸಾಮರಸ್ಯ ನಡಿಗೆಯನ್ನು ನಡೆಸಿರುವುದು, ದ.ಕ.ಜಿಲ್ಲೆಯ ನಾಗರೀಕರು ಎಷ್ಟೇ ಕೋಮುದಾಳಿಗೊಳಗಾದರೂ ತಾವು ಕೋಮು ಹಿಂಸೆ, ಅಪರಾಧಗಳನ್ನು ಮಾತಾಡದೇ ಸಹಿಸಿಕೊಂಡಿರುವ ಹೇಡಿಗಳಲ್ಲ ಎಂಬ ದಿಟ್ಟ ಸಂದೇಶವನ್ನು ಕೋಮುವಾದಿಗಳಿಗೆ ನೀಡಿದೆ.

ಒಂದೂವರೆ ಕಿ.ಮೀ.ಉದ್ದಕ್ಕೆ ಚಾಚಿದ್ದ ಮೆರವಣಿಗೆ

ಸಾಮರಸ್ಯ ನಡಿಗೆ ಆರಂಭವಾಗುವ ಬೆಳಿಗ್ಗೆ ಮೊದಲೇ ಒಂದು ಕಲ್ಲೆಸೆತ ಫರಂಗಿಪೇಟೆಯಲ್ಲಿ ನಡೆದುದನ್ನು ಬಿಟ್ಟರೆ ಬೇರೆ ಎಲ್ಲಿಯೂ ಅಹಿತಕರ ಘಟನೆಗಳು ನಡೆಯಲಿಲ್ಲ. ಜಿಲ್ಲಾಡಳಿತ ಮತ್ತು ಪೋಲೀಸ್ ಇಲಾಖೆ ನಡಿಗೆಯುದ್ದಕ್ಕೂ ಬಿಗಿ ಪೋಲೀಸ್ ಭದ್ರತೆ ಒದಗಿಸಿತ್ತು. ಬೆಳಿಗ್ಗೆ 9.45ಕ್ಕೆ ಆರಂಭವಾದ ಜಾಥಾ ಸಂಜೆ 6 ಗಂಟೆಗೆ ಮಾಣಿಯ ಸಭಾ ಸ್ಥಳಕ್ಕೆ ತಲುಪಿತು. ಮೊದಲೇ ತೀರ್ಮಾನಿಸಿದಂತೆಯೇ ಇದು ಮೌನ ಮೆರವಣಿಗೆಯಾಗಿತ್ತು. ಶಾಂತಿ, ಸೌಹಾರ್ದದ ಸಂದೇಶ ಸಾರುವ ನೂರಾರು ಪ್ಲೇ ಕಾರ್ಡುಗಳಲ್ಲಿ ಪಂಪ, ಬಸವಣ್ಣ, ನಾರಾಯಣ ಗುರು, ವಿವೇಕಾನಂದ, ಗಾಂಧಿ, ಕುವೆಂಪು, ಬೇಂದ್ರೆ ಮೊದಲಾದ ಖ್ಯಾತನಾಮರ ಶಾಂತಿ, ಪ್ರೀತಿ, ಸೌಹಾರ್ದದ ಸಂದೇಶಗಳಿದ್ದುವು. ಜಾಥಾ ಆರಂಭಕ್ಕೂ ಮುನ್ನ ಸಚಿವ ರಮಾನಾಥ ರೈಗಳು ಸಾಮರಸ್ಯದಲ್ಲಿ ಭಾಗಿಯಾಗಿರುವ ಎಲ್ಲರೂ ಶಿಸ್ತು, ಶಾಂತಿಯಿಂದ ರಸ್ತೆಯ ಒಂದೇ ಬದಿಯಲ್ಲಿ ಸಾಗುವಂತೆಯೂ, ಯಾವ ಪ್ರಚೋದಕ ಘಟನೆಗಳು ನಡೆದರೂ ನಿರ್ಲಕ್ಷಿಸಿ ಮೆರವಣಿಗೆ ಸಾಗಬೇಕು ಎಂಬ ಸೂಚನೆಯನ್ನು ಧ್ವನಿವರ್ಧಕದಲ್ಲಿ ಹೇಳಿದ್ದು ಬಿಟ್ಟರೆ, ಆರಂಭದಲ್ಲಿ ಯಾವ ಭಾಷಣಗಳೂ ಇರಲಿಲ್ಲ.

ಆದಾಗ್ಯೂ ಸಾಮರಸ್ಯ ನಡಿಗೆಗೆ ಬಂದ ಗಣ್ಯರ ಪರಿಚಯ ಮಾಡುವುದು, ಜಾಥಾಕ್ಕೆ ಬಂದು ಚಾಲನೆ ನೀಡುವ ಕಾರ್ಯಕ್ರಮವಂತೂ ಅಗತ್ಯವಾಗಿತ್ತು. ಸಾಗಣೆ ವಾಹನವೊಂದರ ಮೇಲಿನ ಅಟ್ಟವನ್ನು ವೇದಿಕೆಯನ್ನಾಗಿ ಸುಂದರವಾಗಿ ಅಲಂಕರಿಸಲಾಗಿತ್ತು. ಹಾರಿಬಿಡಲಿರುವ ಬಲೂನುಗಳ ಗೊಂಚಲನ್ನು ಅವುಗಳಿಗೆ ಕಟ್ಟಲಾಗಿತ್ತು. ರಮಾನಾಥ ರೈಯವರು ಕೆಳಗೆ ಕುಳಿತಲ್ಲಿಂದಲೇ ಮೈಕ್‌ನಲ್ಲಿ ಶಿಸ್ತಿನ ಬಗ್ಗೆ ಸೂಚನೆ ನೀಡಿದ ಬಳಿಕ, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ವೇದಿಕೆಯನ್ನು ಏರಿ, ಉದ್ಘಾಟನೆ ಈಗ ನಡೆಯಲಿದೆಯೆಂದೂ, ತಾನು ಹೆಸರು ಸೂಚಿಸುವ ಗಣ್ಯರು ವೇದಿಕೆಯನ್ನು ಏರಬೇಕೆಂದೂ ಆಹ್ವಾನಿಸಿದರು. ಸಚಿವ ರಮಾನಾಥ ರೈ, ಚಿತ್ರನಟ ಪ್ರಕಾಶ್ ರೈ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ, ಸಿಪಿಐ ರಾಜ್ಯ ಮುಖಂಡರಾದ ಸಿದ್ದನಗೌಡ ಪಾಟೀಲ, ಸಚಿವ ಯು.ಟಿ.ಖಾದರ್, ಮಾಜಿ ಸಚಿವ ಜೆಡಿಎಸ್ ಪಕ್ಷದ ಅಮರನಾಥ ಶೆಟ್ಟಿ, ದ.ಕ.ಜಿಲ್ಲೆಯ ಎಲ್ಲಾ ಹಾಲಿ ಕಾಂಗ್ರೆಸ್ ಶಾಸಕರು, ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಸಿಪಿಐನ ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹರೀಶ್ ಕುಮಾರ್, ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ರಾಜ್ಯ ರೈತ ಸಂಘದ ರವಿಕಿರಣ ಪುಣಚ, ದಸಂಸದ ಮುಖಂಡರಾದ ಎಂ.ದೇವದಾಸ್, ಎಲ್. ಚಂದು, ಅಹಿಂದ ಮುಖಂಡರಾದ ವಾಸುದೇವ ಬೋಳೂರು – ಉದ್ಘಾಟನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವೇದಿಕೆಯಲ್ಲಿದ್ದ ಗಣ್ಯರು ಪಾರಿವಾಳಗಳನ್ನು ಹಾಗೂ ಬಲೂನುಗಳನ್ನು ಆಕಾಶಕ್ಕೆ ಹಾರಿಬಿಡುವ ಮೂಲಕ ಜಾಥಾ ಉದ್ಘಾಟನೆಯಾಯಿತು. ಜಾಥಾದ ಜೊತೆಯಲ್ಲಿ ಬಂದ ನಾಲ್ಕಾರು ವಾಹನಗಳಿಗೆ ಅಳವಡಿಸಿದ್ದ ಸೌಹಾರ್ದ ಸಾರುವ ಸಾಹಿತ್ಯ, ಸಂಗೀತಗಳನ್ನು ಬಿಟ್ಟರೆ, ಭಾಗಿಯಾದ ನಾಗರೀಕರು ಯಾವುದೇ ಘೋಷಣೆಗಳಿಲ್ಲದೆ, ಪ್ಲೇಕಾರ್ಡ್ ಎತ್ತಿ ಹಿಡಿದು ಮೌನವಾಗಿ ಸಾಗಿದರು. ಡಿವೈಎಫ್ಐನ ಯುವ ಸಂಗಾತಿಗಳು ಒಂದೆಡೆ ಹಾಡುತ್ತಿದ್ದ ಸೌಹಾರ್ದ ಗೀತೆಗಳು ಮಾತ್ರ ಈ ಮೆರವಣಿಗೆಯಲ್ಲಿದ್ದ ಮನುಷ್ಯ ಧ್ವನಿಗಳಾಗಿದ್ದವು.

ಮೆರವಣಿಗೆ ದಾರಿಯುದ್ದಕ್ಕೂ ತುಂಬೆ, ಬ್ರಹ್ಮರಕೂಟ್ಲು, ಪೊಳಲಿ ದ್ವಾರ, ಪಾಣೆಮಂಗಳೂರು, ಸೂರಿಕುಮೇರು, ಮಾಣಿಗಳಲ್ಲಿ ಅಲ್ಲಿನ ಜನರೇ ಶಾಮಿಯಾನ ಹಾಕಿ ಕಲ್ಲಂಗಡಿ ಹಣ್ಣು, ಪಾನೀಯ, ಮಜ್ಜಿಗೆ ನೀರನ್ನು ಜಾಥಾದ ಪಾದಚಾರಿಗಳಿಗೆ ನೀಡಿ ಸ್ವಾಗತಿಸಿದರು. ಅಪರಾಹ್ನ 2 ಗಂಟೆಗೆ ಜಾಥಾ ಮೇಲ್ಕಾರು ತಲುಪಿದಾಗ ಅಲ್ಲಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಕಲ್ಲಡ್ಕದಲ್ಲಿ ಜಾಥಾ ಸಾಗುವಾಗ ಪೋಲೀಸರ ಪಡೆಯ ಸಾಲುಗಳೇ ವೀಕ್ಷಕರಾಗಿ ಭಾಗಿಯಾಗಿದ್ದರು. ದೀರ್ಘ ನಡೆಯಲಾರದ ಕೆಲವರು ಮೇಲ್ಕಾರಿನಲ್ಲೇ ವಿಶ್ರಾಂತಿ ತೆಗೆದುಕೊಂಡಿದ್ದರೆ ಉಪ್ಪಿನಂಗಡಿ, ಸುಳ್ಯ, ಪುತ್ತೂರಿನಿಂದ ಬಂದ ನಾಗರಿಕರು ಮೇಲ್ಕಾರಿನಲ್ಲಿ ಹೊಸದಾಗಿ ಜಾಥಾಕ್ಕೆ ಸೇರಿಕೊಂಡರು. ಆರು ಸಾವಿರದಷ್ಟು ಸರಾಸರಿ ಜನ ನಿರಂತರ ಜಾಥಾದಲ್ಲಿ ಕಾಣಿಸಿಕೊಂಡಿದ್ದರೆ, ಕಾರ್ಯಕ್ರಮದಲ್ಲಿ ಒಟ್ಟಾಗಿ ಭಾಗವಹಿಸಿದವರು ಹತ್ತು ಸಾವಿರ ಇರಬಹುದು.

ಮೊದಲೇ ಕಾಲು ನೋವಿನಿಂದ ಬಿ.ರಮಾನಾಥ ರೈ ಬಳಲುತ್ತಿದ್ದರೂ ಫರಂಗಿಪೇಟೆಯಿಂದ ಮೇಲ್ಕಾರಿನವರೆಗಿನ 14 ಕಿ.ಮೀ.ದೂರದ ನಡಿಗೆಯನ್ನು ಕೊನೆಯವರೆಗೂ ಹಟಹಿಡಿದು ನಡೆದೇ ಬಿಟ್ಟರು. ಯುವಜನರಿದ್ದ ಮುಂದಿನ ಸಾಲುಗಳು ರೈ ಅವರಿಗಿಂತ 2 ಕಿ.ಮೀ ಬಿ.ಸಿ.ರೋಡ್ ಪೇಟೆಯಲ್ಲಿ ರೈಗಳು ಬರುವ ಸಲುವಾಗಿ ಒಂದು ಗಂಟೆ ಮೀರಿ ಕಾಯಬೇಕಾಯಿತು. ಊಟದ ಬಳಿಕ ರೈಯವರನ್ನು ಜನ ನಡೆಯಬಿಡಲಿಲ್ಲ.

“ಕೊಲೆಯನ್ನು ರಾಜಕೀಯಕ್ಕೆ ಬಳಸುವವರು ರಾಕ್ಷಸರು”

ರಾಜಸ್ಥಾನದಲ್ಲಿ ಇರಲಿ, ಹೊನ್ನಾವರದಲ್ಲೇ ಇರಲಿ, ಕೊಲೆಯಂತಹ ಖಂಡನೀಯ ಅಪರಾಧ ಕೃತ್ಯಗಳನ್ನು ರಾಜಕೀಯಕ್ಕೆ ಬಳಸುವವರು ರಾಕ್ಷಸರು. ನಮ್ಮಂತಹ ಇನ್ನೊಬ್ಬ ಮನುಷ್ಯನನ್ನು ಕೊಂದಾಗ ನಮಗೆ ನೋವು, ವೇದನೆ ಆಗಬೇಕು, ಆತಂಕವಾಗಬೇಕು. ಆದರೆ ಈ ತರಹದ ಸನ್ನಿವೇಶಗಳನ್ನು ಇಟ್ಟುಕೊಂಡು ಸಮಾಜದಲ್ಲಿ, ಯುವಕರಲ್ಲಿ ದ್ವೇಷ, ಹಿಂಸೆ ಬಿತ್ತುವ ರಾಜಕೀಯದ ವಿರುದ್ಧ ನಾವು ಸಾಮರಸ್ಯದ ನಡೆಯನ್ನು ನಡೆಯಬೇಕಿದೆ. ಎಂಬುದಾಗಿ ಬಹುಭಾಷ ಚಿತ್ರನಟ ಪ್ರಕಾಶ್ ರೈ ಹೇಳಿದರು.

ಮಾಣಿ ನೇರಳಕಟ್ಟೆಯಲ್ಲಿ ಸಾಮರಸ್ಯ ನಡಿಗೆಯ ಸಮಾರೋಪ ಸಮಾರಂಭದ ವೇದಿಕೆಯಲ್ಲಿ ಸಚಿವ ರಮಾನಾಥ ರೈಯವರು ಮಾತನಾಡಿ ಬಳಿಕ ಎರಡನೆಯ ಭಾಷಣಕಾರರಾಗಿ ಅವರು ಮಾತನಾಡಿದರು.

ಕಾಡನ್ನು ನೋಡಿ ನಾವು ಕಲಿಯಬೇಕಿದೆ. ಅಲ್ಲಿ ಮಹಾವೃಕ್ಷಗಳಿವೆ. ಕಿರು ವೃಕ್ಷಗಳಿವೆ. ಅವುಗಳ ಆಶ್ರಯದಲ್ಲಿ ಪ್ರಾಣಿ, ಪಕ್ಷಿ, ಕ್ರಿಮಿ ಕೀಟ, ಜಂತು ಎಲ್ಲದಕ್ಕೂ ಬಾಳಲು ಅವಕಾಶವಿದೆ. ಭಾರತದಲ್ಲೂ ಹಲವು ಧರ್ಮ, ಜಾತಿ, ಭಾಷೆಗಳಿವೆ. ಇವೆಲ್ಲವನ್ನೂ ಮನುಷ್ಯರಾದ ನಾವೇ ಹುಟ್ಟಿಸಿದ್ದೇವೆ ಹೊರತು ಅವುಗಳು ಮನುಷ್ಯನನ್ನು ಹುಟ್ಟಿಸಲಿಲ್ಲ. ಯಾವ ಧರ್ಮವೂ ಕೊಲ್ಲು ಎನ್ನುವುದಿಲ್ಲ. ಕೊಲ್ಲು ಎನ್ನುವುದು ಧರ್ಮವೇ ಅಲ್ಲ – ಎಂಬುದಾಗಿ ಪ್ರಕಾಶ್ ರೈ ಅವರು ಆಡಿದ ಮಾತುಗಳು ಕೇಳುಗರ ಮನ ಮುಟ್ಟುವಂತಿತ್ತು.

ನಾವು ಸರ್ವಾಧಿಕಾರಿ ದೇಶದಲ್ಲಿದ್ದೇವೋ?: ಜಿ.ವಿ.ಎಸ್

ದ.ಕ.ಜಿಲ್ಲೆ ಅಲ್ಲ, ಕರಾವಳಿ ಮಾತ್ರ ಅಲ್ಲ, ಇಡೀ ದೇಶದಲ್ಲಿ ಭಯದ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ. ಆಳುವವರನ್ನು ವಿರೋಧ ಮಾಡಿದರೆ ಅವರನ್ನು ಸಾಯಿಸಬೇಕು ಎಂಬ ಅಪಾಯಕಾರಿ ಸ್ಥಿತಿಗೆ ದೇಶ ಬಂದಿದ್ದು, ಪ್ರಜಾಪ್ರಭುತ್ವ ದೇಶದಲ್ಲಿ ಇದ್ದೇವಾ? ಸರ್ವಾಧಿಕಾರಿ ದೇಶದಲ್ಲಿ ಇದ್ದೇವಾ? ಎಂಬ ಪ್ರಶ್ನೆ ಕಾಡಲಾರಂಭಿಸಿದೆ ಎಂಬುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಆತಂಕ ವ್ಯಕ್ತಪಡಿಸಿದರು.



ಪ್ರಕಾಶ್ ರೈ, ಕಮಲಹಾಸನ್ ಮೊದಲಾದ ಕಲಾವಿದರು ತಮ್ಮ ವಿಚಾರವನ್ನು ಮಂಡಿಸಿದರೆ ಬೆದರಿಕೆ ಹಾಕಲಾಗುತ್ತಿದೆ. 'ಪದ್ಮಾವತಿ' ಚಿತ್ರದ ನಟಿ ದೀಪಿಕಾ ಪಡುಕೋಣೆ ಮೂಗು ಕತ್ತರಿಸಿದವರಿಗೆ ಹಾಗೂ ಅದರ ನಿರ್ದೇಶಕರ ತಲೆ ಕಡಿದವರಿಗೆ ಲಕ್ಷ, ಕೋಟಿ ರೂ.ಗಳ ಘೋಷಣೆ ಹೊರಡಿಸಲಾಗಿದೆ. ಆದರೆ ಈ ಘೋಷಣೆ ಕೊಟ್ಟವರನ್ನು ಕಾನೂನುಕ್ರಮಕ್ಕೆ ಒಳಪಡಿಸಿದ ಯಾವ ವರದಿಗಳೂ ಬಂದಿಲ್ಲ.

ಇವತ್ತು ಹೊನ್ನಾವರ ಶಿರಸಿಗಳಲ್ಲಿ ಗಲಭೆ ಎಬ್ಬಿಸಲಾಗಿದೆ. ಹೊನ್ನಾವರದಲ್ಲಿ ಮರಣ ಹೊಂದಿದ ವ್ಯಕ್ತಿಯ ಪೋಸ್ಟ್ ಮಾರ್ಟಮ್ ವರದಿಯನ್ನು ಪ್ರಖ್ಯಾತ ಮಣಿಪಾಲ ಕಸ್ತೂರ್ಬ ಆಸ್ಪತ್ರೆಯ ಪರಿಣತ ವೈದ್ಯರೇ ನೀಡಿದ್ದು, ಆ ವ್ಯಕ್ತಿಯ ಸಾವಿಗೆ ಯಾವುದೇ ಹಲ್ಲೆ, ಇರಿತ ಕಾರಣವಲ್ಲವೆಂದು ತಿಳಿಸಿದೆ. ಆದರೆ ಕೋಮುವಾದಿಗಳು ತನಿಖೆ ಮೊದಲೇ ಸಾವಿಗೆ ಕಾರಣವನ್ನು ಸುಳ್ಳು, ಸುಳ್ಳೇ ಪ್ರಚಾರಗೊಳಿಸಿ ಅವರನ್ನು ಪ್ರಚೋದಿಸಿ ಕೋಮುಗಲಭೆಗೆ ಇಳಿಸುತ್ತಿದ್ದಾರೆ. ಅಲ್ಲಿನ ಸಂಸದ ಕೇಂದ್ರ ಸಚಿವ ಅನಂತ ಕುಮಾರ ಹೆಗಡೆ ಬೆನ್ನಿಗಿದ್ದಾರೆ. ಅದೇ ರೀತಿ ಹಲವು ದಿನಗಳ ಹಿಂದೆ ಹುಣಸೂರಿನಲ್ಲಿ ಹನುಮ ಜಯಂತಿಯ ಮೆರವಣಿಗೆಯ ನೆಪದಲ್ಲಿ ಮೈಸೂರಿನ ಸಂಸದ ಪ್ರತಾಪಸಿಂಹ ದಾಂಧಲೆ ನಡೆಸಿ ಅಲ್ಲಿನ ಜನರನ್ನು ಕೋಮುವಾದಿ ನೆಲೆಯಲ್ಲಿ ಪ್ರಚೋದಿಸಿದ್ದಾರೆ ಎಂದು ಜಿ.ವಿ.ಶ್ರೀರಾಮರೆಡ್ಡಿ ನಿರೂಪಿಸಿದರು.

ಧರ್ಮ, ದೇವರು, ದೇಶಭಕ್ತಿ ಹೆಸರಿನಲ್ಲಿ ನಮ್ಮ ರಾಜ್ಯದಲ್ಲೂ ಅಸಹಿಷ್ಣುತೆ, ಆತಂಕದ ವಾತಾವರಣವನ್ನು ಕೋಮುವಾದಿಗಳು ಸೃಷ್ಟಿಸಿದ್ದಾರೆ. ಇಂದಿನ ಸಾಮರಸ್ಯ ನಡಿಗೆ ಈ ನಿಟ್ಟಿನಲ್ಲಿ ಗಮನಾರ್ಹವಾದ ಪ್ರತಿಭಟನಾ ಕಾರ್ಯಕ್ರಮ. ಇದರ ಮುಂದುವರಿಕೆ ಎಂಬಂತೆ ಸೆಕ್ಯೂಲರ್ ಪಕ್ಷಗಳು, ಸಂಘಟನೆಗಳು, ಗಣ್ಯರು ಒಂದಾಗಿ ಬರುವ ಜನವರಿ 30 ರಂದು ಬಸವಕಲ್ಯಾಣದಿಂದ ಚಾಮರಾಜ ನಗರದ ವರೆಗೂ ಕಾರವಾರದಿಂದ ಮಡಿಕೇರಿಯ ವರೆಗೂ ಸೌಹಾರ್ದ ಮಾನವ ಸರಪಳಿ ಮಾಡಲು ರಾಜ್ಯದ ಸೌಹಾರ್ದಕ್ಕಾಗಿ ಕರ್ನಾಟಕ ಎಂಬ ಸಂಘಟನೆ ಮೂಲಕ ಆಹ್ವಾನ ನೀಡಲಾಗಿದೆ. ಇದನ್ನೂ ರಾಜ್ಯದ ಜನತೆ ಯಶಸ್ವಿಗೊಳಿಸಿ ಕೋಮುವಾದಿಗಳಿಗೆ ಉತ್ತರ ನೀಡಲು ಜಿ.ವಿ.ಶ್ರೀರಾಮರೆಡ್ಡಿ ಕರೆನೀಡಿದರು.

ಭೂಮಿ ಬೇಕಾದುದು ಚೋಮನಿಗೋ ರಾಮನಿಗೋ? : ಡಾ.ಸಿದ್ದನಗೌಡ ಪಾಟೀಲ

ಶಿವರಾಮ ಕಾರಂತರ ಕೃತಿಯ ಚೋಮ ದಶಕಗಳಿಂದಲೂ ತನಗೆ ಒಂದು ತುಂಡು ಭೂಮಿಗಾಗಿ ದೀನನಾಗಿ ಬೇಡುತ್ತಿದ್ದಾನೆ. ಒಬ್ಬ ರಾಮನಿಗೆ ಭೂಮಿ ಮಂದಿರಕ್ಕಾಗಿ ಹೋರಾಡುವವರು ಕೋಟಿಗಟ್ಟಲೆ ಚೋಮರಿಗೆ ಭೂಮಿ ಕೊಡಿಸಲು ಹೋರಾಟ ಮಾಡಿದ ಒಂದಾದರೂ ದಾಖಲೆ ಇದೆಯೇ? ಎಂಬುದಾಗಿ ಸಿಪಿಐ ರಾಜ್ಯ ಮುಖಂಡರಾದ ಡಾ.ಸಿದ್ದನಗೌಡ ಪಾಟೀಲ ಪ್ರಶ್ನಿಸಿದರು.

ನಮಗೆ ಬೇಕಾದುದು ಬಿಲ್ಲು ಹಿಡಿದ ರಾಮನಲ್ಲ, ಹುಲ್ಲು ಹಿಡಿದ ರಾಮ. ದನಗಳಿಗೆ ಹುಲ್ಲಿಕ್ಕಿ ಸಾಕುವ ರಾಮ. ಪ್ರೀತಿ, ಕರುಣೆಯ ರಾಮ. ನಮಗೆ ಪಾಕಿಸ್ತಾನದ ಬಗೆಗೂ ಪ್ರೀತಿ ಇರಬೇಕೇ ಹೊರತು ದ್ವೇಷವಲ್ಲ. ನೆರೆಕರೆಯ ನಾವುಗಳು ಅಣುಬಾಂಬುಗಳನ್ನು ನಿರ್ಮಿಸುತ್ತಾ ಕೊನೆಗೂ ಯಾರಾದರೂ ಸ್ಫೋಟಿಸಿದಲ್ಲಿ ಸಾಯುವವರು, ನಾಶವಾಗುವವರು ನಾವೇ ಅಲ್ಲವೇ ಎಂದು ಪಾಟೀಲರು ಆತಂಕ ವ್ಯಕ್ತಪಡಿಸಿದರು.

ಸಾಮರಸ್ಯ ನಡಿಗೆ ರಾಜ್ಯದ ಶಾಂತಿ ಸೌಹಾರ್ದಕ್ಕೆ ಮುನ್ನುಡಿಯಾಗಲಿ

ದ.ಕ.ಜಿಲ್ಲೆಯಲ್ಲಿ ಕೋಮುವಾದಿಗಳು 2 ತಿಂಗಳ ಹಿಂದೆ ನಡೆದ ಟಿಪ್ಪು ಜಯಂತಿಯ ಸಂದರ್ಭದಲ್ಲಿ ಪ್ರಕ್ಷುಬ್ಧತೆಯನ್ನು ಉಂಟು ಮಾಡಿದ್ದರು. ಮುಸ್ಲಿಂ ಗೆಳೆಯನೊಬ್ಬನ ಬೈಕ್‌ನ ಹಿಂಭಾಗದಲ್ಲಿ ಕುಳಿತಿದ್ದ ನಾವೂರು ಹರೀಶ್ ಪೂಜಾರಿ ಎಂಬ ಯುವಕ ಕೊಲೆಗಡುಕರ ತಲವಾರಿಗೆ ಬಲಿಯಾಗಿದ್ದ. ಹಿಂದೂ ಕೋಮುವಾದಿಗಳು ಇದು ಮುಸ್ಲಿಂ ಕೋಮುವಾದಿಗಳ ಕೃತ್ಯ ಎಂದು ಪ್ರಚಾರ ಮಾಡಿದ್ದರು. ಆದರೆ ➜

ತುಮಕೂರು ಸಿಪಿಐ(ಎಂ) 22ನೇ ಜಿಲ್ಲಾ ಸಮ್ಮೇಳನ

"ನವ ಕರ್ನಾಟಕದ ಮಂತ್ರ ಜಪಿಸುತ್ತ ಕುರ್ಚಿ ಹಿಡಿಯುವ ಕನಸು" : ಜಿ.ಎನ್. ನಾಗರಾಜ್

– ಎಸ್. ರಾಘವೇಂದ್ರ –



ನವಕರ್ನಾಟಕ ಯಾತ್ರೆ ನಡೆಸುತ್ತಿರುವ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಕುರ್ಚಿ ಹಿಡಿಯುವುದೇ ಚಿಂತೆಯಾಗಿದ್ದು ಜನರ ಸಮಸ್ಯೆಗಳ ಕುರಿತು ಕಿಂಚಿತ್ತೂ ಆಲೋಚಿಸುತ್ತಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ್ ಟೀಕಿಸಿದರು.

ತುಮಕೂರು ನಗರದ ಟೌನ್‌ಹಾಲ್ ಆವರಣದಲ್ಲಿ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಿ ಕೋಮುವಾದದ ವಿರುದ್ಧ ಮತ್ತು ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಆಗ್ರಹಿಸಿ ಹಮ್ಮಿಕೊಂಡಿದ್ದ ಸಿಪಿಐ(ಎಂ) ಪಕ್ಷದ 16ನೇ ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ ಮೂರು ಪಕ್ಷಗಳ ಮುಖಂಡರು ಯಾತ್ರೆ ನಡೆಸುತ್ತಿದ್ದಾರೆ. ನವಕರ್ನಾಟಕದ ಮಂತ್ರೋಚ್ಚಾರಣೆ ಜೋರಾಗಿಯೇ ಇದೆ. ಮಾಜಿ ಮುಖ್ಯಮಂತ್ರಿಗಳು, ಮಾಜಿ ಪ್ರಧಾನಿಗಳು ಮತ್ತು ಹಾಲಿ ಮುಖ್ಯಮಂತ್ರಿಗಳು ವಿಕಾಸ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ. ಆದರೆ ಈ ಯಾತ್ರೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಯಾತ್ರೆಯಲ್ಲಿ ತಿರುಗುತ್ತಿರುವವರಿಗೆ ಜನರ ಸಮಸ್ಯೆಗಳೇ ಗೊತ್ತಿಲ್ಲ. ನವ ಕರ್ನಾಟಕದ ಮಂತ್ರ ಜಪಿಸುತ್ತ ಶೀಘ್ರವೇ ಕುರ್ಚಿ ಹಿಡಿಯುವ ಕನಸು ಕಾಣುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಜನರ ಪರಿವರ್ತನೆಯಾಗದೆ ನವ ಕರ್ನಾಟಕ ಪರಿವರ್ತನೆ ಇಲ್ಲ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನಡೆಸುತ್ತಿರುವ ಯಾತ್ರೆ ಅಧಿಕಾರದ ಚುಕ್ಕಾಣಿ ಹಿಡಿಯುವುದೇ ಆಗಿದೆ. ಜನರ ಮೂಗಿಗೆ ತುಪ್ಪ ಸವರಿ ಅವರನ್ನು ದಿಕ್ಕುತಪ್ಪಿಸುವ ಕೆಲಸ ಮಾಡಲಾಗುತ್ತಿದೆ. ರೈತರು, ಕಾರ್ಮಿಕರು ಮತ್ತು ಮಹಿಳೆಯರ ಬದುಕು ಮೂರಾಬಟ್ಟೆಯಾಗಿದೆ. ಇದರ ಬಗ್ಗೆ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಚಕಾರ ಎತ್ತುತ್ತಿಲ್ಲ. ಜನರ ಪರಿವರ್ತನೆಯಾಗದೆ ನವ ಕರ್ನಾಟಕ ಪರಿವರ್ತನೆ ಆಗುವುದಿಲ್ಲ. ಇದನ್ನು ಎಲ್ಲ ಪಕ್ಷಗಳು ಅರ್ಥ ಮಾಡಿಕೊಳ್ಳಬೇಕು ಎಂದು ತಾಕೀತು ಮಾಡಿದರು.



ಎನ್.ಕೆ. ಸುಬ್ರಮಣ್ಯ

ದೇಶದಲ್ಲಿ ಸಾವಿರಾರು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮಾತನಾಡುತ್ತಿಲ್ಲ. ಸ್ವಾಮಿನಾಥನ್ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ರೈತರ ಸಾಲ ಮನ್ನಾ ಮಾಡುವ ಕಡೆ ಗಮನ ಕೊಡುತ್ತಿಲ್ಲ. ಬೆಲೆ ಏರಿಕೆ ನಿಯಂತ್ರಿಸಲು ಆಗಿಲ್ಲ. ಎಲ್ಲಾ ಸಚಿವರ ಎದೆಗಳು ಕಲ್ಲಾಗಿವೆ. ಇಂತಹ ಕಲ್ಲುಹೃದಯದ ಮನಸ್ಥಿತಿ ಇರುವ ಮಂತ್ರಿಗಳನ್ನು ರೈತರು, ಕಾರ್ಮಿಕರು ಮತ್ತು ಅಸಂಘಟಿತರು ಬದಲಾವಣೆ ಮಾಡಬೇಕಾಗಿದೆ ಎಂದು ಹೇಳಿದರು.

ನವ ಕರ್ನಾಟಕ ಪರಿವರ್ತನೆ ಯಾತ್ರೆ ಕೈಗೊಂಡಿರುವ ಯಡಿಯೂರಪ್ಪ ಹಿಂದೆ ಮುಖ್ಯಮಂತ್ರಿಯಾಗಿದ್ದರು. ಅವರ ಸಚಿವ ಸಂಪುಟ ಖದೀಮರಿಂದ ಕೂಟಿತ್ತು. ರಿಯಲ್ ಎಸ್ಟೇಟ್ ಕುಳಗಳೇ ತುಂಬಿ ಹೋಗಿದ್ದರು. ಮುರುಗೇಶ್ ನಿರಾಣಿ, ಕಟ್ಟಾ ಸುಬ್ರಮಣ್ಯ ನಾಯ್ಡು, ಕೃಷ್ಣಯ್ಯಶೆಟ್ಟಿ ಸೇರಿದಂತೆ ಬಹುತೇಕರು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡಿದ್ದರು. ಈಗಿನ ಸಿದ್ದರಾಮಯ್ಯ ಸಚಿವ ಸಂಪುಟದ ಡಿ.ಕೆ.ಶಿವಕುಮಾರ್ ಸಹ ಇದೇ ಹಾದಿಯಲ್ಲಿ ಇದ್ದಾರೆ. ರಿಯಲ್ ಎಸ್ಟೇಟ್ ನಡೆಸದ ಶಾಸಕರಿಗೆ ಟಿಕೆಟ್ ಇಲ್ಲವಾಗುತ್ತದೆ. ಸಾವಿರಾರು ಕೋಟಿ ಕಪ್ಪ ನೀಡುವವರಿಗೆ ಟಿಕೆಟ್ ನೀಡಲಾಗುತ್ತಿದೆ. ಅಶೋಕ್ ಖೇಣಿಯಂತಹ ಕುಳವೂ ಇಂದು ಶಾಸರಾಗಿದ್ದಾರೆ. ಭ್ರಷ್ಟಾಚಾರವೇ ತುಂಬಿ ತುಳುಕುತ್ತಿದೆ ಎಂದು ವಿಷಾದಿಸಿದರು.

"ರಾಜಕಾರಣಿಗಳು ರಾಕ್ಷಸರು, ಜನ ದೇವರು"

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ ಮಾತನಾಡಿ ರಾಜಕಾರಣಿಗಳೆಲ್ಲರೂ ರಾಕ್ಷಸರು. ಜನರೆಲ್ಲ ದೇವರು ಇದ್ದಂತೆ. ದೇವರುಗಳು ಐದು ವರ್ಷಕ್ಕೊಮ್ಮೆ ಮತ ನೀಡಿ ತಥಾಸ್ತು ಅನ್ನುತ್ತಾರೆ. ಆ ಮೇಲೆ ಆ ರಾಜಕಾರಣಿ ರಾಕ್ಷಸರನ್ನು ಮುಗಿಸಲು ಜನರು ಮತ್ತೆ ಅವತಾರ ಎತ್ತಬೇಕು. ಮತದಾರ ದೇವರುಗಳು ಸರಿಯಾದ ನಿರ್ಧಾರ ಮಾಡದಿದ್ದರೆ ರಾಕ್ಷಸರಿಂದ ತೊಂದರೆ ತಪ್ಪಿದ್ದಲ್ಲ ಎಂದು ತಿಳಿಸಿದರು.

ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ಆರ್ಥಿಕ ವ್ಯವಸ್ಥೆ ದಿವಾಳಿ ಎದ್ದಿದೆ. ನೋಟು ರದ್ದು ಮತ್ತು ಜಿಎಸ್‌ಟಿ ಜಾರಿಯಿಂದ ಜನರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬ್ಯಾಂಕುಗಳನ್ನು ಉಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಬ್ಯಾಂಕುಗಳು ಅವನತಿಯ ಹಾದಿ ಹಿಡಿದಿವೆ. ಹಲವು ಉದ್ದಿಮೆಗಳು ಮುಚ್ಚಿ ಹೋಗಿವೆ. ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವವರು ಇಲ್ಲವಾಗಿದೆ. ಬ್ಯಾಂಕಿನಿಂದ ಸಾಲ ಪಡೆದು ಬಂಡವಾಳ ಹೂಡಿದರೆ ವ್ಯಾಪಾರ ಆಗುವುದಿಲ್ಲ ಎಂಬ ಸತ್ಯ ಎಲ್ಲರಿಗೂ ತಿಳಿದಿದೆ. ಬ್ಯಾಂಕುಗಳಲ್ಲಿ ಹಣವಿದೆ. ಸಾಲ ಪಡೆಯುವವರೇ ಇಲ್ಲವಾಗಿದೆ ಎಂದು ಹೇಳಿದರು.

ಬಿಜೆಪಿ ಸರ್ಕಾರ ಜಾತಿ, ಧರ್ಮದ ಹೆಸರಿನಲ್ಲಿ ಅಣ್ಣತಮ್ಮಂದಿರ ನಡುವೆ ಜಗಳ ಹಚ್ಚುತ್ತಿದೆ. ಯೋಧರನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿದೆ. ದೇಶವನ್ನು ಒಡೆಯುವ ಹಂತಕ್ಕೆ ಬಿಜೆಪಿ ಬಂದಿದೆ. ರಾಜ್ಯಗಳನ್ನು ಇಬ್ಭಾಗವಾಗಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಇದನ್ನು ತಡೆಯಲು ಜನರು ಮುಂದಾಗ ಬೇಕು ಎಂದು ಸಲಹೆ ನೀಡಿದರು.

ಜನಪರ ಚಿಂತಕ ಕೆ.ದೊರೈರಾಜ್ ಮಾತನಾಡಿ ಸರ್ಕಾರದ ನೀತಿಗಳು ಜನರನ್ನು ಮೋಸಗೊಳಿಸುತ್ತಿವೆ. ಜನ ನಾಯಕರು ಮನರಂಜನೆಯಲ್ಲಿ ತೊಡಗಿದ್ದಾರೆ. ಇಂತಹ ಮನರಂಜನೆಗೆ ಮಾಧ್ಯಮಗಳು ಹೆಚ್ಚು ಅವಕಾಶ ನೀಡುತ್ತಿವೆ. ಯಾವುದೇ ಪಕ್ಷದ ರಾಜಕಾರಣಿಗಳು ಪಾಲಿಸಿಗಳ ಕುರಿತು ಮಾತನಾಡುತ್ತಿಲ್ಲ ಎಂದು ಹೇಳಿದರು.

ಕಾರ್ಮಿಕರು, ರೈತರು ಸೇರಿ ರಾಜಕೀಯ ಪ್ರವೇಶ ಮಾಡಬೇಕು. ಇಲ್ಲದಿದ್ದರೆ ಸಮಸ್ಯೆಗಳು ತಲೆದೋರುತ್ತವೆ. ಸಂವಿಧಾನದ ಆಶಯಗಳನ್ನು ಈಡೇರಿಸಲು ಮುಂದಾಗುವ ಪಕ್ಷಗಳಿಗೆ ಬೆಂಬಲ ಕೊಡಬೇಕು ಎಂದು ತಿಳಿಸಿದರು.

ಬಹಿರಂಗ ಸಭೆಯಲ್ಲಿ ಮುಖಂಡರಾದ ಬಿ.ಉಮೇಶ್, ಸೈಯದ್ ಮುಜೀಬ್, ಎನ್.ಕೆ.ಸುಬ್ರಮಣ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಂತ ರೈತ ಸಂಘದ ಸಂಚಾಲಕ ಅಜ್ಜಪ್ಪ, ಮುಖಂಡರಾದ ನೌಷಾದ್ ಸೆಹಗನ್, ನಗರ ಕಾರ್ಯದರ್ಶಿ ಎಸ್.ರಾಘವೇಂದ್ರ, ಷಹತಾಜ್ ಹಾಜರಿದ್ದರು. ಎಸ್.ರಾಘವೇಂದ್ರ ಸ್ವಾಗತಿಸಿ, ಷಣ್ಮುಖಪ್ಪ ನಿರೂಪಿಸಿದರು. ಲೋಕೇಶ್ ವಂದಿಸಿದರು.

ಸಮಾರೋಪ

ತುಮಕೂರು ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳವಳಿಗೆ ದೀರ್ಘ ಕಾಲದ ಇತಿಹಾಸವಿದ್ದು ಈ ದೇಶದ ಸ್ವಾತಂತ್ರ್ಯ ಚಳವಳಿಗೆ ಇಲ್ಲಿನ ಕಮ್ಯುನಿಸ್ಟ್ ಹೋರಾಟಗಾರರು ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ತಿಳಿಸಿದರು.

ಅವರು ತುಮಕೂರಿನ ಸಂಕಲ್ಪ ಸಮುದಾಯ ಭವನದಲ್ಲಿ ಎರಡು ದಿನಗಳ ಕಾಲ ನಡೆದ ಸಿಪಿಐ(ಎಂ) ಪಕ್ಷದ 16ನೇ ಜಿಲ್ಲಾ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಚಳುವಳಿಗಳು ಸಾಕಷ್ಟು ಬೆಳೆದು ಬರುತ್ತಿದ್ದು, ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಕಟ್ಟಬೇಕಾಗಿದೆ. ಚುನಾವಣೆಗಳು ಬಂದಾಗ ರಾಜಕೀಯ ಪಕ್ಷಗಳು ಜನತೆಗೆ ಹಣ ಮೊದಲಾದ ಆಮಿಷಗಳನ್ನು ಒಡ್ಡುವ ಮೂಲಕ ಜನರ ನೈಜ ಸಮಸ್ಯೆಗಳನ್ನು ಮರೆಮಾಚುತ್ತಿವೆ. ನಿರುದ್ಯೋಗ, ಬೆಲೆ ಏರಿಕೆ, ಜಾತಿ ತಾರತಮ್ಯದ ವಿರುದ್ಧ ಪಕ್ಷ ನಿರಂತರವಾಗಿ ಹೋರಾಟಗಳನ್ನು ನಡೆಸಿಕೊಂಡು ಬರುತ್ತಿದ್ದು, ಬಡಜನತೆಗೆ ನಿವೇಶನ,, ಅವರ ಉತ್ತಮ ಬದುಕಿಗಾಗಿ ಸರ್ಕಾರಗಳು ಶ್ರಮ ವಹಿಸಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಗಳಿಂದ ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಗಂಭೀರ ಪರಿಣಾಮ ಬೀರಿದೆ. ಬ್ಯಾಂಕು ಮುಂದೆ ದಿವಾಳಿಯಾಗುವುದನ್ನು ತಪ್ಪಿಸುವ ನೆಪದಲ್ಲಿ ಠೇವಣಿ ಇಟ್ಟಿರುವ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಒಂದು ಲಕ್ಷಕ್ಕಿಂತ ಹೆಚ್ಚು ಹಣ ಖಾತೆಯಲ್ಲಿದ್ದರೆ ಅದಕ್ಕೆ ಯಾವುದೇ ಭದ್ರತೆ ಇರುವುದಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ, ರಾಜ್ಯ ಸಮಿತಿ ಸದಸ್ಯ ಸೈಯದ್ ಮುಜೀಬ್, ಬಿ.ಉಮೇಶ್, ಸಿ.ಅಜ್ಜಪ್ಪ, ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಉಪಸ್ಥಿತರಿದ್ದರು. ಜಿಲ್ಲಾ ಸಮಿತಿ ಸದಸ್ಯ ಷಣ್ಮುಖಪ್ಪ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.


ನೂತನ ಸಮಿತಿ ಆಯ್ಕೆ:

ಪಕ್ಷದ 16ನೇ ಜಿಲ್ಲಾ ಸಮ್ಮೇಳನವು ಮುಂದಿನ ಮೂರು ವರ್ಷಗಳಿಗೆ 15 ನೂತನ ಸಮಿತಿಯನ್ನು ಆಯ್ಕೆ ಮಾಡಿತು. ಜಿಲ್ಲಾ ಕಾರ್ಯದರ್ಶಿಯಾಗಿ ಎನ್.ಕೆ.ಸುಬ್ರಮಣ್ಯ ಪುನರಾಯ್ಕೆ ಮಾಡಿತು. ಜಿಲ್ಲಾ ಸಮಿತಿ ಸದಸ್ಯರಾಗಿ ಸೈಯದ್ ಮುಜೀಬ್, ಬಿ.ಉಮೇಶ್, ನೌಷಾದ್ ಸೆಹಗನ್, ಸಿ.ಅಜ್ಜಪ್ಪ, ಈ.ಶಿವಣ್ಣ, ಆನಂದ್, ನರಸಿಂಹಮೂರ್ತಿ, ಷಣ್ಮುಖಪ್ಪ, ಶ್ರೀಧರ್ ಮತ್ತು ಅಬ್ದುಲ್ ಮುನಾಫ್, ಮಾಲ, ಎಸ್‌ಡಿಪಿ ಆಯ್ಕೆ ಮಾಡಲಾಯಿತು. ●

➘ ವಾರದೊಳಗೆ ಈ ಕೃತ್ಯ ಮಾಡಿದವರು ಹಿಂದೂತ್ವದ ಕೇಸರಿ ಪಡೆಯವರು ಎಂದು ಗೊತ್ತಾಗಿದೆ. ಇದೇ ರೀತಿ ಉಡುಪಿ ಜಿಲ್ಲೆಯ ಪ್ರವೀಣ ಪೂಜಾರಿ, ಮಂಗಳೂರಿನ ಆರ್‌ಎಸ್‌ಎಸ್ ಕಾರ್ಯಕರ್ತ ವಿನಾಯಕ ಬಾಳಿಗಾ ಈ ಮೊದಲಾದ ಹಿಂದೂಗಳೇ ವರ್ಷದಿಂದೀಚೆಗೆ ಕೇಸರಿ ಪಡೆಗಳಿಗೆ ಬಲಿಯಾಗಿದ್ದರೆ.

ಸಮಾರೋಪ ಸಮಾರಂಭದ ವೇದಿಕೆಗೆ ಯಾಕೆ ಹರೀಶ್ ಪೂಜಾರಿ ಹೆಸರಿಟ್ಟಿದ್ದು ಎಂಬ ಬಗ್ಗೆ ಸಚಿವ ರಮಾನಾಥ ರೈ ಅಧ್ಯಕ್ಷ ಭಾಷಣದಲ್ಲಿ ವಿವರಿಸಿದರು. ಆತನ ಕೊಲೆಯಾದ ಬೆನ್ನಿಗೇ ತಾವು ಈ ಸಾಮರಸ್ಯ ನಡಿಗೆ ಮಾಡುವ ಬಗ್ಗೆ ಪ್ರಕಟಿಸಿದರೂ, ಜಿಲ್ಲಾಡಳಿತ ತಮಗೆ ಅನುಮತಿ ಕೊಡಲಿಲ್ಲ ಎಂದು ತಿಳಿಸಿದರು. ತನ್ನ ಪಕ್ಷವೇ ರಾಜ್ಯ ಆಡಳಿತ ನಡೆಸುತ್ತಿದ್ದರೂ, ತನಗೆ ಸಕಾಲಿಕವಾಗಿ ಒಂದು ಸೌಹಾರ್ದ ಕಾರ್ಯಕ್ರಮ ಮಾಡಲು ಸಾಧ್ಯವಾಗದ ಪರಿಸ್ಥಿತಿ ಇರುವುದು, ಜಿಲ್ಲೆಯ ಕೋಮುವಾದಿ ಪರಿಸ್ಥಿತಿಯ ಗಂಭೀರತೆಯನ್ನು ತಿಳಿಸುತ್ತಿದೆ ಎಂಬ ಆತಂಕವನ್ನು ರಮಾನಾಥ ರೈಗಳು ವ್ಯಕ್ತಪಡಿಸಿದರು.

ಸಮಾರೋಪ ಸಮಾರಂಭದಲ್ಲೂ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸ್ವಾಗತ ಕೋರಿದರು. ಎಡಪಕ್ಷಗಳ ಕಾರ್ಯಕರ್ತರು ಮಾತ್ರ ಸೆಕ್ಯೂಲಾರಿಸಂನಲ್ಲಿ ದೃಢ ನಂಬಿಕೆ ಇರುವವರು ಎಂಬ ಖಚಿತತೆಯಲ್ಲಿ ಬಿ.ರಮಾನಾಥ ರೈಗಳು ಎಡಪಕ್ಷ ಕಾರ್ಯಕರ್ತರ ಸಹಕಾರವನ್ನು ಯಾಚಿಸಿದ್ದರು. ಈ ನಿಟ್ಟಿನಲ್ಲಿ ಕಾರ್ಯಕರ್ತರು ಸಾಮರಸ್ಯ ನಡಿಗೆಯನ್ನು ಯಶಸ್ವಿಗೊಳಿಸಲು ಸಕ್ರಿಯವಾಗಿ ದುಡಿದಿದ್ದಾರೆ. ●



ಯಾದಗಿರಿ ಜಿಲ್ಲಾ ಪ್ರಥಮ ಸಮ್ಮೇಳನ



ಮೂರು ವರ್ಷಗಳ ಹಿಂದೆ ಕಲಬುರಗಿ ಜಿಲ್ಲಾ ವ್ಯಾಪ್ತಿಯಲ್ಲಿದ್ದ ಯಾದಗಿರಿ ಜಿಲ್ಲೆಯ ಸಿಪಿಐ(ಎಂ) ಸಂಘಟನಾ ಸಮಿತಿಯ ಪ್ರಥಮ ಸಮ್ಮೇಳನವು ಶಹಪುರ ನಗರದಲ್ಲಿ 2017ರ ಡಿಸೆಂಬರ್ 9 ಮತ್ತು 10 ರಂದು ನಡೆಯಿತು. ಡಿಸೆಂಬರ್ 9 ರಂದು ನಗರದ ಹನುಮಂತನ ಗುಡಿ ಬಳಿ ಸಾರ್ವಜನಿಕ ಸಭೆ ನಡೆಯಿತು. ಇದಕ್ಕೆ ಪೂರ್ವಭಾವಿಯಾಗಿ ನಗರಸಭೆ ಕಛೇರಿ ಬಳಿಯಿಂದ ನೂರಾರು ಜನರ ಮೆರವಣಿಗೆ ನಡೆಯಿತು. ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಾದ ಪ್ರಕಾಶ್.ಕೆ. ರವರು ಬಾಷಣ ಮಾಡಿದರು. ಜೈಲಾರ್ ತೋಟದಮನಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಯಾಗಿದ್ದ ಎಸ್.ಎಂ. ಸಾಗರ ಪ್ರಾಸ್ತಾವಿಕ ಮಾತುಗಳನ್ನಾಡಿದರು.



ದಾವಲಸಾಬ್ ನದಾಫ್

ಡಿಸೆಂಬರ್ 10 ರಂದು ಪ್ರತಿನಿಧಿ ಅಧಿವೇಶನ ನಡೆಯಿತು. ಧ್ವಜಾರೋಹಣವನ್ನು ಹಿರಿಯ ಸಂಗಾತಿ ಸಿದ್ಧಯ್ಯ ಹಿರೇಮಠ್ ಮಾಡಿದರು. ದಾವಲಸಾಬ್ ನದಾಫ್ ಮತ್ತು ಸುರೇಖ ಕುಲಕರ್ಣಿರವರ ಅಧ್ಯಕ್ಷೀಯ ಮಂಡಳಿ ರಚಿಸಲಾಗಿತ್ತು. ಡಿಓಸಿ ಕಾರ್ಯದರ್ಶಿ ಎಸ್.ಎಂ. ಸಾಗರ ಮಂಡಿಸಿದ ವರದಿಯ ಮೇಲೆ ಚರ್ಚಿಸಿದ ಪ್ರತಿನಿಧಿಗಳು ಹಲವು ಸಲಹೆ ಸೂಚನೆಗಳನ್ನು ನೀಡಿದರು. ಅಂತಿಮವಾಗಿ ನೂತನ ಜಿಲ್ಲಾ ಸಂಘಟನಾ ಸಮಿತಿ ರಚನೆಯಾಯಿತು. ದಾವಲಸಾಬ್ ನದಾಫ್ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಎಸ್.ಎಂ. ಸಾಗರ್, ಆನೆಗುಂದಿ, ಯಲ್ಲಪ್ಪ ಚಿನ್ನಕಾರ್, ಜೈಲಾಲ್ ತೋಟದಮನಿ, ಸುರೇಖ ಕುಲಕರ್ಣಿ, ಮಲ್ಲಯ್ಯ ಪೋಲಂಪಲ್ಲಿ ಸದಸ್ಯರಾಗಿ ಆಯ್ಕೆಯಾದರು. ರಾಮಯ್ಯ ಭೋವಿ ಮತ್ತು ಅನಿತಾರವರು ಖಾಯಂ ಆಹ್ವಾನಿತರಾಗಿ ಆಯ್ಕೆಯಾದರು.

ಸಮ್ಮೇಳನವು ಹಲವು ನಿರ್ಣಯಗಳನ್ನು ಕೈಗೊಂಡಿತು.

1. ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಹೋರಾಟಗಳನ್ನು ರೂಪಿಸುವುದು.
2. ಬಗರ್‌ಹುಕುಂ ರೈತರ ಸಮಾವೇಶ ಮತ್ತು ಹೋರಾಟ ನಡೆಸುವುದು.
3. ಶಹಪುರ ಸಾರ್ವಜನಿಕ ಆಸ್ಪತ್ರೆ ಉತ್ತಮ ಪಡಿಸಲು ಹೋರಾಟ.
4. ನಗರಸಭೆ ಭ್ರಷ್ಟಾಚಾರದ ವಿರುದ್ಧ ಹಾಗೂ 185 ಉದ್ಯಾನಗಳನ್ನು ಭೂಗಳ್ಳರಿಂದ ಬಿಡಿಸಿಕೊಳ್ಳಲು ಹೋರಾಟ.
5. ಗದಗದಿಂದ ವಾಡಿಗೆ ರೈಲು ಸಂಪರ್ಕ ಶೀಘ್ರ ಜಾರಿಗೆ ಹೋರಾಟ.
6. ಸ್ವಾಮಿನಾಥನ್ ವರದಿ ಪ್ರಕಾರ ಬೆಂಬಲ ಬೆಲೆಗಾಗಿ ಹೋರಾಟ.
7. ಕೈಗಾರಿಕೆಗಳ ಭೂಸ್ವಾಧೀನ ವಿಚಾರದಲ್ಲಿ ಸರಿಯಾದ ಬೆಲೆ ಮತ್ತು ಉದ್ಯೋಗಕ್ಕಾಗಿ ಹೋರಾಟ ರೂಪಿಸುವುದು. ●





ಹಾಸನದ ಅಂಬೇಡ್ಕರ್ ಭವನದಲ್ಲಿ ನಡೆದ "ನೋಟ್ ಬ್ಯಾನ್, GST ಮತ್ತು ದೇಶದ ಆರ್ಥಿಕ ತಲ್ಲಣ" ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಇತಿಹಾಸ ತಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್ ಮತ್ತು ಹಂಪಿ ವಿವಿಯ ಡಾ.ಎಂ.ಚಂದ್ರಪೂಜಾರಿಯವರು ವಿಷಯದ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ವಹಿಸಿದ್ದರು, ಅಥಿತಿಗಳಾಗಿ ವಿಮಾ ನೌಕರರ ಸಂಗದ ಮುಖಂಡರಾದ ಎಸ್.ಕೆ.ಗೀತ ಭಾಗವಹಿಸಿದರು, ಸಿಐಟಿಯು ಜಿಲ್ಲಾ ಅಧ್ಯಕ್ಷರಾರ ಧರ್ಮೇಶ್ ರವರು ಪ್ರಾಸ್ಥಾವಿಕವಾಗಿ ಮಾತನಾಡಿದರು.



ಪರೇಶ ಮೇಸ್ತಾ ಸಾವಿನ ಸಮಗ್ರ ತನಿಖೆಗೆ ಒತ್ತಾಯಿಸಿ, ಕೋಮು ಸೌಹಾರ್ದತೆ ಕದಡುತ್ತಿರುವ ಮತೀಯವಾದಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿ ಟೌನ್ ಹಾಲ್ ಮುಂಭಾಗ SFI-DYFI-JMS-ಸಮುದಾಯ ಸಂಘಟನೆಗಳಿಂದ ಪ್ರತಿಭಟನೆ.


ಉತ್ಪಾದನಾ ವಲಯಗಳ ಸ್ಥಾಂತರ
ಬೆಂಗಳೂರು ನಗರ ರೂಪಾಂತರ

ರಾಜ್ಯ ಕೈಗಾರಿಕ ಚಿತ್ರಣ ಮತ್ತು ಬೆಂಗಳೂರು

ಬೆಂಗಳೂರಿನಲ್ಲಿರುವ ಭಾರತ ಸರ್ಕಾರದ ಸಂಸ್ಥೆಯಾದ ಅತಿ ಸಣ್ಣ, ಸಣ್ಣ, ಮಧ್ಯಮ ಉದ್ದೆಮೆಗಳ ಅಭಿವೃದ್ಧಿ ಸಂಸ್ಥೆ (MSME) ಸಿದ್ದಪಡಿಸಿರುವ ಕರ್ನಾಟಕ ರಾಜ್ಯ ಕೈಗಾರಿಕ ಪ್ರೋಫೈಲ್ 2015–16 ಹೇಳುವಂತೆ:

- ಬೆಂಗಳೂರು ಭಾರತದ ಮುಂಚೂಣಿ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿದೆ. ಸಿಲಿಕಾನ್ ವ್ಯಾಲಿಯ ನಂತರದ ಜಗತ್ತಿನ 2ನೇ ಅತಿ ದೊಡ್ಡ ತಂತ್ರಜ್ಞಾನ ಕ್ಲಸ್ಟರಾಗಿದೆ. 3500 ಮಾಹಿತಿ ತಂತ್ರಜ್ಞಾನ ಕಂಪನಿಗಳಿರುವ ರಾಜ್ಯವಾಗಿ ರಾಷ್ಟ್ರದ 38 ಶೇಕಡ ಮಾಹಿತಿ ತಂತ್ರಜ್ಞಾನ ರಫ್ತನ್ನು ಒದಗಿಸುತ್ತಿದೆ. ಅದರ ಬಹುತೇಕ ಪಾಲು ಬೆಂಗಳೂರಿನದಾಗಿದೆ.
- 500 ಜಾಗತಿಕ ಫಾರ್ಚ್ಯೂನ್ ಕಂಪನಿಗಳಲ್ಲಿ 400 ಕಂಪೆನಿಗಳು ಮಾಹಿತಿ ತಂತ್ರಜ್ಞಾನದ ಸೇವೆಗಳನ್ನು ಬೆಂಗಳೂರಿನಿಂದ ಹೊರಗುತ್ತಿಗೆ ಆಧಾರಿತವಾಗಿ ಪಡೆಯುತ್ತಿವೆ.
- 85 ಚಿಪ್ ವಿನ್ಯಾಸಗೊಳಿಸುವ ಸಂಸ್ಥೆಗಳು ಮತ್ತು 370 ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಸಂಸ್ಥೆಗಳು 2014–15 ರಲ್ಲಿ ನೇರವಾಗಿ 10 ಲಕ್ಷ ಮತ್ತು ಪರೋಕ್ಷವಾಗಿ 25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ. ಭಾರತದ ಅತಿ ಹೆಚ್ಚು ಆರ್&ಡಿ ಸಂಸ್ಥೆಗಳು ಬೆಂಗಳೂರಿನಲ್ಲಿವೆ.
- ಭಾರತದ ನವೋದ್ಯಮಗಳ ರಾಜಧಾನಿಯಾಗಿ ಬೆಂಗಳೂರು ಹೊರಹೊಮ್ಮಿದೆ. ರಾಷ್ಟ್ರದ 30 ಶೇಕಡ ಪಾಲನ್ನು ಹೊಂದಿದೆ.
- ಜೈವಿಕ ತಂತ್ರಜ್ಞಾನದ (ಬಿ.ಟಿ) ರಾಜಧಾನಿಯು ಆಗಿದೆ. 200 ಕ್ಕೂ ಹೆಚ್ಚು ಸಂಸ್ಥೆಗಳಿವೆ. ರಾಷ್ಟ್ರದ 26 ಶೇಕಡ ಜೈವಿಕ ತಂತ್ರಜ್ಞಾನದ ಆದಾಯ ಬೆಂಗಳೂರಿನಿಂದ ಉಂಟಾಗುತ್ತಿದೆ. 19000 ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿದ್ದಾರೆ. ಅವರಲ್ಲಿ 15.6 ಶೇಕಡ ಮಹಿಳೆಯರಿದ್ದಾರೆ.
- ಭಾರತದ ಶೇಕಡ 25 ರಷ್ಟು ವಿಮಾನ ಮತ್ತು ಬಾಹ್ಯಾಕಾಶ ನೌಕೆಗಳ ಉತ್ಪಾಧನೆಬೆಂಗಳೂರಿನಲ್ಲಿಆಗುತ್ತಿದೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 984 ಎಕರೆ ಪ್ರದೇಶದ ಅಂತರಿಕ್ಷಯಾನ ಕೈಗಾರಿಕೆಗಳ ವಿಶೇಷ ಆರ್ಥಿಕ ವಲಯ ನಿರ್ಮಾಣವಾಗಿದೆ.
- ರಾಷ್ಟ್ರದ ಒಟ್ಟು 3600 ಕೋಟಿ ರೂಗಳ ಮೆಷಿನ್ ಟೂಲ್ಸ್‌ಗಳ ಉತ್ಪಾಧನೆಯಲ್ಲಿ ಬೆಂಗಳೂರಿನ ಪಾಲು ಶೇಕಡ 60 ರಷ್ಟಾಗಿದೆ (2160 ಕೋಟಿ ರೂಗಳು). 100 ಶೇಕಡ ವಿದೇಶಿ ನೇರ ಬಂಡವಾಳಕ್ಕೆ ಭಾರತ ಸರ್ಕಾರ ಅನುಮತಿಸಿದೆ. ರಾಷ್ಟ್ರದ ಪ್ರಥಮ "ಸಮಗ್ರ ಮೆಷಿನ್ ಟೂಲ್ಸ್ ಕೈಗಾರಿಕಾ ಪಾರ್ಕ್" (ಐ.ಎಂ.ಟಿ.ಐ.ಪಿ) ಬೆಂಗಳೂರಿನಲ್ಲಿ ಸ್ಥಾಪಿತವಾಗುತ್ತಿದೆ.
- 2014–15 ರಲ್ಲಿ ರಾಜ್ಯದಲ್ಲಿ 2,92,560 ಕೋಟಿ ರೂಗಳ (42.40 ಶತಕೋಟಿ ಅಮೇರಿಕನ್ ಡಾಲರ್) ಮೌಲ್ಯದ ಎಲೆಕ್ಟ್ರಾನಿಕ್ಸ್ ಹಾರ್ಡ್‌ವೇರ್ ಉತ್ಪಾಧನೆಯಾಗಿದೆ. ಅದರಲ್ಲಿ 222042 ಕೋಟಿ ರೂಗಳ ಮೌಲ್ಯದ ಉತ್ಪನ್ನ (32.18 ಶತಕೋಟಿ ಅಮೇರಿಕನ್ ಡಾಲರ್) ರಫ್ತಾಗಿದೆ.
- ರಾಷ್ಟ್ರದ ಸಿದ್ಧ ಉಡುಪು ಉತ್ಪಾಧನೆಯಲ್ಲಿ 20 ಶೇಕಡ ಮತ್ತು ರಾಷ್ಟ್ರೀಯ ಕಚ್ಚಾ ರೇಷ್ಮೆ ಉತ್ಪಾಧನೆಯಲ್ಲಿ 45 ಶೇಕಡ ಹಾಗು ರೇಷ್ಮೆ ಉತ್ಪನ್ನಗಳ ರಫ್ತಿನಲ್ಲಿ 24 ಶೇಕಡ ಕರ್ನಾಟಕದ ಪಾಲಿದೆ.
- ಕರ್ನಾಟಕ ರಾಜ್ಯವು 3 ನೇ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಸ್ವಿಕರಿಸುತ್ತಿರುವ ರಾಜ್ಯವಾಗಿದೆ. ಬೆಂಗಳೂರು ಏಷ್ಯಾ ಖಂಡದ ಜ್ಞಾನ ಕೇಂದ್ರವಾಗಿದೆ.
- ಆರೋಗ್ಯ ಮತ್ತು ಕ್ಷೇಮ ಪ್ರವಾಸೋದ್ಯಮದ ಕೇಂದ್ರವಾಗಿ ಬೆಂಗಳೂರು ರೂಪಿತವಾಗುತ್ತಿದೆ.
- ವಿಶ್ವದ 4 ಅನ್ವೇಶಣೆ ಕೇಂದ್ರಗಳಲ್ಲಿ ಕರ್ನಾಟಕವನ್ನು ಒಂದೆಂದು ವಿಶ್ವ ಆರ್ಥಿಕ ವೇದಿಕೆಯು(WEF)ಗುರುತಿಸಿದೆ,
- ವಿಶ್ವ ಬ್ಯಾಂಕ್ ಹೂಡಿಕೆ ಹವಾಗುಣ ಸೂಚ್ಯಂಕವು ಆರೋಗ್ಯಕರ ವ್ಯವಹಾರ ಹವಾಗುಣ ಮತ್ತು ಹೂಡಿಕೆ ಆಕರ್ಷಿಸುವುದರಲ್ಲಿ ಕರ್ನಾಟಕಕ್ಕೆ ಪ್ರಥಮ ಸ್ಥಾನ ನೀಡಿದೆ.
- ರಾಜ್ಯಕ್ಕಿರುವ ಮೇಲಿನ ಎಲ್ಲಾ ಅಂಶಗಳಲ್ಲೂ ಬೆಂಗಳೂರಿನ ಪಾತ್ರ ಪ್ರಧಾನವಾಗಿದೆ. ಅದರಲ್ಲಿ ಬೆಂಗಳೂರು ದಕ್ಷಿಣದ ಪಾಲು ಸಹಾ ಸಮಾನವಾಗಿದೆ.
- 20 ಲಕ್ಷ ಮಾಹಿತಿ ತಂತ್ರಜ್ಞಾನ ವೃತ್ತಿಪರರು ಹಾಗು 60 ಲಕ್ಷ ಪರೋಕ್ಷ ಉದ್ಯೋಗಿಗಳೊಂದಿಗೆ 2020ರ ವೇಳೆಗೆ ಬೆಂಗಳೂರು ಭೂಗ್ರಹದ ಮೇಲಿನ ಅತಿ ಹೆಚ್ಚು ಪ್ರತಿಭೆಗಳನ್ನು ಹೊಂದಿದ ಏಕಮಾತ್ರ ಕೇಂದ್ರವಾಗಲಿದೆ, ಎಂದು ಅಂದಾಜಿಸಿದೆ. ●

ಮೋದಿಯವರ ನಿಂದನೆಭರಿತ ಪ್ರಚಾರ ಅತ್ಯುನ್ನತ ಹುದ್ದೆಗೆ ಮಾಡಿರುವ ಅಪಚಾರ



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಗುಜರಾತಿನ ಚುನಾವಣೆಗಳ ಫಲಿತಾಂಶಗಳು ಏನೇ ಬರಲಿ, ಚುನಾವಣಾ ಪ್ರಚಾರವಂತೂ ಒಬ್ಬ ಹಿಂದುತ್ವ ಮತಾಂಧನನ್ನು ದೇಶದ ಪ್ರಧಾನ ಮಂತ್ರಿಯಾಗಿ ಹೊಂದಿರುವುದರ ಗಂಡಾಂತರಗಳನ್ನು ಎತ್ತಿ ತೋರಿದೆ. ಚುನಾವಣೆಗಳ ಸಮಯದಲ್ಲಿ ಸದಾ ಒಂದು ಮುಸ್ಲಿಂ ಹೆಸರನ್ನು ಎಳೆದು ತರುವುದು ಮತ್ತು ಒಂದು ಪಾಕಿಸ್ತಾನೀ ಕೊಂಡಿಯನ್ನು ಸೂಚಿಸುವುದರಲ್ಲಿ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ನಿಷ್ಣಾತರಾಗಿದ್ದರು. ಆದರೆ ಈಗ ಪ್ರಧಾನ ಮಂತ್ರಿಯಾದ ಮೇಲೆ ಕೂಡ ಇಂತಹ ಕೋಮುವಾದಿ ಲಕ್ಷ್ಯಸಾಧನೆಯನ್ನು ಇನ್ನಷ್ಟು ಹೊಲಸು ಮಟ್ಟಕ್ಕೆ ಇಳಿಸಿರುವುದು ಅಪಾಯಕಾರಿ ಮತ್ತು ಆತಂಕಕಾರಿ.

ಗುಜರಾತ್ ಚುನಾವಣಾ ಪ್ರಚಾರದಲ್ಲಿ ನಿಂದನಾತ್ಮಕ ಕೋಮುವಾದಿ ಅಬ್ಬರ ಮತ್ತು ಮುಸ್ಲಿಮರ ಮೇಲೆ ಗುರಿಯಿಟ್ಟ ಭೀತಿಕೋರತನ ಅತ್ಯಂತ ತುಚ್ಛ ಮಟ್ಟವನ್ನು ತಲುಪಿದ್ದನ್ನು ಕಂಡಿದ್ದೇವೆ. ಇದಕ್ಕೆ ಬಹುಮಟ್ಟಿಗೆ ಸ್ವತ: ಪ್ರಧಾನ ಮಂತ್ರಿಗಳೇ ಕಾರಣ.

ಒಂದಷ್ಟು ಆಪಾದನೆಗಳು ಮತ್ತು ಹುಸಿ ಸಂಗತಿಗಳ ಮೂಲಕ ಮುಸ್ಲಿಮರ ಒಂದು ಕೋಮುವಾದಿ ಬಿಂಬವನ್ನು ಸೃಷ್ಟಿಸುವುದು, ಅದನ್ನು ಪಾಕಿಸ್ತಾನದೊಂದಿಗೆ ಜೋಡಿಸುವುದು ನರೇಂದ್ರ ಮೋದಿಯವರ ಚುನಾವಣಾ ಭಾಷಣಗಳ ಮುಖ್ಯ ಲಕ್ಷಣ. ರಾಹುಲ್ ಗಾಂಧಿ ಕಾಂಗ್ರೆಸ್ ಅಧ್ಯಕ್ಷರಾಗುವುದೆಂದರೆ ಅದು "ಔರಂಗಜೇಬ್ ರಾಜ್ಯಭಾರ'ದ ಉದಯ; ಯಾರೋ ಗುರುತು-ಪರಿಚಯವಿಲ್ಲದ ಕಾಶ್ಮೀರಿ ಮುಸ್ಲಿಂ ಕಾಂಗ್ರೆಸ್ ಕಾರ್ಯಕರ್ತ ನರೇಂದ್ರ ಮೋದಿಯವರ ಹುಟ್ಟಿನ ಮೇಲೆ ಕಳಂಕ ಹಚ್ಚಿದ್ದಾನೆಂಬ ಆಪಾದನೆ; ಪಾಕಿಸ್ತಾನದ ಯಾರೋ ಒಬ್ಬ ನಿವೃತ್ತ ಸೇನಾಧಿಕಾರಿ ಅಹಮದ್ ಪಟೇಲ್ ಮುಖ್ಯಮಂತ್ರಿಯಾಗಬೇಕು ಎಂದು ಬಯಸುತ್ತಾನೆ ಇತ್ಯಾದಿ, ಇತ್ಯಾದಿ.

ಅತ್ಯಂತ ಹೀನ ಸುಳ್ಳು ಎಂದರೆ, ಮಣಿಶಂಕರ್ ಅಯ್ಯರ್ ಪಾಕಿಸ್ತಾನದ ಒಬ್ಬ ಮಾಜಿ ವಿದೇಶಾಂಗ ಮಂತ್ರಿ ಭಾರತಕ್ಕೆ ಭೇಟಿ ನೀಡಿದಾಗ ಏರ್ಪಡಿಸಿದ ಒಂದು ಭೋಜನ ಕೂಟ ಗುಜರಾತಿನ ಚುನಾವಣೆಗಳಲ್ಲಿ ಪಾಕಿಸ್ತಾನದ ಹಸ್ತಕ್ಷೇಪದ ಒಂದು ಸಂದರ್ಭ ಎಂದಿರುವುದು. ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರು ಈ 'ಭೋಜನ ಪಿತೂರಿ'ಯಲ್ಲಿ ಶಾಮೀಲಾಗಿದ್ದಾರೆ ಎಂದು ಆಪಾದಿಸುವುದಂತೂ ನಿಜಕ್ಕೂ ನಿಂದನೀಯ. ಇದು ಮೋದಿಯಂತಹ ವ್ಯಕ್ತಿಯ ಕೈಗಳಲ್ಲಿ ಸಂವಿಧಾನಿಕ ಸದ್ವರ್ತನೆಗಳಿಗೆ ಮತ್ತು ಉನ್ನತ ಸಂವಿಧಾನಿಕ ಹುದ್ದೆಗೆ ಎಂತಹ ಅಪಚಾರ ಉಂಟಾಗುತ್ತಿದೆ ಎಂಬುದನ್ನು ತೋರಿಸಿದೆ.

ಚುನಾವಣೆಗಳ ಸಮಯದಲ್ಲಿ ಸದಾ ಒಂದು ಮುಸ್ಲಿಂ ಹೆಸರನ್ನು ಎಳೆದು ತರುವುದು ಮತ್ತು ಒಂದು ಪಾಕಿಸ್ತಾನೀ ಕೊಂಡಿಯನ್ನು ಸೂಚಿಸುವುದರಲ್ಲಿ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ನಿಷ್ಣಾತರಾಗಿದ್ದರು. ಆದರೆ ಈಗ ಪ್ರಧಾನ ಮಂತ್ರಿಯಾದ ಮೇಲೆ ಕೂಡ ಇಂತಹ ಕೋಮುವಾದಿ ಲಕ್ಷ್ಯಸಾಧನೆಯನ್ನು ಇನ್ನಷ್ಟು ಹೊಲಸು ಮಟ್ಟಕ್ಕೆ ಇಳಿಸಿರುವುದು ಅಪಾಯಕಾರಿ ಮತ್ತು ಆತಂಕಕಾರಿ. ಪ್ರಧಾನ ಮಂತ್ರಿಗಳ ಈ ನಾಚಿ-ಕೆಗೆಟ್ಟ ಚುನಾವಣಾ ಅಬ್ಬರ ದೇಶದಲ್ಲಿ ಮುಸ್ಲಿಮರ ಬಗ್ಗೆ ಉಂಟಾಗಿರುವ ದ್ವೇಷ ಮತ್ತು ಸಂದೇಹದ ವಾತಾವರಣವನ್ನು ಇನ್ನಷ್ಟು ಕೆಡಿಸುತ್ತದೆ.

ಗುಜರಾತಿನ ಚುನಾವಣೆಗಳ ಫಲಿತಾಂಶಗಳು ಏನೇ ಬರಲಿ, ಚುನಾವಣಾ ಪ್ರಚಾರವಂತೂ ಒಬ್ಬ ಹಿಂದುತ್ವ ಮತಾಂಧನನ್ನು ದೇಶದ ಪ್ರಧಾನ ಮಂತ್ರಿಯಾಗಿ ಹೊಂದಿರುವುದರ ಗಂಡಾಂತರಗಳನ್ನು ಎತ್ತಿ ತೋರಿದೆ.



* ಪ್ರಕಾಶ್ ಕಾರಟ್

ಜೆರುಸಲೇಮ್ ಸಂಕ್ಷೋಭೆ:

ಮುಠ್ಠಾಳ ನಿರ್ಧಾರಕ್ಕೆ ಜಾಗತಿಕ ಆಕ್ರೋಶ

ಟ್ರಂಪ್ ನಿರ್ಧಾರದ ಹಿನ್ನೆಲೆಯಲ್ಲಿ ಕಾಣುತ್ತಿರುವ ವಿದ್ಯಮಾನಗಳು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಸಂಘರ್ಷ ಮತ್ತು ಸಂಕ್ಷೋಭೆಯ ಹೊಸ ಘಟ್ಟದ ದಿಕ್ಸೂಚಿಯಾಗಿದೆ. ಟ್ರಂಪ್ ಈ ಮುಠ್ಠಾಳತನದ ಕ್ರಮ ತೆಗೆದುಕೊಳ್ಳಲು ಉದ್ದೇಶ ಏನೇ ಇರಬಹುದು, ಅಮೆರಿಕವನ್ನು ಪಶ್ಚಿಮ ಏಷ್ಯಾದಲ್ಲಿ ಏಕಾಂಗಿಯಾಗಿಸಲು ಅದು ಕೊಡುಗೆ ನೀಡುತ್ತದೆನ್ನುವುದು ನಿಸ್ಸಂದೇಹ. ಆದರೆ ಖಾಸಗಿಯಾಗಿ, ಮೋದಿ ಮತ್ತು ಅವರ ಕೂಟಕ್ಕೆ ಜೆರುಸಲೇಮ್‌ಗೆ ಅಮೆರಿಕದ ಮಾನ್ಯತೆ ಪಡೆಯುವಲ್ಲಿ ಇಸ್ರೇಲ್ ಯಶಸ್ಸು ಪಡೆದಿರುವುದರಿಂದಾಗಿ ಆನಂದವಾಗಿರಬಹುದು.

ಜೆರುಸಲೇಮ್ ಅನ್ನು ಇಸ್ರೇಲ್‌ನ ರಾಜಧಾನಿಯನ್ನಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾನ್ಯ ಮಾಡಿರುವುದಕ್ಕೆ ಜಗತ್ತಿನೆಲ್ಲೆಡೆ ವಿರೋಧ ಮತ್ತು ಕಳವಳ ವ್ಯಕ್ತವಾಗಿದೆ. ಅಮೆರಿಕದ ಎಲ್ಲಾ ಪ್ರಮುಖ ಯುರೋಪಿಯನ್ ಮಿತ್ರ ದೇಶಗಳಾದ ಫ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ ಟ್ರಂಪ್ ನಿಲುವಿಗೆ ಕ್ರೋಧ ವ್ಯಕ್ತಪಡಿಸಿವೆ. ಅಮೆರಿಕದ ಕ್ರಮವನ್ನು ಎಲ್ಲಾ ಅರಬ್ ದೇಶಗಳು ವಿರೋಧಿಸಿವೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಅಮೆರಿಕ ಬಿಟ್ಟು ಉಳಿದ ಎಲ್ಲಾ 14 ಸದಸ್ಯ ದೇಶಗಳು ಈ ನಿರ್ಧಾರವನ್ನು ಖಂಡಿಸಿವೆ. ಅಮೆರಿಕದ ನಿರ್ಧಾರವನ್ನು ಶ್ಲಾಘಿಸಿದ ಏಕೈಕ ದೇಶವೆಂದರೆ ಸಹಜವಾಗಿಯೇ ಅದು ಇಸ್ರೇಲ್. ಪೂರ್ವ ಜೆರುಸಲೇಮ್‌ಅನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವ ಇಸ್ರೇಲ್ ಕ್ರಮಕ್ಕೆ ಅಮೆರಿಕದ ನಿರ್ಧಾರ ನ್ಯಾಯಬದ್ಧತೆ ಒದಗಿಸಿದೆ. ಹೀಗಾಗಿ ಅದು ಸ್ವಾಗತಿಸಿದೆ.

1948ರಲ್ಲಿ ಪ್ಯಾಲೆಸ್ತೀನಿ ಅರಬ್ ಪ್ರದೇಶಗಳಿಂದ ಇಸ್ರೇಲ್ ರಚಿಸಿದಾಗ ಜೆರುಸಲೇಮ್‌ಅನ್ನು ಅಂತಾರಾಷ್ಟ್ರೀಯ ನಗರವೆಂದು ವಿಶ್ವ ಸಂಸ್ಥೆ ಘೋಷಿಸಿತ್ತು. ಮೂರು ಧರ್ಮಗಳ, ಅಂದರೆ ಜುಡಾಯಿಸಂ, ಕ್ರೈಸ್ತ ಮತ್ತು ಮುಸ್ಲಿಮ್ ದರ್ಮಗಳ ಪವಿತ್ರ ಸ್ಥಳಗಳು ಅಲ್ಲಿ ಇವೆ ಎಂಬ ಕಾರಣಕ್ಕೆ ಈ ಕ್ರಮವನ್ನು ಕೈಗೊಳ್ಳಲಾಗಿತ್ತು. ಟೆಂಪಲ್ ಮೌಂಟ್ ಮತ್ತು ಪಶ್ಚಿಮ ಗೋಡೆ ಯೆಹೂದಿಯರಿಗೆ ಪವಿತ್ರವಾದವು. ಹೋಲಿ ಸೆಪುಲ್ಚರ್ ಚರ್ಚ್ ಕ್ರೈಸ್ತರಿಗೆ ಪವಿತ್ರವಾದುದು. ಅಲ್ ಅಕ್ಸಾ ಮಸೀದಿ ಮುಸ್ಲಿಮರಿಗೆ ಪವಿತ್ರವಾದುದು. ಈ ಎಲ್ಲವೂ ಜೆರುಸಲೇಮ್‌ನಲ್ಲಿ ಇವೆ.

1949ರ ಮೊದಲ ಅರಬ್-ಇಸ್ರೇಲ್ ಸಂಘರ್ಷದ ನಂತರ ಜೆರುಸಲೇಮ್‌ಅನ್ನು ವಿಭಜಿಸಲಾಯಿತು. ಪಶ್ಚಿಮ ಜೆರುಸಲೇಮ್ ಇಸ್ರೇಲ್ ನಿಯಂತ್ರಣಕ್ಕೆ ಹಾಗೂ ಪೂರ್ವ ಜೆರುಸಲೇಮ್ ಜೋರ್ಡಾನ್ ನಿಯಂತ್ರಣಕ್ಕೆ ಒಳಪಟ್ಟಿತು. 1967ರ ಯುದ್ಧದಲ್ಲಿ ಇಸ್ರೇಲ್ ಪಶ್ಚಿಮ ದಂಡೆಯನ್ನು ಕಿತ್ತುಕೊಂಡಿತು ಹಾಗೂ ಜೋರ್ಡಾನ್‌ನಿಂದ ಪೂರ್ವ ಜೆರುಸಲೇಮ್‌ಅನ್ನು ವಶಪಡಿಸಿಕೊಂಡಿತು. ಸಂಯುಕ್ತ ಜೆರುಸಲೇಮ್ ತನ್ನ ರಾಜಧಾನಿ ಎಂದು ಇಸ್ರೇಲ್ 1980ರಿಂದ ಘೋಷಿಸಿಕೊಂಡಿದೆ. ಆಗಿನಿಂದಲೂ ತನ್ನ ಅಸ್ತಿತ್ವವನ್ನು ವಿಸ್ತರಿಸಲು ಮತ್ತು ಪೂರ್ವ ಜೆರುಸಲೇಮ್ ಮತ್ತು ಪಶ್ಚಿಮ ದಂಡೆಯಲ್ಲಿ ವಶಪಡಿಸಿಕೊಂಡ ಎಲ್ಲಾ ಪ್ರದೇಶಗಳ ಮೇಲೆ ತನ್ನ ಹಕ್ಕನ್ನು ಪ್ರತಿಪಾದಿಸುತ್ತಲೇ ಬಂದಿದೆ.



ಪ್ಯಾಲೆಸ್ತೀನಿ ಪ್ರಶ್ನೆಯ ರಾಜಕೀಯ ಇತ್ಯರ್ಥಕ್ಕೆ ನಡೆದ ಪ್ರಯತ್ನಗಳುದ್ದಕ್ಕೂ ವಿಶ್ವ ಸಂಸ್ಥೆ ಒಂದು ದೃಢ ನಿಲವನ್ನು ತಳೆದಿದೆ. ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ ಎರಡು-ಪ್ರಭುತ್ವ ಒಪ್ಪಂದಕ್ಕೆ ಬರುವ ಒಡಂಬಡಿಕೆಯ ಅಂತಿಮ ಹಂತಗಳಲ್ಲಿ ಜೆರುಸಲೇಮ್‌ನ ಸ್ಥಾನಮಾನವನ್ನು ನಿರ್ಧರಿಸಲಾಗುವುದು ಎನ್ನುವುದೇ ವಿಶ್ವ ಸಂಸ್ಥೆಯ ನಿಲವಾಗಿದೆ.

ಜೆರುಸಲೇಮ್‌ಅನ್ನು ಇಸ್ರೇಲ್ ರಾಜಧಾನಿ ಎಂದು ಅಮೆರಿಕ ಏಕಪಕ್ಷೀಯವಾಗಿ ಮಾನ್ಯ ಮಾಡುವ ಮೂಲಕ ಟ್ರಂಪ್ ಸ್ವತಂತ್ರ ಪ್ಯಾಲೆಸ್ತೀನಿ ರಾಷ್ಟ್ರ ರಚನೆಯ ಸಂಧಾನದ ಯಾವುದೇ ಸಾಧ್ಯತೆಗಳನ್ನು ದುರ್ಬಲಗೊಳಿಸಿದ್ದಾರೆ. ಆಕ್ರಮಣ ಮಾಡಿದ ದೇಶವಾದ ಹಾಗೂ ಕಳೆದ 50 ವರ್ಷಗಳಿಂದ ಪ್ಯಾಲೆಸ್ತೀನಿ ಪ್ರದೇಶಗಳನ್ನು ಆಕ್ರಮಿಸಿಕೊಂಡಿರುವ ಇಸ್ರೇಲ್‌ನ ಪರವಾಗಿ ಅಮೆರಿಕವನ್ನು ದೃಢವಾಗಿ ನಿಲ್ಲಿಸಿದ್ದಾರೆ ಟ್ರಂಪ್. ಈ ರೀತಿ ಮಾಡುವ ಮೂಲಕ ಪಶ್ಚಿಮ ದಂಡೆಯಲ್ಲಿ ಇನ್ನೂ ಹೆಚ್ಚುತ್ತಲೇ ಇರುವ ಕಾನೂನುಬಾಹಿರ ವಸತಿಪ್ರದೇಶಗಳನ್ನು (ಸೆಟ್ಲ್‌ಮೆಂಟ್) ಅಮೆರಿಕ ಬೆಂಬಲಿಸಲಿದೆ ಎನ್ನುವ ಸೂಚನೆಯನ್ನು ನೀಡಿದ್ದಾರೆ.

ಈ ವಲಯದಲ್ಲಿ ತನ್ನ ಹಿತಗಳಿಗೆ ಪ್ರಮುಖ ವೈರಿ ಇರಾನ್ ಎಂದು ಟ್ರಂಪ್ ಗುರಿ ಮಾಡಿದ್ದಾರೆ. ಇದೀಗ ಜೆರುಸಲೇಮ್ ಕುರಿತ ಅವರ ನಿಲವಿನಿಂದಾಗಿ ಇರಾನ್ ಮತ್ತು ಹೆಜ್ಬುಲ್ಲಾದಂಥ ಅದರ ಮಿತ್ರರ ಮೇಲೆ ಇನ್ನೂ ಹೆಚ್ಚು ಆಕ್ರಮಣಕಾರಿಯಾದ ಧೋರಣೆ ತಳೆಯಲು ಇಸ್ರೇಲ್‌ಗೆ ಕುಮ್ಮಕ್ಕು ಸಿಗುತ್ತದೆ. ಪಶ್ಚಿಮ ದಂಡೆ ಮತ್ತು ಗಾಜಾದಲ್ಲಿ ಪ್ಯಾಲೆಸ್ತೀನಿಯರು ನಡೆಸಿದ ಪ್ರತಿಭಟನೆಗಳು ಅಮೆರಿಕದ ಈ ಖುಲ್ಲಂಖುಲ್ಲಾ ಪ್ರಚೋದನಕಾರಿ ಧೋರಣೆಗೆ ವ್ಯಕ್ತವಾಗುತ್ತಿರುವ ಪ್ರತಿರೋಧಕ್ಕೆ ಸಾಕ್ಷಿಯಾಗಿದೆ. ಬೈರೂತ್, ಇಸ್ತಾಂಬುಲ್ ಮತ್ತಿತರ ನಗರಗಳಲ್ಲಿ ಬೃಹತ್ ಪ್ರತಿಭಟನೆಗಳು ನಡೆದಿವೆ.

ಈಗಿನ ವಿದ್ಯಮಾನಗಳು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಸಂಘರ್ಷ ಮತ್ತು ಸಂಕ್ಷೋಭೆಯ ಹೊಸ ಘಟ್ಟದ ಸೂಚನೆಯ ದಿಕ್ಸೂಚಿಯಾಗಿದೆ. ಟ್ರಂಪ್ ಈ ಮುಠ್ಠಾಳತನದ ಕ್ರಮ ತೆಗೆದುಕೊಳ್ಳಲು ಉದ್ದೇಶ ಏನೇ ಇರಬಹುದು, ಅಮೆರಿಕವನ್ನು ಪಶ್ಚಿಮ ಏಷ್ಯಾದಲ್ಲಿ ಏಕಾಂಗಿಯಾಗಿಸಲು ಅದು ಕೊಡುಗೆ ನೀಡುತ್ತದೆನ್ನುವುದು ನಿಸ್ಸಂದೇಹ. ಅಮೆರಿಕದ ನಾಟೋ ಮಿತ್ರನಾದ ಟರ್ಕಿ ಟ್ರಂಪ್ ನಿರ್ಧಾರವನ್ನು ಖಂಡಿಸಿದ್ದು, ಸಿರಿಯಾ ವಿಷಯದಲ್ಲಿ ಕಾಣುವಂತೆ, ರಷ್ಯಾ ಜೊತೆಗಿನ ಟರ್ಕಿ ಸಹಕಾರ ಹೆಚ್ಚುವ ಪ್ರಕ್ರಿಯೆ ಇದರಿಂದ ವೇಗ ಪಡೆದುಕೊಳ್ಳಲಿದೆ.

ಅಂತಾರಾಷ್ಟ್ರೀಯವಾಗಿ ಗಮನಿಸುವುದಾದರೆ ಜೆರುಸಲೇಮ್ ವಿದ್ಯಮಾನದಲ್ಲಿ ಟ್ರಂಪ್ ನಿರ್ಧಾರವನ್ನು ಖಂಡಿಸುವಲ್ಲಿ ಭಾರತದ ಮೌನ ಎದ್ದು ಕಾಣುತ್ತದೆ. ಮೋದಿ ಸರಕಾರ ಯಾವುದೇ ವಿಮರ್ಶಾತ್ಮಕ ಟಿಪ್ಪಣಿ ಮಾಡದೆ ಉದ್ದೇಶಪೂರ್ವಕವಾಗಿಯೇ ತಪ್ಪಿಸಿಕೊಂಡಿದೆ. ಖಾಸಗಿಯಾಗಿ ಮೋದಿ ಮತ್ತು ಅವರ ಕೂಟಕ್ಕೆ ಜೆರುಸಲೇಮ್‌ಗೆ ಅಮೆರಿಕದ ಮಾನ್ಯತೆ ಪಡೆಯುವಲ್ಲಿ ಇಸ್ರೇಲ್ ಯಶಸ್ಸು ಪಡೆದಿರುವುದರಿಂದಾಗಿ ಆನಂದವಾಗಿರಬಹುದು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕೋಮುವಾದಿ ಹಿಂದುತ್ವ ದೃಷ್ಟಿಕೋನದಲ್ಲಿ, ಜೆರಸುಲೇಮ್ ಅನ್ನುವುದು ಇಸ್ರೇಲ್‌ನ ಅಯೋಧ್ಯೆಯಾಗಿದೆ. ಅವರ ಮಟ್ಟಿಗೆ, ಜೆರುಸಲೇಂ ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಐತಿಹಾಸಿಕ ವಾರಸುದಾರಿಕೆಯನ್ನು ನಿರಾಕರಿಸುವ ಮೂಲಕ ಇಸ್ರೇಲ್ ಯೆಹೂದಿಯರ ಧಾರ್ಮಿಕ ಪರಂಪರೆಯ ವಾರಸುದಾರಿಕೆಯನ್ನು ಮತ್ತೆ ಸ್ಥಾಪಿಸುತ್ತಿರುವುದರ ಪ್ರತೀಕ. ಹಿಂದುತ್ವ ಯೋಧರಿಗೆ ಇದು ಇಸ್ಲಾಮೀ ಭೂತಕಾಲದ ಮೇಲಿನ ಇನ್ನೊಂದು ವಿಜಯವಾಗಿದೆ.

ಅನು: ವಿಶ್ವ





ಯಮುನಾ ಗಾಂವ್ಕರ್

ಶಾಂತ ಉತ್ತರ ಕನ್ನಡ ಏಕೆ ಉದ್ವಿಗ್ನವಾಗಿದೆ? ಕೋಮು ಗಲಭೆಯಲ್ಲ, ಅಲ್ಪಸಂಖ್ಯಾತರ ಮೇಲೆ ಏಕಪಕ್ಷೀಯ ದಾಳಿ!!

ಗಲಾಟೆಯ ಮುಖಂಡತ್ವ ಯಾರದು? ಕೋಮುಗಲಭೆ ಅಸಲಿಗೆ ಬಿಜೆಪಿಯ ಚುನಾವಣೆ ಗಲಭೆ ಅಲ್ಲದೇ ಮತ್ತೇನೂ ಅಲ್ಲ. ಕುಮಟಾ, ಭಟ್ಕಳ ಮತ್ತು ಕಾರವಾರ ಕ್ಷೇತ್ರಕ್ಕೆ ಇನ್ನೂ ಎಂ.ಎಲ್.ಎ ಅಭ್ಯರ್ಥಿಯನ್ನು ಬಿಜೆಪಿ ಘೋಷಣೆ ಮಾಡದೇ ಇರುವುದರಿಂದ ಅತಿ ಹೆಚ್ಚು ಗಲಾಟೆ ಮಾಡಿ ಸೀಟು ಗಿಟ್ಟಿಸಿಕೊಳ್ಳುವ ಪ್ರಯತ್ನ ಇವರದು. ಜೆ.ಡಿ.ಎಸ್. ಪಕ್ಷಾಂತರಿ ದಿನಕರ ಶೆಟ್ಟಿ, ಉದ್ಯಮಿ ಯಶೋಧರ ನಾಯ್ಕ, ನಿವೃತ್ತ ಅಧಿಕಾರಿ ನಾಗರಾಜ್ ನಾಯಕ, ಶ್ರೀಕುಮಾರ್ ಟ್ರಾವೆಲ್ಸ ಮಾಲಿಕ ವೆಂಕಟ್ರಮಣ ಹೆಗಡೆ ನಡುವೆ ಸೀಟಿಗಾಗಿ ಪೈಪೋಟಿ ನಡೆಯುತ್ತಿದೆ. ಇವರೆಲ್ಲರೂ ಅಮಿತ್ ಷಾ ಮಂತ್ರಿ ತಂತ್ರವನ್ನು ಅನಂತ ಕುಮಾರ್ ಹೆಗಡೆಯನ್ನು ಮೆಚ್ಚಿಸುವ ಮೂಲಕ ಎಂ.ಎಲ್.ಎ ಟಿಕೆಟ್ ಗಿಟ್ಟಿಸಲು ಪ್ರಯತ್ನದಲ್ಲಿದ್ದಾರೆ. ಹೆಚ್ಚು ಗಲಾಟೆ ದೊಂಬಿ ಎಬ್ಬಿಸಿದವರಿಗೆ ಸೀಟು ಕೊಡುವ ಬಿಜೆಪಿಯ ಸಂಪ್ರದಾಯಕ್ಕೆ ಜಿಲ್ಲೆಯು ಬಲಿಯಾಗುತ್ತಿದೆ.

ನಮ್ಮ ಮೆಚ್ಚಿನ ಉತ್ತರ ಕನ್ನಡ ಜಿಲ್ಲೆಯ ಸ್ಥಿತಿ ನೋಡನೋಡುತ್ತಿದ್ದಂತೆ ಹೀಗೇಕಾಯಿತು? ನಮ್ಮನ್ನು ನಾವೇ ವಿಮರ್ಶಿಸಿಕೊಳ್ಳಲು ಇದು ಸಕಾಲ. ಬಲಪಂಥೀಯ ರಾಜಕಾರಣದ ಚದುರಂಗದಾಟಕ್ಕೆ ಸೌಹಾರ್ದದ ನೆಲೆಯನ್ನು ವ್ಯವಸ್ಥಿತವಾಗಿ ಬಲಿಕೊಡಲಾಗುತ್ತಿದೆ. ಕಳೆದ 24 ವರ್ಷಗಳ ಕಾಲ ಕೆನರಾ ಲೋಕಸಭಾ ಕ್ಷೇತ್ರವನ್ನು ತನ್ನ ಉಗ್ರ ಹಿಂದುತ್ವದ ಭಾಷಣದಿಂದ ಮತ್ತು ಆರ್. ವಿ. ದೇಶಪಾಂಡೆ ಕಾಂಗ್ರೆಸ್ ಮತ್ತು ಮಾರ್ಗರೇಟ್ ಆಳ್ವಾ ಕಾಂಗ್ರೆಸ್ ಎನ್ನುವ ಕಾಂಗ್ರೆಸ್ ಒಳಗಿನ ಒಳಜಗಳದ ಲಾಭ ಪಡೆದು ಗೆಲ್ಲುತ್ತಿರುವ ಅನಂತ ಕುಮಾರ್ ಹೆಗಡೆ ಪ್ರತಿ ಚುನಾವಣೆ ಬಂದಾಗಲು ಗಲಭೆ ಎಬ್ಬಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ಒಮ್ಮೆ ಗೆಲ್ಲುವುದು ಮತ್ತೆ ನಾಲ್ಕು ವರ್ಷ ಮಂಗಮಾಯ. ಕೊನೆಯ ವರ್ಷ ಮತ್ತೆ ಜಿಲ್ಲೆಯಲ್ಲಿ ಕೋಮುಗಲಭೆ; ಮತ್ತೆ ಚುನಾವಣೆ. ಹೀಗೆ ಕ್ರಿಮಿನಲ್ ಹಿನ್ನೆಲೆಯ ಸಂಸದರಿಗೆ ಕೇಂದ್ರ ಮತ್ತಿಯನ್ನಾಗಿಸುವ ಮೂಲಕ 'ಮಂಗನಿಗೆ ಹೆಂಡ ಕುಡಿಸಿದಂತೆ' ಅಂತಾರಲ್ಲಾ ಹಾಗಾಯ್ತು. ಸಚಿವರಾಗಿ ಜಿಲ್ಲೆ ಪ್ರವೇಶಿಸಿದ ದಿನದಿಂದಲೇ ಜಿಲ್ಲೆಗೆ ಬೆಂಕಿ ಇಡುವ ಕೆಲಸವನ್ನು ಮಾಡತೊಡಗಿದರು. ಅದರ ಫಲವೇ ಇಂದು ಹೊನ್ನಾವರ, ಚಂದಾವರ, ಕುಮಟಾ, ಶಿರಸಿಗಳಲ್ಲಿ ನಡೆದ ಹಿಂಸಾತ್ಮಕ ದಾಂಧಲೆ.

ನಾಲ್ಕಾರು ದಿನಗಳಿಂದ ಹೊನ್ನಾವರದ ಸುತ್ತಮುತ್ತ ಶಾಲೆ ಕಾಲೇಜುಗಳು ಕೆಲಸ ನಿರ್ವಹಿಸಲಿಲ್ಲ. ಯಾವುದೇ ಗ್ರಾಮೀಣ ಭಾಗಕ್ಕೆ ಬಸ್ ಇಲ್ಲ. ಬೇರೆ ಊರುಗಳಿಂದ ಹೊನ್ನಾವರಕ್ಕೆ ಬಂದರೆ ಮನೆ ತಲುಪಲು ರಿಕ್ಷಾ-ಟೆಂಪೋಗಳು ಇಲ್ಲ. ನಗರದಲ್ಲಿ ಇರುವ ಹಮಾಲಿ, ದಿನಗೂಲಿ, ಕೂಲಿಯಾಳುಗಳಿಗೆ ಕೆಲಸವೂ ಇಲ್ಲ. ಹೊಟ್ಟೆಗೆ ಊಟವೂ ಇಲ್ಲ. ಬಹುತೇಕ ಹೊಟೆಲ್ ಅಂಗಡಿ-ಮುಗ್ಗಟ್ಟುಗಳು ಪೂರ್ತಿ ಬಂದ್. ಇಡೀ ತಾಲೂಕಿನಲ್ಲೇ ಭಯದ ವಾತಾವರಣ. ಇದೆಲ್ಲವೂ ನಡೆದಿದ್ದು ಕೋಮುವಾದಿ ರಾಜಕೀಯ ಪಕ್ಷವೊಂದರ ಸುಳ್ಳು ಹೇಳಿಕೆಯಿಂದ ಮತ್ತು ಸಾಮಾಜಿಕ ಜಾಲತಾಣವನ್ನು ದುರುಪಯೋಗ ಮಾಡಿಕೊಂಡು ಸುಳ್ಳು ಸುದ್ದಿಯನ್ನು ಹರಿಬಿಟ್ಟಿರುವುದರಿಂದ. ಹಾಗೆ ನೋಡಿದರೆ ಇದು ಕೋಮು ಗಲಭೆಯೇನೂ ಅಲ್ಲ. ಉಳಿದ ತಾಲೂಕುಗಳಲ್ಲಿ ಏಕಪಕ್ಷಿಯವಾಗಿ ಹತಾಶೆಗೊಂಡ ಬಿಜೆಪಿ ಮತ್ತದರ ಪರಿವಾರಗಳು ನಡೆಸುತ್ತಿರುವ ದಾಳಿಯಾಗಿದೆ.

ಚಂದಾವರ ಪ್ರಕರಣ

ಚಂದಾವರ ಹಲವು ದಶಕಗಳ ಕಾಲ ಕೋಮು ಸೌಹಾರ್ದತೆಗೆ ಹೆಸರಾದ ಸ್ಥಳ. ಹನುಮಂತ ದೇವರ ದೇವಸ್ಥಾನ, ಮಸೀದಿ ಮತ್ತು ಚರ್ಚು ಈ ಊರಿನಲ್ಲಿದೆ. ತಾಲೂಕಿನ ಉಳಿದ ಊರುಗಳಿಗೆ ಹೋಲಿಸಿದರೆ ಮುಸ್ಲಿಂ ಕುಟುಂಬ ಸ್ವಲ್ಪ ಹೆಚ್ಚು ಇರುವ ಊರು ಇದು. ಮೂರೋ ನಾಲ್ಕೊ ಅಂಗಡಿ ಬಿಟ್ಟರೆ ಪಾತ್ರೆ ವ್ಯಾಪಾರ, ಕಲಾಯಿ, ಕಬ್ಬಿಣದ ಕೆಲಸ ಮಾಡುವುದು, ಮನೆಮನೆಗೆ ಹೋಗಿ ಸಣ್ಣ ಪುಟ್ಟ ವ್ಯಾಪಾರ ಮಾಡುವುದು, ಎತ್ತಿನ ಕಾಲಿಗೆ ಲಾಳ ಹೊಡೆಯುವುದು, ಮೀನು ವ್ಯಾಪಾರ ಹೀಗೆ ಸೀಜನ್ ಆಧಾರಿತ ಕೆಲಸ. ಹಿಂದೂ ಮತ್ತು ಕ್ರಿಶ್ಚಿಯನ್ ಮತಾವಲಂಬಿಗಳು ಬಹುತೇಕ ಇವರಂತೆಯೇ ಬಡವರು ಅಥವಾ ಸಣ್ಣ ಮಧ್ಯಮ ವರ್ಗದವರು. ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಣ್ಣಪುಟ್ಟ ಮನಸ್ತಾಪ, ಬೇಸರ, ಆಪಾದನೆ ಇದ್ದರೂ ಅದು ತಾತ್ಕಾಲಿಕವಾಗಿತ್ತು. ಸಂಬಂಧಗಳು ಅನ್ಯೋನವಾದದ್ದೇ. ಇದು ಗಲಭೆಯ ಮಟ್ಟಕ್ಕೇನೂ ಹೋಗಿರಲಿಲ್ಲ. ಕೂಡಿ ಬಾಳುವ ಕಲೆಯನ್ನು ಅವರ ದಿನನಿತ್ಯದ ಬಡತನವೇ ಅವರಿಗೆ ಕಲಿಸಿಕೊಟ್ಟಿತ್ತು.

ಚಂದಾವರದಲ್ಲಿರುವ ನಾಕಾವೃತ್ತದ ಬಳಿ ಕಾರ್ತಿಕ ದೀಪೋತ್ಸವದಲ್ಲಿ ಹನುಮಂತ ದೇವರ ಉತ್ಸವ ಮೂರ್ತಿ ಸ್ಥಾಪಿಸಿ ಅಲಂಕಾರ ಮಾಡಲಾಗುತ್ತಿತ್ತು. ಮುಸ್ಲಿಂ ಸಮಾಜದವರು ಈ ನಾಕಾ ಸ್ಥಳದಲ್ಲಿ ತಮ್ಮ ಹಬ್ಬದ ಸಂದರ್ಭದಲ್ಲಿಯೂ ತಾತ್ಕಾಲಿಕ ಗುಮ್ಮಟ ಸ್ಥಾಪಿಸಿ ಶ್ರಂಗರಿಸುತ್ತಿದ್ದರು. ಇದೊಂದು ಸಾರ್ವಜನಿಕ ಸ್ಥಳವಾಗಿದೆ. ಕಳೆದ ವರ್ಷ ಎರಡು ಸಮುದಾಯದ ನಡುವೆ ಈ ವಿಷಯದಲ್ಲಿ ಸ್ವಲ್ಪ ಕಸಿವಿಸಿ ನಡೆದರೂ ಮಾತುಕತೆ ಮೂಲಕ ಸುಸೂತ್ರವಾಗಿ ಹಬ್ಬ ನಡೆದಿತ್ತು. ಈ ವರ್ಷ ಇದು ಉಲ್ಬಣಕ್ಕೆ ಹೋಗಿ ಈ ಎರಡೂ ಕೋಮಿನ ನಡುವೆ ಸ್ವಲ್ಪ ತಕರಾರು ಸಂಭವಿಸಿತು. ಆದರೆ ಈದ್ ಮಿಲಾದ್ ಗೆ ಒಂದೆರಡು ದಿನ ಇರುವಾಗ ಚಂದಾವರದ ಹೊರಗಿನಿಂದ ಬಂದ ಹಿಂದುತ್ವವಾದಿ ಸಂಘಟನೆಗಳ ಯುವಕರು ಗಲಾಟೆ ಎಬ್ಬಿಸಿದರು. ಮುಸ್ಲಿಂ ಹುಡುಗರು ಪ್ರಚೋದನೆಗೊಂಡರು. ಶಾಂತಿ ಸಭೆ ಗ್ರಾಮಪಂಚಾಯ್ತಿಯಲ್ಲಿ ನಡೆಸಿದರು. ಪೊಲಿಸ್ ಪ್ರವೇಶದಿಂದ ಅಲ್ಲಿಗೆ ಅದು ಮುಕ್ತಾಯವಾಯಿತು. ನವೆಂಬರ್ ಕೊನೆಯ ವಾರದಲ್ಲಿ ಈ ಒಳಜಗಳ ನಡೆದೇ ಇತ್ತು. ಪೊಲಿಸ್ ಮಾಹಿತಿಯೂ ಇತ್ತು. ಆದರೆ ಎಲ್ಲಾ ಸಮುದಾಯದ ಐದಾರು ಜನ ಬನ್ನಿ ಎಂದರೆ ಹಿಂದುತ್ವವಾದಿ ಸಂಘಟನೆಯವರು ಬೇರೆಬೇರೆ ಊರುಗಳಿಂದ ನೂರಾರು ಜನ ಸೇರಿ ಗೊಂದಲವುಂಟು ಮಾಡಿದ್ದರು. ಆದರೆ ಮತ್ತೆ ಮರುದಿನ ಹಬ್ಬದ ಶ್ರಂಗಾರ ಸಂದರ್ಭದಲ್ಲಿ ಹಿಂದುತ್ವವಾದಿಗಳು ಬಾವುಟ ಕಿತ್ತೊಗೆದು ತಡೆಯೊಡ್ಡಿದರು. ದಿನಾಂಕ 1-12-2017 ರಂದು ಹೊನ್ನಾವರ ತಾಲೂಕಿನ ಚಂದಾವರದಲ್ಲಿ ನಡೆದ ಈದ್ ಮಿಲಾದ್ ಉನ್ನಬಿ ಆಚರಣೆಗೆ ಅಡ್ಡಿಪಡಿಸಿದ ಘಟನೆಯಿಂದ ಗಲಭೆ ಪ್ರಾರಂಭವಾಯಿತು. ಕುಮಟಾದ ಬಿಜೆಪಿ ಮುಖಂಡ ಸೂರಜ್ ನಾಯ್ಕ ಸೋನಿ ಎಂಬವರು ಅಲ್ಲಿಯ ಗಲಭೆಗೆ ನೇತೃತ್ವ ನೀಡಿದರು. ತನ್ನ ಕಾರಿಗೆ ಯಾರೋ ಕಲ್ಲು ತೂರಾಟ ನಡೆಸಿದರು ಅದು ಮುಸ್ಲಿಮರೇ ನಡೆಸಿದ್ದಿದ್ದೆಂದು ಆಪಾದಿಸಿ ಬಿಜೆಪಿ ಗಲಾಟೆ ಮಾಡಿತು. ಪೊಲಿಸ್ ಪ್ರವೇಶಿಸಿ ಹಲವರನ್ನು ಬಂಧಿಸಿ ಕಾರವಾರಕ್ಕೆ ಕರೆದೊಯ್ದರು. ಇದನ್ನು ವಿರೋಧಿಸಿ **ಹೊನ್ನಾವರ ಕುಮಟಾ ಬಂದ್‌ಗೆ ಕರೆ ಕೊಡುವ ಮೂಲಕ ಬಿಜೆಪಿ ಇದನ್ನು ರಾಷ್ಟ್ರೀಯ ಸಂಗತಿಯಾಗಿಸಿಕೊಳ್ಳಲು ಹೊಂಚು ಹಾಕಿತು. ಡಿಸೆಂಬರ್ 2 ಮತ್ತು 3 ರಂದು ಸುಮಾರು 50 ಜನರ ಬಂಧನ ನಡೆಯಿತು.**

ಹೀಗೆ ಮೈಸೂರು ಭಾಗದಲ್ಲಿ ಪ್ರತಾಪಸಿಂಹ ಅಮಿತ್‌ಶಾ ಅವರ ಗಲಭೆ-ದೊಂಬಿಯ "ಲಾಠಿಚಾರ್ಜ-ಟಿಯರ್ ಗ್ಯಾಸ್" ಮಂತ್ರ ತಂತ್ರವನ್ನು ಜಾರಿಮಾಡುತ್ತಿರುವಂತೆ, ಉತ್ತರಕನ್ನಡದಲ್ಲಿ ಅನಂತಕುಮಾರ ಹೆಗಡೆ ಅದನ್ನು ಉಗ್ರವಾಗಿಯೇ ಜಾರಿಗೆ ತಂದರು.

ಈದ್ ಮಿಲಾದ್ ಜೊತೆಗೆ ಸಮಸ್ಯೆ ಮುಗಿದರೂ ಬಿ.ಜೆ.ಪಿ.ಯವರು ಮಾತ್ರ ಇದನ್ನು ಜೀವಂತ ಇಟ್ಟುಕೊಳ್ಳಲು ಹರಸಾಹಸ ಮಾಡುತ್ತಿದ್ದರು. ಅದರಲ್ಲೂ ಯಡಿಯೂರಪ್ಪನ ಪರಿವರ್ತನಾ ಯಾತ್ರೆ ರಾಜ್ಯದ ಹಲವೆಡೆ ಜನರಿಲ್ಲದೇ ಸೋತು ಹೋದ ಅವಮಾನವನ್ನು ಸರಿಪಡಿಸಲು ಇದೇ ದಾರಿಯನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಪರಸ್ಪರ ಎತ್ತಿಕಟ್ಟುವ ಕೆಲಸ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಪರಸ್ಪರ ಎತ್ತಿಕಟ್ಟುವ ಕೆಲಸ ನಡೆದೇ ಇತ್ತು. ಹುಣಸೂರಿನಲಿ ಪ್ರತಾಪಸಿಂಹರ ಕೃತ್ಯ ಬೆಂಬಲಿಸಿ, ಅನಂತ ಕುಮಾರ "ಉಕ ಜಿಲ್ಲೆಯಲ್ಲಿ ಇಷ್ಟು ಹೊತ್ತಿಗೆ ಹೊತ್ತಿ ಉರಿಯುತ್ತಿತ್ತು" ಎಂದು ಹೇಳಿದ್ದರ ಪರಿಣಾಮ ಬಿಜೆಪಿ ಕಾರ್ಯಕರ್ತರು ಉನ್ಮಾದದಲ್ಲಿದ್ದರು. ಬಿಜೆಪಿ ಪರಿವಾರ ಜಿಲ್ಲೆಯ ವಿವಿಧೆಡೆ ಡಿಸೆಂಬರ್ 2 ರಿಂದ 6 ರವರೆಗೆ ಪ್ರತಿಭಟನೆ

ಪುಟ 10 ಕ್ಕೆ



ಪರಮೇಶ ಮೆಸ್ತ ಹಿಂದೂ ಕಾರ್ಯಕರ್ತ ಎಂಬ ಪ್ರಚಾರ!

ನಿರ್ದಿಷ್ಟ ಸಂದರ್ಭಗಳಲ್ಲಿ ನಡೆಯುವ ಕೆಲವು ಅನುಮಾನಾಸ್ಪದ ಸಾವುಗಳನ್ನು ತಮ್ಮ ರಾಜಕೀಯಕ್ಕೆ ಬೆಳೆಸಿಕೊಂಡರೆ ಅದರಿಂದ ಸಮೃದ್ಧ ಫಲ ತೆಗೆಯಬಹುದು ಎಂದು ಸಂಘಪರಿವಾರಕ್ಕೆ ಚೆನ್ನಾಗಿ ಗೊತ್ತಿದೆ. ಹೀಗಾಗಿ ಇಂತಹ ಸಂದರ್ಭಗಳಲ್ಲಿ ಸತ್ತ ಯುವಕರು ಮರಣೋತ್ತರವಾಗಿ "ಹಿಂದೂ ಕಾರ್ಯಕರ್ತ" ಆಗುತ್ತಾನೆ. ಮಾಧ್ಯಮಗಳು ಹಿಂದೂ ಕಾರ್ಯಕರ್ತನ ಹತ್ಯೆ ಎಂದು ಪ್ರಚಾರ ಮಾಡಿ ಸಂಘಪರಿವಾರದ ಹುನ್ನಾರವನ್ನು ಯಶಸ್ವಿಗೊಳಿಸುತ್ತವೆ. ಪರೇಶ್ ಮೇಸ್ತ ಹೊನ್ನಾವರದ ಬಂದರಿನಲ್ಲಿ ಲೆಕ್ಕ ಬರೆಯುವ ಕೆಲಸ ಮಾಡಿಕೊಂಡಿದ್ದ. ಆತ ಹಿಂದೂ ಸಂಘಟನೆಯಲ್ಲಿ ಸಕ್ರಿಯ ಕಾರ್ಯಕರ್ತನಂತೂ ಅಲ್ಲ ಎಂದು ಹೇಳಲಾಗಿದೆ.



ವಾಟ್ಸಪ್, ಫೇಸ್ ಬುಕ್ ಪ್ರಚೋದನಕಾರಿ ಅಪಪ್ರಚಾರ

ವಾಟ್ಸಪ್, ಫೇಸ್ ಬುಕ್ ಅಪಪ್ರಚಾರಕ್ಕೆ ಕಡಿವಾಣ ಹಾಕುವಲ್ಲಿ ವೈಫಲ್ಯತೆ ಉತ್ತರ ಕನ್ನಡವನ್ನು ಉದ್ವಿಗ್ನಗೊಳಿಸಿದೆ. ಪರೇಶ್ ಮೇಸ್ತ ಎಂಬ ಯುವಕನನ್ನು ಆತನ ಕುತ್ತಿಗೆಗೆ ವಯರ್ ಬಿಗಿದು, ಮುಖಕ್ಕೆ ಕಾದ ಎಣ್ಣೆಯನ್ನು ಸುರಿದು, ಕೈಯಲ್ಲಿದ್ದ ಶ್ರೀರಾಮನ ಹಚ್ಚೆಯನ್ನು ಚರ್ಮ ಸಹಿತ ಕಿತ್ತು ಹಾಕಿ, ಮರ್ಮಾಂಗಗಳನ್ನು ಕತ್ತರಿಸಿ, ಕರುಳನ್ನು ಸೀಳಿ, ಬಾಯಲ್ಲಿ ಮೂತ್ರ ಹೊಯ್ದು ಐಸಿಸ್‌ಗಿಂತಲೂ ಬರ್ಬರವಾಗಿ ಕೊಲೆ ಮಾಡಲಾಗಿದೆ ಎಂದು ಸೋಷಿಯಲ್ ಮೀಡಿಯಾದಲ್ಲಿ ನೂರು ಶೇಕಡಾ ಸುಳ್ಳಿನ ಕಂತೆ ಪೋಸ್ಟ್ ಗಳು ಹರಿದಾಡಿದವು.

ಯುವಜನರ ಕೈಯಲ್ಲಿರುವ ಸ್ಮಾರ್ಟ್‌ಫೋನ್‌ಗಳು ಸೌಹಾರ್ದತೆಯಿಂದ ಸ್ಮಾರ್ಟ್ ಆಗಿದ್ದ ಊರುಗಳ ಸೌಹಾರ್ದತೆ ಕೆಡಿಸುವ ಸಾಧನಗಳಾಗಿ ಮಾರ್ಪಟ್ಟಿವೆ. ಉತ್ತರ ಕನ್ನಡ ಪೊಲೀಸರು ಈ ಸೊಷಿಯಲ್ ಮೀಡಿಯಾದ ವಿಕೃತ ಬರಹಗಳನ್ನ ಆರಂಭದಲ್ಲೆ ಹೊಸಕಿ ಹಾಕುವ ಯತ್ನ ಮಾಡಿದ್ದರೆ ಕುಮಟಾ ಹೊನ್ನಾವರ ಪಟ್ಟಣಗಳು ಈ ಮಟ್ಟಿಗೆ ಉರಿಯುತ್ತಿರಲಿಲ್ಲ. ಇಂತಹ ಪ್ರಚೋದನಕಾರಿ ಫೇಸ್ ಬುಕ್ ಪೋಸ್ಟುಗಳ ಎರಡು ಉದಾಹರಣೆಗಳು ಇಲ್ಲಿವೆ.



ಉತ್ಪಾದನಾ ವಲಯಗಳ ಸ್ಥಳಾಂತರ ಬೆಂಗಳೂರು ನಗರ ರೂಪಾಂತರ



ನಗರ ಪ್ರದೇಶದಲ್ಲಿ ದಶಕಗಳಿಂದ ಸ್ಥಾಪನೆಯಾಗಿದ್ದ ಕಾರ್ಖಾನೆಗಳು ಹೊರವಲಯಕ್ಕೆ ಸ್ಥಳಾಂತವಾಗುತ್ತಿವೆ. ಆ ಸ್ಥಳಗಳಲ್ಲಿ ಬಹುಮಹಡಿ ವಸತಿ ಸಮುಚ್ಚಯಗಳು, ಮಾಲ್‌ಗಳು, ಸಾಫ್ಟ್‌ವೇರ್ ಉದ್ದಿಮೆಗಳಿಗೆ ಕಛೇರಿ ಸ್ಥಳಾವಕಾಶಗಳು, ವ್ಯಾಪಾರ-ವಾಣಿಜ್ಯಕ್ಕೆ ಬಹುಮಡಿ ಮಳಿಗೆಗಳು ನಿರ್ಮಾಣವಾಗುತ್ತಿವೆ.

ಬಿಬಿಎಂಪಿ ಆಡಳಿತ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ ಮುಂತಾದವು ವ್ಯಾಪಕ ಚರ್ಚೆಗೆ ಒಳಗಾಗಿದವು. ಅಂತೆಯೇ ನೂತನ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಆಡಳಿತದ ಆಸ್ತಿ ತೆರಿಗೆ ಹೆಚ್ಚಳ, ಪ್ರಮಾಣಿಕ ಅಧಿಕಾರಿಗಳ ವರ್ಗಾವಣೆ, ಮುಂತಾದ ವಿಚಾರಗಳು ವ್ಯಾಪಕ ಚರ್ಚೆ, ಹೋರಾಟಗಳಿಗೆ ಕಾರಣವಾಗಿವೆ.

ಇದೇ ವೇಳೆ ಸ್ಥಳೀಯ ಆಡಳಿತದಲ್ಲಿ ಜನತೆಯ ಪಾಲ್ಗೊಳ್ಳುವಿಕೆಯನ್ನು ಬಲಪಡಿಸಬೇಕಿದ್ದ ಸರ್ಕಾರವು ಬಂಡವಾಳದ ಪ್ರತಿನಿಧಿಗಳನ್ನು ಒಳಗೊಂಡ ಕಾರ್ಯಪಡೆಯನ್ನು ರಚಿಸುತ್ತಿದೆ. ಚುನಾಯಿತ ಪ್ರತಿನಿಧಿಗಳ ಸಂವಿಧಾನದತ್ತ ಅಧಿಕಾರಕ್ಕೆ ಪರ್ಯಾಯ ರಾಜಕೀಯ ಒತ್ತಡ ಗುಂಪುಗಳಾಗಿ, ಕೇಂದ್ರಗಳಾಗಿ ಕಾರ್ಯಾಚರಿಸುತ್ತಿವೆ. ಒಟ್ಟಾರೆ ನಾಗರೀಕ ಪ್ರಶ್ನೆಗಳ ಮೇಲಿನ ಬಂಡವಾಳದ ಪ್ರತಿನಿಧಿಗಳ ನೇರ ಹಿಡಿತ ಹೆಚ್ಚುತ್ತಿದೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದುಡಿಯುವ ಜನತೆಯ ಪರಿಸ್ಥಿತಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳು ನಡೆಸಬೇಕಾದ ಹೋರಾಟಗಳ ರೂಪರೇಷೆಯನ್ನು ಸಿಪಿಐ(ಎಂ) ಬೆಂಗಳೂರು ದಕ್ಷಿಣ 22ನೇ ಜಿಲ್ಲಾ ಸಮ್ಮೇಳನವು ಚರ್ಚಿಸಿ ನಿರ್ಣಯಿಸಲಿದೆ.

(ಡಿಸೆಂಬರ್ 15-17ರಲ್ಲಿ ನಡೆಯುತ್ತಿರುವ ಬೆಂಗಳೂರು ದಕ್ಷಿಣ ಸಿಪಿಐ(ಎಂ) ಜಿಲ್ಲಾ ಸಮ್ಮೇಳನದ ಸಂದರ್ಭದಲ್ಲಿ ದುಡಿಯುವ ಜನತೆಯ ದೃಷ್ಟಿಯಿಂದ ಬೆಂಗಳೂರಿನ ಬದಲಾಗುತ್ತಿರುವ ಪರಿಸ್ಥಿತಿ ಬಗ್ಗೆ ವಿಶೇಷ ಲೇಖನ.)

ಕೆ.ಎನ್.ಉಮೇಶ್

ಬೆಂಗಳೂರು ಮಹಾನಗರದ ಬೆಳವಣಿಗೆಗೆ ವೇಗೋತ್ಕರ್ಷ ನೀಡುವ ನಿಟ್ಟಿನಲ್ಲಿ ಬೆಂಗಳೂರು ಅಭಿವೃದ್ಧಿಯ ವಿವಿಧ ಪರಿಕಲ್ಪನೆ-ವಿಚಾರಗಳು ಚರ್ಚಿತವಾಗುತ್ತಿವೆ. ಕಳೆದ 3 ದಶಕಗಳ ಬೆಂಗಳೂರಿನ ಬೆಳವಣಿಗೆ ನಗರಕ್ಕೆ ಹರಿದು ಬರುತ್ತಿರುವ ವಲಸೆ ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳ ಚಹರೆಯನ್ನೆ ಗುರುತಿಗೆ ಸಿಗದಂತೆ ಬದಲಾಯಿಸಿ ನಗರ ಪ್ರದೇಶದಲ್ಲಿ ದಶಕಗಳಿಂದ ಸ್ಥಾಪನೆಯಾಗಿದ್ದ ಕಾರ್ಖಾನೆಗಳು ಹೊರವಲಯಕ್ಕೆ ಸ್ಥಳಾಂತವಾಗುತ್ತಿವೆ. ಆ ಸ್ಥಳಗಳಲ್ಲಿ ಬಹುಮಹಡಿ ವಸತಿ ಸಮುಚ್ಚಯಗಳು, ಮಾಲ್‌ಗಳು, ಸಾಫ್ಟ್‌ವೇರ್ ಉದ್ದಿಮೆಗಳಿಗೆ ಕಛೇರಿ ಸ್ಥಳಾವಕಾಶಗಳು, ವ್ಯಾಪಾರ-ವಾಣಿಜ್ಯಕ್ಕೆ ಬಹುಮಡಿ ಮಳಿಗೆಗಳು ನಿರ್ಮಾಣವಾಗುತ್ತಿವೆ. ಕಣ್ಣುಕುಕ್ಕುವ ಅಲಂಕಾರಿಕ ಕಟ್ಟಡಗಳು ತಲೆ ಎತ್ತಿವೆ, ಎತ್ತುತ್ತಿವೆ. ಒಂದೇ ಬಾರಿಗೆ ಈ ಕಟ್ಟಡಗಳಿಂದ ಹೊರಬರುವ ಸಾವಿರಾರು ಸ್ವಂತ ಕಾರುಗಳು ನಗರದ ರಸ್ತೆಗಳನ್ನು ಜಾಮ್ ಮಾಡುತ್ತಿವೆ. ನಗರದ ಹೊರವಲಯಕ್ಕೆ ಸ್ಥಳಾಂತರಗೊಂಡ ಉತ್ಪಾದನಾ ಕಾರ್ಖಾನೆಗಳಿಗೆ ಕಾರ್ಮಿಕರು, ಸಿಬ್ಬಂದಿಗಳನ್ನು ಹೊತ್ತೊಯ್ಯುವ ವಾಹನಗಳು ಮತ್ತೊಂದೆಡೆ ರಸ್ತೆಗಳನ್ನು ಜಾಮ್ ಮಾಡುತ್ತಿವೆ.

ಉದ್ಯೋಗ ಪರಿಸ್ಥಿತಿ ಕುರಿತು ರಾಷ್ಟ್ರದ ಮಾಲೀಕರ ಸಂಘವಾದ **ASSOCHAM** ಕೈಗೊಂಡಿರುವ ಅಧ್ಯಯನದಲ್ಲಿ ಬೆಂಗಳೂರನ್ನು ಉದ್ಯೋಗ ಸೃಷ್ಟಿಯ ಸಕಾರಾತ್ಮಕ ನಗರ ಎಂದು ಗುರುತಿಸಲಾಗಿದೆ. "ಭಾರತದ ಆರ್ಥಿಕ ಭೌಗೋಳ 2025: ರಾಜ್ಯಗಳು, ಕೈಗಾರಿಕಾ ಸಮುಚ್ಚಯಗಳು ಮತ್ತು ನಗರಗಳು" ಕುರಿತು Mckinsey ವರದಿಯು "ಬೆಂಗಳೂರಿನಲ್ಲಿ ನಡೆದಿರುವ ಬೆಳವಣಿಗೆಯು ಸ್ಫೋಟವು ನಗರವನ್ನು ಗಂಭೀರ ನಾಗರಿಕ ಸಮಸ್ಯೆಗಳಿಗೆ ದೂಡಿದೆ" ಎಂದು ಗುರುತಿಸಿ, "ವಾಹನಗಳಿಂದ ತುಂಬಿ ಹೋಗಿರುವ ರಸ್ತೆಗಳು, ಪದೇ ಪದೇ ಕೈ ಕೊಡುವ ವಿದ್ಯುತ್ ಸರಬರಾಜು, ಖಚಿತತೆ ಇಲ್ಲದ ನೀರು ಸರಬರಾಜು ಮತ್ತು ಕಳಪೆ ಒಳಚರಂಡಿಯಂತಹ ಕಷ್ಟಕರ ಸಮಸ್ಯೆಗಳಿಂದಾಗಿ ಹೂಡಿಕೆದಾರರು ಬೆಂಗಳೂರಿಗೆ ಬದಲು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗುಡ್‌ಗಾಂವ್ ಮತ್ತು ನೋಯಿಡಗಳನ್ನು ಆಯ್ಕೆ ಮಾಡುತ್ತಿದ್ದಾರೆ"ಎಂದು ಗುರುತಿಸಿದೆ."ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾದ ಬೆಂಗಳೂರಿನ ಕುಸಿಯುತ್ತಿರುವ ಮೂಲ ಸೌಕರ್ಯವೇ ಇದಕ್ಕೆ ಕಾರಣ" ಎಂದಿದೆ.ಮತ್ತೊಂದೆಡೆ ಬೆಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ ಕೇಂದ್ರೀಕರಿಸಿ ಹಲವು ಹೂಡಿಕೆದಾರರು ಬೆಂಗಳೂರಿನ ಉತ್ತರ ಭಾಗಕ್ಕೆ ಸ್ಥಳಾಂತರಿಸುತ್ತಿದ್ದಾರೆಂದು ಸಹಾ ಗುರುತಿಸಲಾಗಿದೆ.



ಮಾನವ ಗಂಟೆಗಳ ನಷ್ಟ :

ಏನೆಲ್ಲಾ ಮೇಲ್ಸೇತುವೆ, ಅಂಡರ್‌ಪಾಸ್, ಗ್ರೇಡ್ ಸಪರೇಡರ್, ರಿಂಗ್ ರೋಡ್ ಎಂದರೂ ನಗರದ ಜನತೆಯ ಸಾರಿಗೆ ಸಮಸ್ಯೆ, ಟ್ರಾಫಿಕ್ ಜಾಮ್ ತಪ್ಪದ ಪರಿ ನಿತ್ಯದ ಗೋಳಾಗಿದೆ. ಕೆಲಸದ ಸಮಯ 8 ರಿಂದ 9 ಗಂಟೆಯಾದರೆ, ಕೆಲಸಕ್ಕೆ ಹೋಗಿ ಬರಲು 2 ರಿಂದ 5 ಗಂಟೆವರೆಗೆ ರಸ್ತೆಗಳಲ್ಲೇ ಕಾಲ ಕಳೆವ ಪರಿಸ್ಥಿತಿ ಆಳುವ ಸರ್ಕಾರಗಳು ತಮ್ಮೆಲ್ಲಾ ಅಭಿವೃದ್ಧಿ ಯೋಜನೆಗಳಿಂದ ಜನತೆಗೆ ನೀಡಿರುವ ಕೊಡುಗೆಯಾಗಿದೆ. ಈಗಲು ಲಕ್ಷಾಂತರ ಕೋಟಿ ರೂ.ಗಳ ಯೋಜನೆಗಳು, ಅಭಿವೃದ್ಧಿಯ ನೀಲಿನಕ್ಷೆಗಳನ್ನು ಪ್ರಕಟಿಸುತ್ತಿದ್ದಾರೆ. ಪರಿಣಾಮವಾಗಿ ಈ ಸಮಸ್ಯೆಯೊಂದರಿಂದಲೇ ದಿನಕ್ಕೆ 60 ಕೋಟಿ ಮಾನವ ಗಂಟೆಗಳು ನಷ್ಟವಾಗುತ್ತಿವೆ. ಇದರಿಂದಾಗಿ ವಾರ್ಷಿಕ 50 ಕೋಟಿ ಲೀಟರ್ ತೈಲ 1350 ಕೋಟಿ ರೂಗಳ ಬೆಲೆಯ ತೈಲ ಮತ್ತು 2350 ಕೋಟಿ ರೂಗಳ ಮಾನವ ಘಂಟೆಗಳ ನಷ್ಟ ಸೇರಿ ಒಟ್ಟು 3700 ಕೋಟಿ ರೂಗಳ ನಷ್ಟ ಇದರೊಂದರಿಂದಲೇ ಆಗುತ್ತಿದೆ ಎಂದು ಬಿಡಿಎ ಕರಡು ಮಹಾಯೋಜನೆ 2031 ಗುರುತಿಸಿದೆ. ಈಗಿರುವಂತೆ ವ್ಯವಹಾರ ಮುಂದುವರಿದಲ್ಲಿ ಹಾಲಿ ಸಾರ್ವಜನಿಕ ಸಾರಿಗೆ ಬಸ್‌ಗಳ ಸಂಖ್ಯೆಯನ್ನು ದುಪ್ಪಟ್ಟು ಪಡಿಸಿದಲ್ಲಿ ಕೂಡ ಸಾರ್ವಜನಿಕ ಸಾರಿಗೆಯನ್ನು ಬಳಸುತ್ತಿರುವ 47 ಶೇಕಡ ಜನತೆಯ ಪ್ರಮಾಣ 36 ಶೇಕಡಕ್ಕೆ ಇಳಿಯಲಿದೆಯಂತೆ.

ಒಟ್ಟಾರೆ ಪರಿಸರಕ್ಕಾಗಿ ಎಂದು ಸ್ಥಳಾಂತರಗೊಳ್ಳುತ್ತಿರುವ ಕಾರ್ಖಾನೆಗಳು ಸ್ಥಳಾಂತರದ ಹೆಸರಿನಲ್ಲೂ ಲಕ್ಷಾಂತರ ಕೋಟಿ ಹಣಗಳಿಸುತ್ತಿವೆ. ದುಡಿಯುವ ಜನತೆಗೆ ಸಂಕಷ್ಟ ತಂದೊಡ್ಡಿ ಪರಿಸರದ ಮತ್ತಷ್ಟು ಹಾನಿಗೆ ಕಾರಣವಾಗುವ ರೀತಿಯಲ್ಲಿ ಬೆಳವಣಿಗೆಗೆ ಕೊಡುಗೆ ನೀಡುತ್ತಿವೆ. ನಗರ ಕೇಂದ್ರ ಸುತ್ತಮುತ್ತಲ ಪ್ರದೇಶಗಳಲ್ಲಿ ದಶಕಗಳಿಂದ ವಾಸವಿದ್ದವರು ಹೊರವಲಯಕ್ಕೆ ವಲಸೆ ಹೋಗುವ, ನಗರ ಕೇಂದ್ರದ ವಸತಿ ಪ್ರದೇಶಗಳು ಹೊರಗಿನಿಂದ ಬಂದ ವ್ಯಾಪಾರಿಗಳು, ಹಣ ಉಳ್ಳವರ ಪಾಲಾಗುತ್ತಿವೆ.

ನಗರದ ಹೊರವಲಯದಲ್ಲಿ ಗ್ರಾಮ ಪಂಚಾಯತಿ, ನಗರಸಭೆ, ಪುರಸಭೆ ವ್ಯಾಪ್ತಿಗೆ ಕಾರ್ಖಾನೆಗಳು ಸ್ಥಳಾಂತರವಾಗುತ್ತಿವೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದಾಗ ವಲಯ ಒಂದರ ಕನಿಷ್ಟ ವೇತನ ನೀಡುತ್ತಿದ್ದ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರ ಗ್ರಾಮ ಪಂಚಾಯತಿ ವ್ಯಾಪ್ತಿಯನ್ನು ವಲಯ 4 ಎಂದು ಹೊಸದಾಗಿ ಸೃಷ್ಟಿಸಿ ಬಂಡವಾಳಗಾರರಿಗೆ ಕನಿಷ್ಟ ವೇತನ ಪಾವತಿಯಲ್ಲೇ ದಿನ ಒಂದಕ್ಕೆ ಕೋಟ್ಯಾಂತರ ರೂಗಳನ್ನು ಉಳಿಸುವ ಭಾಗ್ಯವನ್ನು ನೀಡಿದೆ.

ಬಿಡಿಎ ಮಹಾಯೋಜನೆ – 2031:

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (BDA) ಇದುವರೆಗೂ 1984, 1995 ಮತ್ತು 2007 ರಲ್ಲಿ ಮೂರು ಮಹಾಯೋಜನೆಯನ್ನು ರೂಪಿಸಿದೆ. ಹಾಲಿ 2007ರಲ್ಲಿ ರೂಪಿಸಿದ್ದ ಮಹಾಯೋಜನೆ-2015 ಜಾರಿಯಲ್ಲಿದೆ. ಕರಡು ಮಹಾ ಯೋಜನೆ 2031 ಅನ್ನು ನವೆಂಬರ್ 27, 2017 ರಂದು ಬಿಡಿಎ ಬಿಡುಗಡೆ ಮಾಡಿದೆ. ಸಮಗ್ರ ಮತ್ತು ನಿಯಂತ್ರಿತ ಚೌಕಟ್ಟಿನೊಂದಿಗೆ ನಗರದ ನಿರ್ವಹಣೆ, ಅಭಿವೃದ್ಧಿ ಮತ್ತು ಬೆಳವಣಿಗೆಗೆ ನಿರ್ದೇಶನ ನೀಡುವ ಗುರಿ ಈ ಮಹಾಯೋಜನೆಗಳ ಉದ್ದೇಶವಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961 ರಡಿ ಒಮ್ಮೆ ಮಹಾಯೋಜನೆಯನ್ನು ಅಧಿಸೂಚನೆಗೊಳಿಸಿದರೆ ಅದು ಕಾನೂನು ಆಗುತ್ತದೆ. ಆದರೂ ಇಂತಹ ಯೋಜನೆಗಳ ನಡುವೆ ಹಾಗೂ ಅದರ ಜಾರಿಯ ನಂತರವು ನಗರದ ಜನತೆಯ ಬವಣೆ ತಪ್ಪಿಲ್ಲ.

2011ರ ಜನಗಣತಿ ಪ್ರಕಾರ 85 ಲಕ್ಷ ಜನಸಂಖ್ಯೆ ಹೊಂದಿದ್ದ ಬಿಬಿಎಂಪಿ ಪ್ರದೇಶವು, ರಾಜ್ಯದ 14.6 ಶೇಕಡ ಜನಸಂಖ್ಯೆ 0.64 ಶೇಕಡ ಭೂಭಾಗ ಹೊಂದಿದೆ. ರಾಷ್ಟ್ರದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ (GDP) 1.9 ಶೇಕಡ ಮತ್ತು ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ 33 ಶೇಕಡ ಕೊಡುಗೆಯನ್ನು ನೀಡುತ್ತಿದೆ. 2031ರ ಕರಡು ಮಹಾಯೋಜನೆಯ ಪ್ರಾಕ್ಷೇಪಣೆಯಂತೆ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದ ಜನಸಂಖ್ಯೆ ಅಂದಾಜು 2.04 ಕೋಟಿಯಷ್ಟು ಇರಲಿದೆ. ರಾಜ್ಯದ 28 ಶೇಕಡ ಜನಸಂಖ್ಯೆ ಬೆಂಗಳೂರಿನಲ್ಲಿರಲಿದೆ. ತಲಾ 350 ಲೀಟರ್‌ನಂತೆ ಒಟ್ಟು ಅಂದಾಜು 50 ಟಿಎಂಸಿ ನೀರಿನ ಅಗತ್ಯವಿದೆ. ಕಾವೇರಿಯಿಂದ ಲಭ್ಯವಾಗುವ ನೀರು ಒಟ್ಟು 29 ಟಿಎಂಸಿ ಮಾತ್ರವಾಗಿದೆ. ಹಾಲಿ 7826 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿರುವ 2031ರೊಳಗೆ 18,390 ಮೆಟ್ರಿಕ್ ಟನ್‌ಗೆ ಏರಿಕೆ ಆಗುವ ಅಂದಾಜನ್ನು ಮಹಾಯೋಜನೆ ಮಾಡಿದೆ.

ಬಿಎಂಆರ್‌ಡಿಎ ಸಂರಚನಾ ಯೋಜನೆ – 2031 :

ಒಂದೆಡೆ ಬಿಡಿಎ ಕರಡು ಮಹಾ ಯೋಜನೆ-2031 ಬೆಂಗಳೂರು ಮಹಾನಗರ ಪ್ರದೇಶಕ್ಕೆ (BMA) ಯೋಜಿಸಿದ್ದರೆ, ಮತ್ತೊಂದೆಡೆ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು (BMRDA) ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳನ್ನು ಒಳಗೊಂಡ ಒಟ್ಟು 8005 ಚದರ ಕಿ.ಮೀ ವ್ಯಾಪ್ತಿಯ ಪ್ರದೇಶಕ್ಕೆ 'ಪರಿಷ್ಕೃತ ಸಂರಚನ ಯೋಜನೆ-2031' ಅನ್ನು ಬಿಡುಗಡೆ ಮಾಡಿದೆ. ಬೆಂಗಳೂರಿನ ಮೇಲಿನ ಒತ್ತಡ ಕಡಿಮೆ ಮಾಡಲು 8 ಗ್ರೋಥ್ ಕ್ಲಸ್ಟರ್ ಮತ್ತು 4 ಗ್ರೋಥ್ ನೋಡ್ಸ್‌ಗಳನ್ನು ರೂಪಿಸಲು ಶಿಫಾರಸ್ಸು ನೀಡಿದೆ. 1998ರಲ್ಲಿ ರೂಪಿಸಿದ್ದ 2005 ರಲ್ಲಿ ಅಂಗೀಕಾರವಾದ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ಸಂರಚನ ಯೋಜನೆ-2011 ಪ್ರಸ್ತುತ ಜಾರಿಯಲ್ಲಿದೆ. ಪರಿಷ್ಕೃತ ಸಂರಚನ ಯೋಜನೆಯು 2031 ರ ವೇಳೆ ಈ ಪ್ರದೇಶದಲ್ಲಿ ಒಂದು ಕೋಟಿ 70 ಲಕ್ಷ ಜನಸಂಖ್ಯೆಯಿರಲಿದೆ ಎಂದು ಅಂದಾಜಿಸಿದೆ. 1) ಚೆನ್ನಪಟ್ಟಣ – ರಾಮನಗರ, 2) ಬಿಡದಿ -ಹಾರೋಹಳ್ಳಿ, 3) ಪೀಣ್ಯ – ನೆಲಮಂಗಲ, 4) ದಾಬಸಪೇಟೆ-ನೆಲಮಂಗಲ 5) ದೊಡ್ಡಬಳ್ಳಾಪುರ 6) ಯಲಹಂಕ – ದೇವನಹಳ್ಳಿ, 7) ಕೆ.ಅರ್.ಪುರ-ಹೊಸಕೋಟೆ, 8) ಜಿಗಣಿ-ಅತ್ತಿಬೆಲೆ-ಹೆಬ್ಬಗೋಡಿ-ಬೊಮ್ಮಸಂದ್ರ ಗ್ರೋಥ್ ಕ್ಲಸ್ಟರ್‌ಗಳನ್ನು ಮತ್ತು 1) ಆನೇಕಲ್ 2) ಕನಕಪುರ 3) ಮಾಗಡಿ 4) ವಿಜಯಪುರ ಗ್ರೋಥ್ ನೋಡ್‌ಗಳನ್ನು ರೂಪಿಸಲು

ಪುಟ 11 ಕ್ಕೆ

ಡೈನಾಮಿಕ್ ಸಿಟಿ ಮತ್ತು ಆರ್ಥಿಕತೆ

ಈ ಪ್ರದೇಶದಲ್ಲಿ ಒಂದೆಡೆ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹೆಚ್ಚುತ್ತಿರುವಾಗಲೇ, ದೊಡ್ಡ ಪ್ರಮಾಣದ ಆದಾಯವುಳ್ಳ ಉದ್ದಿಮೆದಾರರು,ಮಾಹಿತಿ ತಂತ್ರಜ್ಞಾನ(ಸಾಫ್ಟ್‌ವೇರ್) ಉದ್ಯೋಗಿಗಳು, ವ್ಯಾಪಾರಸ್ತರು, ಮಧ್ಯಮ ವರ್ಗದ ಜನರಿದ್ದಾರೆ. ದೊಡ್ಡ ಮಾಲ್‌ಗಳು, ಹೋಟೆಲ್‌ಗಳು, ವ್ಯಾಪಾರ ವಹಿವಾಟಿನ ಕೇಂದ್ರಗಳು ಸಹ ಇವೆ. ಕೃಷಿ ಭೂಮಿಯ ಮಾರಾಟ, ರಿಯಲ್ ಎಸ್ಟೇಟ್ ವ್ಯಾಪಾರ, ಆಪಾರ್ಟ್‌ಮೆಂಟ್‌ಗಳ ಮತ್ತು ಕಛೇರಿ ಸ್ಥಳಗಳ ಬೇಡಿಕೆ ಎಲ್ಲವು ಸೇರಿ ದುಬಾರಿ ಜೀವನ ಶೈಲಿಯು ಮೇಲ್ಮಟ್ಟದಲ್ಲಿ ಕಂಡು ಬರುತ್ತದೆ. ವಿಶ್ವ ಆರ್ಥಿಕ ವೇದಿಕೆಯು ಬೆಂಗಳೂರನ್ನು ನಾವೀನ್ಯತೆಯ ಕೇಂದ್ರವೆಂದು ಗುರುತಿಸಿದೆ. ಇತ್ತೀಚಿಗೆ ಕ್ರಿಯಾತ್ಮಕ ನಗರ (Dynamic city) ಎಂದು ಸಹಾ ಗುರುತಿಸಿದೆ. ನಗರ ಜಿಲ್ಲೆಯ ಅರ್ಥಿಕ ಪ್ರಗತಿಯು ಶೇ.10.3 ರಷ್ಟಿದೆ. ದುಬಾರಿ ಬೆಲೆಯ ಅಪಾರ್ಟ್‌ಮೆಂಟ್‌ಗಳು, ಮಾಲ್‌ಗಳು, ಕಚೇರಿ ಸ್ಥಳಗಳು ಹೆಚ್ಚುತ್ತಿವೆ. ಅಸಂಖ್ಯಾತ ವಲಸೆ ಬಂದ ಅಸಂಘಟಿತ ಕಾರ್ಮಿಕರು ಮಾಸಿಕ ಆರೇಳು ಸಾವಿರಕ್ಕಿಂತ ಕಡಿಮೆ ಆದಾಯದಲ್ಲಿ ಬದುಕುವ ಪರಿಸ್ಥಿತಿ ಇದೆ.

ಬೆಂಗಳೂರು ನಗರ ಜಿಲ್ಲೆಯ ಒಟ್ಟಾರೆ ಆಂತರಿಕ ಉತ್ಪನ್ನ 993.25 ಶತ ಕೋಟಿ ರೂಗಳದಾಗಿದೆ. ಅದರಲ್ಲಿ ರೂ.683.30 ಶತ ಕೋಟಿ ಸೇವಾ ವಲಯದ ಕೊಡುಗೆಯಾಗಿದೆ. ಒಟ್ಟಾರೆ ರಾಜ್ಯದ ಅಂತರೀಕ ಉತ್ಪನ್ನಕ್ಕೆ 33.3 ಶೇಕಡ ಕೊಡುಗೆ ನೀಡುತ್ತಿದೆ. ಜಿಲ್ಲೆಯ ತಲಾ ವಾರ್ಷಿಕ ಆದಾಯ ರೂ.2,86,198 ಆಗಿದೆ.

ರಾಮನಗರ ಜಿಲ್ಲೆಯ ಒಟ್ಟಾರೆ ಆಂತರಿಕ ಉತ್ಪನ್ನ 56.39 ಶತ ಕೋಟಿ ರೂಪಾಯಿಗಳಾಗಿದೆ. ರಾಜ್ಯದ ಒಟ್ಟಾರೆ ಆಂತರೀಕ ಉತ್ಪನ್ನಕ್ಕೆ 1.9 ಶೇಕಡ ಕೊಡುಗೆ ನೀಡುತ್ತಿದೆ. ಜಿಲ್ಲೆಯ ತಲಾ ವಾರ್ಷಿಕ ಆದಾಯ ರೂ.70,095 ಆಗಿದೆ.

ವೇತನ ಹೆಚ್ಚಳವಾಗದಿರುವ ಹಿನ್ನಲೆಯಲ್ಲಿ ಏರುತ್ತಿರುವ ಬಸ್, ಸಾರಿಗೆ ದರಗಳು, ಆಹಾರ ಬೆಲೆಗಳು, ಮನೆ ಬಾಡಿಗೆಗಳು, ಶಾಲಾ ಕಾಲೇಜು ಶುಲ್ಕಗಳು ಪ್ರತಿ ನಿತ್ಯ ಒಂದಕ್ಕಿಂತ ಹೆಚ್ಚು ಉದ್ಯೋಗಗಳಿಗೆ ಹೋಗಬೇಕಾದ ಮತ್ತು ಗಂಡ ಹಾಗು ಹೆಂಡತಿ ಇಬ್ಬರು ದುಡಿಯಲೇಬೇಕಾದ ಅನಿವಾರ್ಯತೆಯನ್ನು ಕಾರ್ಮಿಕರಲ್ಲಿ ಸೃಷ್ಟಿಸಿವೆ.

ಕೋಮು ಗಲಭೆಯಲ್ಲ, ಅಲ್ಪಸಂಖ್ಯಾತರ ಮೇಲೆ ಏಕಪಕ್ಷೀಯ ದಾಳಿ........ ಪುಟ 8 ರಿಂದ

ನಡೆಸಿದೆ. ಆದಾಗ್ಯೂ ಡಿ. 4–5–6 ರಂದು ಜಿಲ್ಲೆ ಶಾಂತವಾಗಿಯೇ ಇತ್ತು.

ಹೊನ್ನಾವರದಲ್ಲಿ ಅಘಘಾತದ ನಂತರ

ಹೀಗಿರಲು ದಿನಾಂಕ: 06–12–2017 ರಂದು(ಸಿಎಂ ಭೇಟಿಯ ದಿನ) ಸಂಜೆ 6–7 ಗಂಟೆಗೆ ಹೊನ್ನಾವರದ ಶರಾವತಿ ಸರ್ಕಲ್ಲಿನಲ್ಲಿ ಕಾಸರಗೋಡಿನ ಮುಸ್ಲಿಂ ಯುವಕನ ದ್ವಿಚಕ್ರವಾಹನಕ್ಕೂ ಮೇಸ್ತನೊಬ್ಬನ ರಿಕ್ಷಾಕ್ಕೂ ಸಣ್ಣ ಅಪಘಾತವಾಯಿತು. ಒಂದಿಷ್ಟು ಹೊತ್ತು ಗಲಾಟೆ ವಾತಾವರಣ ಏರ್ಪಟ್ಟರೂ ಇಬ್ಬರೂ ರಾಜಿ ಮಾಡಿಕೊಂಡು ತಮ್ಮ ತಮ್ಮ ಮನೆಗೆ ಹೋದರು. ಎಲ್ಲವೂ ತಣ್ಣಗಾಯಿತು ಎನ್ನುವಾಗ ಮುಖ್ಯಮಂತ್ರಿಯ ಕಾರ್ಯಕ್ರಮದಲ್ಲಿ ಪೋಲಿಸರೆಲ್ಲಾ ಭಾಗವಹಿಸಿದ್ದನ್ನು ಉಪಯೋಗಿಸಿಕೊಂಡು ರಾತ್ರಿ ಒಂದಿಷ್ಟು ಜನ ಗುಡ್ ಲಕ್ ಹೋಟೆಲ್ ಎದುರು ಗಲಾಟೆ ಎಬ್ಬಿಸಿದ್ದಾರೆ. ಇದಕ್ಕೂ ಮೊದಲು ಈದ್ ಮಿಲಾದ್ ಹಬ್ಬದ ಸಂಘರ್ಷದಲ್ಲಿ ಮುಸ್ಲಿಮರು ಬಿರಿಯಾನಿ ತಿನ್ನುವಾಗಲೂ ಇವರ ಗಲಾಟೆ ಇತ್ತು. ಮುಸ್ಲಿಂ ಸಮುದಾಯ ಅವರ ಹಲವು ಹಬ್ಬಗಳಿಗೆ ಉಪಯೋಗಿಸುತ್ತಿರುವ ಸ್ಥಳ –ಬಸ್ ನಿಲ್ದಾಣದ ಸಮೀಪ–ದಲ್ಲಿ ಟೆಂಪೋ ನಿಲ್ಲಲು ಕೊಡುತ್ತಿದ್ದರು. ಟೆಂಪೋದವರು ಅಲ್ಲೇ ಇರುವ ಒಂದು ಮರಕ್ಕೆ ಶನಿದೇವರ ಫೋಟೊ ಇಟ್ಟು ಕುಂಕುಮ ಹಾಕುತ್ತಿದ್ದರು. ಕೆಲವು ವರ್ಷದ ನಂತರ ಆ ಜಾಗದ ಹಕ್ಕು ಸಾಧಿಸಲು ಮುಂದಾದರು. ಅಲ್ಲೇ ಪಕ್ಕದಲ್ಲಿ ಒಂದು ದೇವಸ್ಥಾನವೂ ನಿರ್ಮಾಣ ಆಯ್ತು. ಈಗ ಇಡೀ ಸ್ಥಳವನ್ನು ತಮ್ಮ ವಶಕ್ಕೆ ತೆಗೆದು ಕೊಳ್ಳಲು ಹಿಂದೂ ಕೋಮುವಾದಿಗಳು ಪ್ರಯತ್ನಿಸಿ ಗಲಾಟೆ ಸೃಷ್ಟಿಸುತ್ತಿದ್ದಾರೆ. ಈ ಕೇಸ್ ನ್ಯಾಯಾಲಯದಲ್ಲಿದೆ. ಕಂದಾಯ ಇಲಾಖಾ ಅಧಿಕಾರಿಗಳು ಪಹಣಿ ಪತ್ರಿಕೆಯಲ್ಲಿ ಕೆಲವು ಲೋಪದೋಷ ಮಾಡಿದ್ದು ಇಂಥದ್ದೂ ಕೂಡ ಗಲಾಟೆಯಾಗಿ ಮಾರ್ಪಡಲು ಒಂದು ಕಾರಣವೆಂದು ಕೆಲವರು ಹೇಳುತ್ತಾರೆ.

ಹೀಗೆ ರಾತ್ರಿ ಪೋಲಿಸರಿಲ್ಲದ ಸಂದರ್ಭ ನೋಡಿ ಗುಡ್ ಲಕ್ ಹೋಟೆಲ್, ಮುಸ್ಲಿಂ ಮನೆ, ಅಂಗಡಿಗಳ ಮೆಲೆ ದಾಳಿ ನಡೆಯಿತು. ಅದಕ್ಕೆ ಕೆಲವು ಕಡೆ ಮುಸ್ಲಿಮರಿಂದಲೂ ಪ್ರತಿರೋಧ ಬಂದಿತು. ಈದ್ ಮಿಲಾದ್ ಮೆರವಣಿಗೆಗೆ ಶನಿದೇವಸ್ಥಾನದ ಹತ್ತಿರ ಕೇಸರಿ ಬಾವುಟ ಪ್ರದರ್ಶಿಸಿದರು. ಮರಕ್ಕೆ ಕಟ್ಟಿರುವ ಬಾವುಟ ಕಿತ್ತೆಸೆದರು. ಹೀಗಿರುವಾಗ ಪರೇಶ ಮೇಸ್ತ ಎನ್ನುವ 19 ವರ್ಷದ ಪರೇಶ ಮೇಸ್ತ ಎನ್ನುವ ಹುಡುಗ ಕಾಣೆಯಾದ. ಅದರ ಮರುದಿನವೇ ಮುಸ್ಲಿಂ ಸಮುದಾಯದವರು ಪರೇಶ ಮೇಸ್ತನನ್ನು ಅಪಹರಿಸಿ ಕೊಂದಿದ್ದಾರೆಂದು ಸುಳ್ಳು ಸುದ್ದಿ ಹಬ್ಬಿಸಿದಾಗ ಹೊನ್ನಾವರದ ನಗರ ಉದ್ವಿಗ್ನಗೊಂಡಿತು. ಬಸ್ಸು, ಟೆಂಪೊ ಅಂಗಡಿಯ ಮೇಲೆ ಕಲ್ಲು ಬೀಳಲು ಪ್ರಾರಂಭ ಆಯಿತು. ಸುಳ್ಳು ಸುದ್ದಿ ಹಬ್ಬಿಸಿ ಮೀನುಗಾರ ಮಹಿಳೆಯರನ್ನು ಇತರರನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಸೇರಿಸಿ ಆತಂಕ ಸೃಷ್ಟಿಸಿ, 7 ರಂದು ಹೊನ್ನಾವರ ಬಂದ್ ಆಯಿತು.

ಪರೇಶ ಮೇಸ್ತ ಸಾವಿನ ಸುತ್ತ

ದಿನಾಂಕ 08–12–2017 ರಂದು ಪರೇಶ ಮೇಸ್ತ, ಬಸ್ ಸ್ಟ್ಯಾಂಡ್ ಪಕ್ಕದ ಕೆರೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಸಿಕ್ಕಿದ. ಆತನ ಶವದ ಪೋಸ್ಟಮಾರ್ಟಂ ಡಿಸಿ, ಎಸ್.ಪಿ.ಯವರ ಸಮ್ಮುಖದಲ್ಲಿಯೇ ನಡೆಯಿತು.

ಅಷ್ಟರಲ್ಲಿ ಬಿಜೆಪಿ ರಾಜ್ಯ ಮುಖಂಡರು ಶಾಸಕ ಕಾಗೇರಿ, ಅನಂತಕುಮಾರ್ ಹೆಗಡೆ, ಶೋಭಾ ಮತ್ತು ಬಿಜೆಪಿ ಸಂಭಾವ್ಯ ಅಭ್ಯರ್ಥಿಗಳಾದ ಇತ್ತೀಚೆಗೆ ಜೆ.ಡಿ.ಎಸ್ ನಿಂದ ಬಿ.ಜೆ.ಪಿ ಸೇರಿದ ದಿನಕರ ಶೆಟ್ಟಿ, ಮುಖಂಡ ಸೂರಜ್ ನಾಯ್ಕ, ರಾಘವೇಶ್ವರ ಮಠದ ಬೆಂಬಲಿಗ ಹೊನ್ನಾವರ ವೆಂಕಟ್ರಮಣ ಹೆಗಡೆ, ಎಂ.ಜಿ ಹೆಗಡೆ, ಸುನಿಲ್ ನಾಯ್ಕ, ಉಮೇಶ ಮೇಸ್ತ, ಶಿವರಾಜ ಮೇಸ್ತ, ರಾಜು ಭಂಡಾರಿ ಹೀಗೆ ಅನೇಕರು ಗಲಾಟೆಗೆ ಇನ್ನಷ್ಟು ತುಪ್ಪ ಸುರಿದರು. ಪರೇಶ ಮೇಸ್ತನ ಶವದ ಮೆರವಣಿಗೆ ಅನಂತಕುಮಾರ ಹೆಗಡೆ ಪಾಲ್ಗೊಂಡು "ಚೆಲ್ಲಿದ ರಕ್ತವನ್ನು ಪ್ರತಿ ಹನಿಗೂ ನ್ಯಾಯಕೊಡುವುದು ಹೇಗೆ ಎಂದು ಗೊತ್ತಿದೆ" ಎಂದು ಉದ್ರೇಕಕಾರಿ ಭಾಷಣ ಮಾಡಿದರು. ಶೋಭಾ ಕರಂದ್ಲಾಜೆ ಬಂದು ಈ ಸಾವನ್ನು ತಾವೇ ತನಿಖೆ ಮಾಡಿದವರಂತೆ, ತಮ್ಮದುರೇ ನಡೆದಂತೆ ವಿವರಿಸಲಾರಂಭಿಸಿದರು. "ಪಿಎಫ್ಐ ನವರು ಆತನನ್ನು ಕೊಂಡಿರುವುದಾಗಿಯೂ, ಐಸಿಸ್ ಉಗ್ರರಿಗಿಂತ ಕ್ರೂರವಾಗಿ ಕೊಚ್ಚಿಕೊಚ್ಚಿ ಪರೇಶನನ್ನು ಕೊಂದಿದ್ದಾರೆಂದು, ಸಿಎಂ ಸಿದ್ದರಾಮಯ್ಯ ಪರೇಶನ ಹೆಣದ ಮೇಲೆ ಶಿಲಾನ್ಯಾಸ ಮಾಡಿದ್ದಾರೆಂದು (ಹೀಗೆ ಅನೇಕ ಕಪೋಲಕಲ್ಪಿತ ಉದ್ರೇಕಕಾರಿ ಆಪಾದನೆಗಳು)" ಹೇಳಿದರು. ಹಿಂದುಗಳೆಲ್ಲಾ ಮುಸ್ಲಿಂ ವಿರುದ್ಧ ತಿರುಗಿ ಬೀಳಲು ಕರೆನೀಡಿ ಹೋದರು. ಅವರ ಹೇಳಿಕೆ ಬರುವಾಗ ಪರೇಶನ ಸಾವಿನ ಕಾರಣವೂ ಗೊತ್ತಿರಲಿಲ್ಲ ಮತ್ತು ಆತ ಸತ್ತಿದ್ದಾನೆಂದಾಗಲೀ ಬದುಕಿದ್ದಾನೆಂದಾಗಲೀ ಗೊತ್ತಿರಲಿಲ್ಲ!!

ಜಿಲ್ಲೆಯಾದ್ಯಂತ ಏಕಕಾಲದಲ್ಲಿ ಬಂದ್ ಗೆ ➚

ವೈದ್ಯರ ವರದಿಗಳು ಏನಂದಿವೆ?

ಹಿಂದೂ ಕಾರ್ಯಕರ್ತ ಪರಮೇಶ ಮೆಸ್ತನನ್ನು ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕ ಸಂಘಟನೆಗಳು ಚಿತ್ರಹಿಂಸೆ ಕೊಟ್ಟು ಕೊಂದಿದ್ದಾರೆ ಎಂಬ ಪ್ರಚಾರದಿಂದಾಗಿ ಉ.ಕದಲ್ಲಿ ಉದ್ವಿಗ್ನ ವಾತಾವರಣ ಉಂಟಾಯಿತು. ಇದು ನಿಜವಲ್ಲ ಎಂದು ಮಣಿಪಾಲ ಆಸ್ಪತ್ರೆಯ ವೈದ್ಯರು ವರದಿ ಕೊಟ್ಟ ಮೇಲೂ, ವೈದ್ಯರ ಮೇಲೆ ಒತ್ತಡ ತರಲಾಗಿದೆ ಎಂಬ ಅವರ ಅಪಪ್ರಚಾರ ಮುಂದುವರೆದಿದೆ.

ಪಶ್ಚಿಮ ವಲಯ ಐಜಿಪಿ ಹೇಮಂತ ನಿಂಬಾಳ್ಕರ್ ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ವೈದ್ಯರ ವರದಿಯ ಪ್ರಕಾರ ಪರೇಶ್ ಮೇಸ್ತ ಅವರ ದೇಹದ ಮೇಲೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆದಂತೆ ಯಾವುದೇ ವಿಕೃತಿಗಳು ನಡೆದಿಲ್ಲ. ಇದನ್ನು ಮಣಿಪಾಲ ವೈದ್ಯರೇ ಖಚಿತಪಡಿಸಿದ್ದಾರೆ. ಮನುಷ್ಯ ದೇಹವೊಂದು ಎರಡು ದಿನ ನೀರಿನಲ್ಲಿ ಅದೂ ಸಹ ಕೆರೆಯಲ್ಲಿ ಮುಳುಗಿದ್ದರೆ ಆ ದೇಹಕ್ಕೆ ಯಾವುದೆಲ್ಲ ಲಕ್ಷಣಗಳಿರುತ್ತದೆಯೊ ಅಂತಹುದೇ ಲಕ್ಷಣಗಳು ಪರೇಶ್ ಮೃತದೇಹದಲ್ಲೂ ಇದೆ ಬಿಟ್ಟರೆ ಬೇರೇನೂ ಇಲ್ಲ ಎಂಬುದು ವೈದ್ಯರ ವರದಿಯ ಮುಖ್ಯಾಂಶ.

ವೈದ್ಯರ ವರದಿಯಲ್ಲಿರುವ ಕೆಲವು ಪ್ರಮುಖ ಅಂಶಗಳು ಹೀಗಿವೆ

1. ಪರೇಶ್ ಮೃತದೇಹದ ಮೇಲೆ ಆಯುಧಗಳಿಂದ ಯಾವುದೇ ಗಾಯಗಳು ಉಂಟಾದ ಬಗ್ಗೆ ಪುರಾವೆ ಇಲ್ಲ.
2. ಮೃತನ ಮುಖದ ಬಣ್ಣ ಮಾರ್ಪಾಟಾಗಿರುವುದು ಯಾವುದೇ ದಾಳಿಯಿಂದ ಅಲ್ಲ. ಮೃತ ದೇಹ ಕೊಳೆಯುತೊಡಗಿದ್ದರಿಂದ ಮುಖದ ಬಣ್ಣ ಬದಲಾವಣೆಯಾಗಿದೆ.
3. ಮೃತದೇಹದ ಮೇಲಿರುವ ಶಿವಾಜಿಯ ಚಿತ್ರ ಮತ್ತು ಮರಾಠಾ ಎಂದು ಬರೆದಿರುವ ಹಚ್ಚೆ ಹಾಗೆಯೆ ಇದೆ. ಹಚ್ಚೆ ನಾಶಗೊಂಡಿಲ್ಲ
4. ಮೃತನ ಮೇಲೆ ಯಾವುದೇ ರಾಸಾಯನಿಕ, ಬಿಸಿ ನೀರು, ಆಸಿಡ್ ದಾಳಿ ಮಾಡಲಾಗಿಲ್ಲ.
5. ಮೃತನ ಬಾಯಿಯಲ್ಲಿ ಮೂತ್ರ ಅಥವಾ ಮಲದ ಕುರುಹು ಕಂಡುಬಂದಿಲ್ಲ.
6. ಮೃತನ ಶಿಶ್ನ ಹಾಗೂ ವೃಷಣಗಳ ಮೇಲೆ ದಾಳಿಯಾಗಿಲ್ಲ. ಕೊಳೆತ ಕಾರಣ ಅವು ಊದಿಕೊಂಡಿವೆ.
7. ಮೃತದೇಹದ ಮೇಲೆ ರಕ್ತದ ಕುರುಹುಗಳಿಲ್ಲ. ಮೂಗಿನ ಹೊಳ್ಳೆಗಳು ಮತ್ತು ಬಾಯಿಯಲ್ಲಿ ಮರಣಾನಂತರದ ಶುದ್ಧ ದ್ರವ ಕಂಡುಬಂದಿದೆ. ಇದು ಮರಣಾನಂತರದ ಸಾಮಾನ್ಯ ಬದಲಾವಣೆ.
8. ಉಸಿರುಗಟ್ಟಿಸಲು ಮೃತನನ್ನು ಹಗ್ಗ ಅಥವಾ ಇತರ ವಸ್ತುಗಳಿಂದ ಕತ್ತು ಹಿಸುಕಿದ ಯಾವುದೇ ಸಾಕ್ಷ್ಯಗಳಿಲ್ಲ.
9. ಮೃತನ ಗುದದ್ವಾರದ ಮೇಲೂ ದಾಳಿ ನಡೆದಿಲ್ಲ.
10. ಮೃತನ ಕೈ ಮತ್ತು ಕಾಲು ಬೆರಳುಗಳು ಸಹಜ ಸ್ಥಿತಿಯಲ್ಲಿವೆ. ದಾಳಿ ನಡೆದ ಪುರಾವೆಗಳಿಲ್ಲ.

ಈ ಮೇಲಿನ ಅಂಶಗಳನ್ನು ಜಿಲ್ಲಾ ಪೊಲೀಸ್ ಇಲಾಖೆ ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಮಣಿಪಾಲದ ತಜ್ಞರು ಲಿಖಿತವಾಗಿ ನೀಡಿದ್ದಾರೆ. ಇದು ಅಂತಿಮ ವರದಿಯಲ್ಲ. ಸಾವು ಹೇಗೆ ಸಂಭವಿಸಿತು ಎಂಬ ವರದಿ ಬರಲು ಇನ್ನೂ ಬಾಕಿ ಇದೆ. ಆಗಲೇ ಇದು ಹತ್ಯೆಯೊ ಅಥವಾ ಆಕಸ್ಮಿಕ ಸಾವೊ, ಆತ್ಮಹತ್ಯೆಯೊ ಎಂಬ ಮಾಹಿತಿ ಖಚಿತವಾಗಿ ತಿಳಿಯಲಿದೆ. ಆದರೆ ವೈದ್ಯರ ವರದಿ ಸೋಷಿಯಲ್ ಮೀಡಿಯಾದಲ್ಲಿ ಪರೇಶ್ ಸಾವಿನ ಕುರಿತು ಹಬ್ಬಿರುವ ಮತ್ತು ಸಂಘಪರಿವಾರ ಜನರ ನಡುವೆ ಹಬ್ಬಿಸಿರುವ ವಿಕೃತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತದೆ. ಪರೇಶ್ ಮೇಸ್ತನದ್ದು ಕೊಲೆಯ ಆಗಿದ್ದರೂ ಚಿತ್ರಹಿಂಸೆ ನೀಡಿಯಂತೂ ಆತನನ್ನು ಸಾಯಿಸಿಲ್ಲ ಎಂಬುದನ್ನು ಸದ್ಯದ ವೈದ್ಯರ ವರದಿ ಹೇಳುತ್ತಿದೆ.

ಗಲಭೆಯ ಪ್ರಚೋದಕರನ್ನು ಬಂಧಿಸಿ ಕಠಿಣ ಕಾನೂನು ಕ್ರಮ ವಹಿಸಿ: ಉ.ಕ. ಸಿಪಿಐ(ಎಂ)

ಕಳೆದ ಎರಡು ವಾರಗಳಿಂದ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೀಡು ಮಾಡಿದ ಕೋಮುದಾಳಿ ಉತ್ತರಕನ್ನಡ ಜಿಲ್ಲೆಯ ನೆಮ್ಮದಿ, ಶಾಂತಿ ಕದಡಿದ್ದು ತೀವ್ರ ಖಂಡನೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆಯು ಒಂದು ಅಸ್ತ್ರ. ಆದರೆ ಇಲ್ಲಿ ಪ್ರತಿಭಟನೆಯ ಸ್ವರೂಪ ಒಂದು ಕೋಮು, ಧರ್ಮವನ್ನು ಗುರಿಯಾಗಿಸಿ ಮಾಡಿದ ವ್ಯವಸ್ಥಿತ ದಾಳಿಯಾಗಿದೆ. ಜೊತೆಗೆ ಅಲ್ಲಲ್ಲಿ ಜನಸಾಮಾನ್ಯರು, ಪ್ರಯಾಣಿಕರು ಹಾಗೂ ಪರ್ತಕರ್ತರು, ಪೋಲಿಸರ ಮೇಲೆಯೂ ದಾಳಿಯಾದ ವರದಿ ಇದೆ. ಯಾವುದೋ ಊರಿನಲ್ಲಿ ಕ್ಷುಲ್ಲಕ ಜಗಳವಾದರೆ ಅದನ್ನು ಸಾರ್ವತ್ರೀಕರಿಸಿ ನಾಡಿನಾದ್ಯಂತ ವಿಷ ಹರಡುವ ಮತ್ತು ಆ ನೆಪದಲ್ಲಿ ಹಿಂಸಾಚಾರಕ್ಕೆ ಇಳಿಯುವುದು ಸಾರ್ವಜನಿಕ ಆಸ್ತಿಪಾಸ್ತಿ ನಾಶ ಮಾಡುವದನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ಖಂಡಿಸುತ್ತದೆ

ಡಿಸೆಂಬರ್ 1 ರಿಂದ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ವಾತಾವರಣ ತೀರಾ ಹದಗೆಟ್ಟಿದೆ. ಅದು ಮೊದಲು, ಈ ಭಾಗದ ಸಂಸದ, ಕೇಂದ್ರ ಕೌಶಲ್ಯ ಮಂತ್ರಿ ಅನಂತ ಕುಮಾರ್ ಹೆಗಡೆಯ ದ್ವೇಷದ ಬೆಂಕಿ ಹಚ್ಚುವ ಮಾತು ಮತ್ತು ಕೃತ್ಯಗಳಿಂದ ಶುರುವಾಗಿ, ಕಾರವಾರ, ಶಿರಸಿ, ಕುಮಟಾ ಮುಂತಾದೆಡೆ ಬಿಜೆಪಿ ರಾಜ್ಯ ಅಧ್ಯಕ್ಷರಾದ ಯಡಿಯೂರಪ್ಪನವರ ಚೈತನ್ಯ ಯಾತ್ರೆಯ ಪ್ರವಾಸ ಮತ್ತು ಬಿಜೆಪಿ ಪಕ್ಷ ಅಧಿಕಾರದಲ್ಲಿರುವ ವಿವಿಧ ರಾಜ್ಯಗಳ ಕೆಲವು ಮಂತ್ರಿಗಳಿಂದ ಜಿಲ್ಲೆಯ ಪ್ರವಾಸ, ಆರ್.ಎಸ್.ಎಸ್. ಎಬಿವಿಪಿ, ಶ್ರೀರಾಮಸೇನೆ, ಭಜರಂಗದಳದವರ ಸಮಾವೇಶಗಳು, ಶಿಕ್ಷಣ ಕೇಂದ್ರಗಳಲ್ಲಿ ಎಬಿವಿಪಿಯ ದಾಂಧಲೆ, ನಂತರ ನಡೆದ ಪರಿವರ್ತನಾ ಯಾತ್ರೆ, ಮೈಸೂರು ಸಂಸದ ಪ್ರತಾಪಸಿಂಹರ ಆಟಾಟೋಪಗಳು, ಬಾಬಾಬುಡನ್ ಗಿರಿಯಲ್ಲಿ ದತ್ತ ಜಯಂತಿಯ ಕಾರ್ಯಕ್ರಮಗಳಲ್ಲಿ ನಿಷೇಧಿತ ಸ್ಥಳಕ್ಕೆ ನುಗ್ಗಿದುದು, ಚುನಾವಣೆ ಸಮೀಪಿಸಿದ್ದು ಟಿಕೆಟ್ ಆಕಾಂಕ್ಷಿಗಳ ಒಳಜಗಳ ಹಾಗೂ ಕೇಂದ್ರ ಸಮಿತಿ ಅಧ್ಯಕ್ಷ ಅಮಿತ್ ಷಾರವರು ಕರೆಕೊಟ್ಟ "ಲಾಠಿ ಚಾರ್ಜ–ಟಿಯರ್ ಗ್ಯಾಸ್" ಆಗುವಂಥ ಉಗ್ರ ಹೋರಾಟದ ವೈಖರಿಗಳ ಭಾಗವಾಗಿ ಜಿಲ್ಲೆಯು 1996 ರ ಮಾದರಿಯನ್ನು ಮೀರಿಸುವ ಕೋಮುಗಲಭೆಯನ್ನು ಕಾಣುವ ಆತಂಕವಿದೆ. ಜಿಲ್ಲೆಯ ಎಲ್ಲಾ ಧರ್ಮೀಯರಿಗೂ ಶಾಂತಿ ನೆಮ್ಮದಿ ಬೇಕು. ಹಿಂದು ಧರ್ಮದ ಹೆಸರಿನಲ್ಲಿ ಹಿಂದುತ್ವವಾದಿಗಳು ನಡೆಸುತ್ತಿರುವ ದಾಂಧಲೆಗೆ ಜಿಲ್ಲೆಯ ಬಹುಸಂಖ್ಯಾತರು ಯಾರೂ ಕುಮ್ಮಕ್ಕು ಕೊಟ್ಟು ಬೆಂಬಲಿಸಿಲ್ಲ. ಆದರೆ ತಮ್ಮ ದ್ವೇಷದ ರಾಜಕಾರಣವನ್ನು ಮುಂದುವರೆಸಲಿಕ್ಕಾಗಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು, ಏಕಪಕ್ಷೀಯ ದಾಳಿ ನಡೆಸಿ ಅದಕ್ಕೆ "ಕೋಮು ಗಲಭೆ" ಎಂದು ಬಣ್ಣ ಬಳಿಯಲು ಶುರುವಿಟ್ಟಿದ್ದು ತೀವ್ರ ಖಂಡನೀಯ. ಕುಮಟಾ, ಹೊನ್ನಾವರ, ಶಿರಸಿ, ಸಿದ್ದಾಪುರಗಳಲ್ಲಿ ಆಗಿರುವ ಆಸ್ತಿಪಾಸ್ತಿ ಹಾನಿ ಪ್ರತಿಭಟನೆ ವೇಳೆ ಸಿಕ್ಕಾಪಟ್ಟೆ ದಾಂಧಲೆ ನಡೆಸಿದ್ದು ಭಯಾನಕ ಸ್ಥಿತಿ ನಿರ್ಮಾಣ ಮಾಡಿದೆ. ಹಾಗಾಗಿ ಈ ಪರಿಸ್ಥಿಯನ್ನು ಸರ್ಕಾರ ಕೂಡಲೇ ನಿಯಂತ್ರಣಕ್ಕೆ ತರಲು ಕಠಿಣ ಕ್ರಮ ವಹಿಸಬೇಕೆಂದು ನಾವು ಆಗ್ರಹಿಸುತ್ತೇವೆ.

ಈ ಕೆಳಗಿನ ತುರ್ತು ಬೇಡಿಕೆಗಳನ್ನು ಈಡೇರಿಸಲು, ಜಿಲ್ಲೆಯನ್ನು ಸಹಜ ಸ್ಥಿತಿಗೆ ಮರಳಿಸಲು ಸರ್ಕಾರವನ್ನು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ಶಾಂತಿ ಬಯಸುವ ಜನತೆಯ ಪರವಾಗಿ ಸರ್ಕಾರವನ್ನು ಆಗ್ರಹಿಸುತ್ತದೆ.

1) ಜಿಲ್ಲೆಯಲ್ಲಿ ಕೋಮು ಗಲಭೆಗೆ ಪ್ರಚೋದನೆ ನೀಡಿದವರು ಎಷ್ಟೆ ದೊಡ್ಡ ಸಾಂವಿಧಾನಿಕ ಹುದ್ದೆಯಲ್ಲಿದ್ದರೂ ಅವರನ್ನು ಬಂದಿಸಿ ಕಠಿಣ ಕಾನೂನು ಕ್ರಮ ವಹಿಸಬೇಕು. ರಾಜ್ಯದ ಬೇರೆಬೇರೆ ಭಾಗದಿಂದ ಬಂದು ಗಲಭೆಯ ಲಾಭ ಪಡೆಯಲು ಹವಣಿಸುವವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ವಹಿಸಬೇಕು. ಜಿಲ್ಲೆಗೆ ಬೆಂಕಿ ಹಚ್ಚುವ, ಅನ್ಯಧರ್ಮದವರ ಮೇಲೆ ಗುರಿಯಾಗಿಸಿ ಹಿಂಸೆಗೆ ಪ್ರಚೋದನೆ ನೀಡುವ ಸಂಸದ ಅನಂತ ಕುಮಾರ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆಯ ನೆಪದಲ್ಲಿ ಹಿಂಸಾಚಾರಕ್ಕೆ ಇಳಿಯುವುದು ಸಾರ್ವಜನಿಕ ಆಸ್ತಿಪಾಸ್ತಿ ನಾಶ ಮಾಡುವವರನ್ನು ಬಂಧಿಸಬೇಕು.
2) ಗಲಭೆ ಸೃಷ್ಟಿಸಿ ತಲೆ ಮರೆಸಿಕೊಂಡವರನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಿ ಶಿಕ್ಷಿಸಬೇಕು. ಪ್ರಚೋದನಕಾರಿ ಭಾಷಣ ಮಾಡುವವರಿಗೆ ಜಿಲ್ಲೆಯ ಪ್ರವೇಶ ನಿಷೇಧಿಸಬೇಕು.
3) ಮೃತ ಪರೇಶ್ ಮೇಸ್ತ ಸಾವಿನ ಮೂಲ ಭೇಧಿಸಬೇಕು, ನಿಜವಾದ ಕಾರಣ ಪತ್ತೆ ಹಚ್ಚಬೇಕು. ಅಪರಾಧಿಗಳನ್ನು ಶಿಕ್ಷಿಸಬೇಕು. ಕುಟುಂಬಕ್ಕೆ ಸಹಾಯ ನೀಡಬೇಕು. ಈಗಾಗಲೇ ಗಲಭೆಯಲ್ಲಿ ಸಂತ್ರಸ್ತರಾದ ಜನಕ್ಕೆ ಸೂಕ್ತ ರಕ್ಷಣೆ ನೀಡಬೇಕು.
4) ಕೋಮುದಾಂಧಲೆ ನಡೆಸಿದವರಿಂದ ಮತ್ತು ಅವರ ಸಂಘಟನೆಯಿಂದ ಈ ಅವಧಿಯಲ್ಲಾದ ಲುಕ್ಸಾನುಗಳನ್ನು ಭರಿಸಿಕೊಳ್ಳಲು ಮುಂದಾಗಬೇಕು.
5) ಜಿಲ್ಲೆಯ ಶಾಂತಿ ಸುವ್ಯವಸ್ಥೆ ರಕ್ಷಣೆಗೆ ಸಾಕಷ್ಟು ಆರಕ್ಷಕರನ್ನು ನೇಮಿಸಬೇಕು. ಜೊತೆಗೆ ಶಾಲಾ ಕಾಲೇಜುಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ, ಸರ್ಕಾರಿ ನೌಕರರ ಮಧ್ಯೆ ಮತ್ತು ಸಾರ್ವಜನಿಕರ ಮಧ್ಯೆ ಸೌಹಾರ್ದತೆಯನ್ನು ಮೂಡಿಸಲು ಸರ್ಕಾರ, ಜಿಲ್ಲಾಡಳಿತ ಕಾರ್ಯಕ್ರಮ ಹಾಕಿಕೊಳ್ಳಬೇಕು.
6) ಸಾಮಾಜಿಕ ಜಾಲತಾಣದ ಮೇಲೆ ನಿಗಾ ಇಟ್ಟು ಸುಳ್ಳು ಸುದ್ದಿ ಹಬ್ಬಿಸುವ, ಉದ್ರೇಕಕರಾರಿ ಆಡಿಯೋ ವಿಡಿಯೋ ಬರಹಗಳನ್ನು ಪೋಸ್ಟ್ ಮಾಡುವವರ ಮೇಲೆ ಜಿಲ್ಲಾಡಳಿತ/ಸರ್ಕಾರವೇ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಬೇಕು.
7) ಬಂದ್ ನಡೆದ ವೇಳೆ ದಿನದ ಕೂಲಿ, ಊಟ ಇಲ್ಲದೇ ಪರಿತಪಿಸುತ್ತಿರುವ ದಿನಗೂಲಿ, ಹಮಾಲಿ ಕಾರ್ಮಿಕರು, ಕೆಸಲ ಕಳಕೊಂಡಿರುವ ಕೃಷಿಕಾರ್ಮಿಕರಿಗೆ ಆಹಾರದ ವ್ಯವಸ್ಥೆಯನ್ನು ಮಾಡಬೇಕು.
8) ಜಿಲ್ಲೆಯಲ್ಲಿ ಬಹುತೇಕ ಸಂದರ್ಭದಲ್ಲಿ ಭೂಮಿ ವ್ಯಾಜ್ಯ, ಸ್ಮಶಾನ ಜಾಗದ ವಿವಾದ ಮತ್ತು ಹಬ್ಬದ ದಿನಗಳಲ್ಲಿ ಸಾರ್ವಜನಿಕ ಸ್ಥಳದ ಬಳಕೆಯ ವಿವಾದ ಬಂದಾಗ ಪರಸ್ಪರರನ್ನು ವಿಶ್ವಾಸಕ್ಕೆ ಪಡೆದು ಸಮಸ್ಯೆಗಳನ್ನು ಬಗೆಹರಿಸಬೇಕು. ಹಾಗೂ ಸಾಮಾಜಿಕವಾಗಿ ಕೌಟುಂಬಿಕ ಸಂಬಂಧಗಳನ್ನು ಹೊಂದುವ ಸಂದರ್ಭದಲ್ಲಾಗುವ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕು." ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಯಮುನಾ ಗಾಂವ್ಕರ್ ಆಗ್ರಹಿಸಿದ್ದಾರೆ.

ಕರೆಕೊಟ್ಟಿದ್ದು ಯಶಸ್ವಿಯಾಗಿಲ್ಲದಿರುವದರಿಂದ ಪ್ರತಿ ತಾಲೂಕಿನಲ್ಲಿಯೂ ಪ್ರತ್ಯೇಕ ದಿನವನ್ನು ಪ್ರತಿಭಟನೆಗೆ ಆಯ್ಕೆ ಮಾಡಿಕೊಂಡು ಹೊನ್ನಾವರ ಸ್ವಲ್ಪ ಮಟ್ಟಿಗೆ ತಣ್ಣಗಾಗುತ್ತಿದ್ದಂತೆ ಗ್ರಾಮೀಣ ಭಾಗದಲ್ಲಿ ಮುಸ್ಲಿಂ ಮನೆಗಳ ಮೇಲೆ ಕಲ್ಲುತೂರಾಟ, ಮುಸ್ಲಿಂ ಜನ ಕಂಡಲ್ಲಿ ಗುಂಪುಕಟ್ಟಿ ಹೊಡೆಯುವುದು, ಅವರ ವಾಹನವನ್ನು ಹಾಳುಮಾಡುವುದು, ದೋಚುವುದು, ... ಹೀಗೆ ಪುಂಡಾಟಿಕೆ ನಡೆದೇ ಇದೆ. ದಿನವೂ ಯಾವುದಾದರೂ ಒಂದು ತಾಲೂಕಿನಲ್ಲಿ ರಾಜ್ಯ ಮುಖಂಡರು ಗಲಾಟೆಯ ನೇತೃತ್ವ ವಹಿಸುತ್ತಿದ್ದಾರೆ.

ಬಾಯ್ಮುಚ್ಚಿ ಕುಳಿತ ಕಾಂಗ್ರೆಸ್

ದಿನಾಂಕ 11–12–2017 ಕ್ಕೆ ಕುಮಟಾ ತಾಲೂಕಿನಲ್ಲಿ ದೊಡ್ಡ ಗಲಾಟೆ ಎಬ್ಬಿಸಿದ್ದು ಮಾತ್ರವಲ್ಲ ಡಿ.ಐ.ಜಿ ನಿಂಬಾಳ್ಕರ್ ಇವರ ವಾಹನದ ಮೇಲೆ ದಾಳಿಮಾಡಿ ಬೆಂಕಿ ಹಾಕಿದ್ದಾರೆ. ಕಾರಿನಲ್ಲಿದ್ದ ಡ್ರೈವರ್ ರನ್ನು ಪ್ರಾಣಾಪಾಯದಿಂದ ಹೊರತೆಗೆಯಲು ಕಷ್ಟಪಟ್ಟರು. ಪೋಲಿಸರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದ ವರದಿ ಇದೆ. ಇನ್ನು ಮುಂದೆ ಪ್ರತಿ ದಿನ ಒಂದೊಂದು ತಾಲೂಕಿನಲ್ಲಿ ಗಲಾಟೆ ಎಬ್ಬಿಸುವ ತಯಾರಿ ನಡೆದಿರುವುದಾಗಿಯೇ ಇಡೀ ಜಿಲ್ಲೆಯಲ್ಲಿಯೂ ಭಯ ಹುಟ್ಟಿಸುವ 'ಅಮಿತ್‌ಶಾ ಮಂತ್ರ–ತಂತ್ರದ' ಪ್ರಯೋಗಾಲಯ ಮಾಡಿಕೊಳ್ಳುತ್ತಿದ್ದಾರೆ.

ಜಿಲ್ಲೆಯಲ್ಲಿ 7 ತಾಲೂಕಿನಲ್ಲಿ ಕಾಂಗ್ರೆಸ್ ತಾಲೂಕು ಪಂಚಾಯ್ತಿ ನೇತೃತ್ವ ಇದ್ದರೂ, 5 ಶಾಸಕರು ಮತ್ತು ಜಿಲ್ಲಾ ಪಂಚಾಯತ್ ನೇತೃತ್ವ ಇವರಿಗೇ ಇದ್ದರೂ ಈ ಗಲಭೆಯಲ್ಲಿ ಚಳಿಕಾಯಿಸಿಕೊಳ್ಳುವ ತಂತ್ರ ಉಪಯೋಗಿಸಿದ್ದು ನಾಚಿಕೆಗೇಡು. ಸ್ವತಃ ಪ್ರಭಾವಿ ಮಂತ್ರಿ ದೇಶಪಾಂಡೆ ಸ್ವಲ್ಪವೂ ತಲೆ ಕೆಡಿಸಿಕೊಂಡಂತಿಲ್ಲ. ಎಲ್ಲಾದರೂ ಗಲಭೆಯ ವಿರುದ್ಧ ಮಾತನಾಡಿದರೆ ಹಿಂದೂ ಓಟು–ಕಡಿಮೆ ಆಗಬಹುದೆನ್ನುವ ಭಯ ಅವರದು. ಅಲ್ಪ ಸಂಖ್ಯಾತರ ಮೇಲೆ ದಾಳಿ ನಡೆದಷ್ಟೂ ಅವರ ಬೆಂಬಲ ತಮಗೇ ಅನಿವಾರ್ಯವಾಗಿ ಸಿಗುತ್ತದೆಂಬ ತಂತ್ರ ಅವರದು. ಪರೇಶ ಮೇಸ್ತ ರವರ ಕುಟುಂಬವನ್ನು ಭೇಟಿಯಾಗಿ ಸ್ವಲ್ಪ ಸಹಾಯ ಮಾಡಿ ಹೋಗಿದ್ದು ಬಿಟ್ಟರೆ ಮತ್ತೆಲ್ಲೂ ಬರಲಿಲ್ಲ. ಸಾಧ್ಯವಾದಷ್ಟು ಅವರನ್ನು ಅತಂತ್ರರನ್ನಾಗಿಸುವ ಆಳುವ ಧೋರಣೆ ಅವರದು. ಸ್ವತಃ ಶಾರದಾ ಶೆಟ್ಟಿಯವರ ಕ್ಷೇತ್ರದಲ್ಲಾದರೂ ಜನರ ಮಧ್ಯೆ ಒಂದು ಸೌಹಾರ್ದ ವಾತಾವರಣ ಸೃಷ್ಟಿಸಲು ಪ್ರಯತ್ನಿಸಲಿಲ್ಲ. ಬಹುಶಃ ಉತ್ತರ ಕನ್ನಡ ಜಿಲ್ಲೆಯ ಕಾಂಗ್ರೆಸ್ ಎಂ.ಎಲ್.ಎ ಗಳು ಕಳೆದೇ ಹೋಗಿದ್ದಾರೆ ಎನ್ನುವಂತಿದೆ.

ಹೆಚ್ಚು ದೊಂಬಿ ಎಬ್ಬಿಸಿದವರಿಗೆ ಸೀಟು–ಶಾ ಫಾರ್ಮುಲಾ

ಗಲಾಟೆಯ ಮುಖಂಡತ್ವ ಯಾರದು? ಕೋಮುಗಲಭೆ ಅಸಲಿಗೆ ಬಿಜೆಪಿಯ ಚುನಾವಣೆ ಗಲಭೆ ಅಲ್ಲದೇ ಮತ್ತೇನೂ ಅಲ್ಲ. ಕುಮಟಾ, ಭಟ್ಕಳ ಮತ್ತು ಕಾರವಾರ ಕ್ಷೇತ್ರಕ್ಕೆ ಇನ್ನೂ ಎಂ.ಎಲ್.ಎ ಅಭ್ಯರ್ಥಿಯನ್ನು ಬಿಜೆಪಿ ಘೋಷಣೆ ಮಾಡದೇ ಇರುವುದರಿಂದ ಅತಿ ಹೆಚ್ಚು ಗಲಾಟೆ ಮಾಡಿ ಸೀಟು ಗಿಟ್ಟಿಸಿಕೊಳ್ಳುವ ಪ್ರಯತ್ನ ಇವರದು. ಕುಮಟಾದಲ್ಲಿ ಅನಂತ ಕುಮಾರ್ ಹೆಗಡೆ ಆಮಂತ್ರಣದ ಮೇರೆಗೆ ಇತ್ತೀಚೆಗೆ ಜೆ.ಡಿ.ಎಸ್ ಬಿಟ್ಟು ಬಂದ ಮಾಜಿ ಎಂ.ಎಲ್.ಎ ದಿನಕರ ಶೆಟ್ಟಿ ಮತ್ತು ಕೆಲವು ಅವಧಿಯಿಂದ ಬಿಜೆಪಿಯಲ್ಲೇ ಇರುವ ಸೂರಜ್ ನಾಯ್ಕ ಸೋನಿ, ಇತ್ತೀಚೆಗೆ ಬಂದ ಉದ್ಯಮಿ ಯಶೋಧರ ನಾಯ್ಕ, ನಿವೃತ್ತ ಅಧಿಕಾರಿ ನಾಗರಾಜ್ ನಾಯಕ, ಶ್ರೀಕುಮಾರ್ ಟ್ರಾವೆಲ್ಸ ಮಾಲಿಕ ವೆಂಕಟ್ರಮಣ ಹೆಗಡೆ ನಡುವೆ ಸೀಟಿಗಾಗಿ ಪೈಪೋಟಿ ನಡೆಯುತ್ತಿದೆ. ಕಾರವಾರದಲ್ಲಿ ಇತ್ತೀಚೆಗೆ ಬಿಜೆಪಿಗೆ ಬಂದ ಕ್ರಿಮಿನಲ್ ಲಾಯರ್ ನಾಗರಾಜ್ ನಾಯಕ ಮತ್ತು ರೂಪಾಲಿ ನಾಯ್ಕ ಮತ್ತು ಬಿಜೆಪಿಯ ಹಳಬರ ನಡುವೆ ಜೋರಾಗಿ ಪೈಪೋಟಿ ಇದೆ. ಇವರೆಲ್ಲರೂ ಅಮಿತ್ ಷಾ ಮಂತ್ರ ತಂತ್ರವನ್ನು ಅನಂತ ಕುಮಾರ್ ಹೆಗಡೆಯನ್ನು ಮೆಚ್ಚಿಸುವ ಮೂಲಕ ಎಂ.ಎಲ್.ಎ ಟಿಕೆಟ್ ಗಿಟ್ಟಿಸಲು ಪ್ರಯತ್ನದಲ್ಲಿದ್ದಾರೆ. ಹೆಚ್ಚು ಗಲಾಟೆ ದೊಂಬಿ ಎಬ್ಬಿಸಿದವರಿಗೆ ಸೀಟು ಕೊಡುವ ಬಿಜೆಪಿಯ ಸಂಪ್ರದಾಯಕ್ಕೆ ಜಿಲ್ಲೆಯು ಬಲಿಯಾಗುತ್ತಿದೆ.

12–12–2017 ರಂದು ಶಿರಸಿ, ಭಟ್ಕಳ:– ಜಿಲ್ಲೆಯಾದ್ಯಂತ ಈ ಘಟನೆಯನ್ನು ನೆಮ್ಮದಿ ಕೆಡಿಸಲು ಬಳಸಿದ ಸಂಘಪರಿವಾರ ಮತ್ತು ಬಿಜೆಪಿಯು ಇಂದು ಇಡೀ ದಿನ ಶಿರಸಿಯಲ್ಲಿ ನಡೆಸಿದ ದಾಂಧಲೆಗೆ ಅನೇಕ ಅನಾಹುತಗಳಾಗಿವೆ. ಭಟ್ಕಳದಲ್ಲಿ ಬಂದೂಕು ಲೈಸೆನ್ಸ ಇರುವ ಓರ್ವರು ಕಾನೂನಿನ ಅಜ್ಞಾನದಿಂದ ಅದನ್ನು ಸಾರ್ವಜನಿಕವಾಗಿ ಒಯ್ಯುತ್ತಿದ್ದುದನ್ನು ಚಿತ್ರಿಸಿದ ಹಿಂದುತ್ವ ವಾದಿಗಳು, ಭಟ್ಕಳದಲ್ಲಿ 4 ಹಿಂದೂ ಮುಖಂಡರ ಕೊಲೆಗೆ ಸಂಚು ಎಂದು ಬಿಂಬಿಸಿ ಗಲಾಟೆ ಹಬ್ಬಿಸಲು ಪ್ರಾರಂಭಿಸಿದ್ದರು. ಆ ವ್ಯಕ್ತಿಯನ್ನು ಪೋಲಿಸರು ತಮ್ಮ ವಶಕ್ಕೆ ಪಡೆದಿದ್ದಾರೆ. ●

ಉತ್ಪಾದನಾ ವಲಯಗಳ ಸ್ಥಳಾಂತರ ಬೆಂಗಳೂರು ನಗರ ರೂಪಾಂತರ .... ಪುಟ 9 ರಿಂದ

ಶಿಫಾರಸ್ಸು ಮಾಡಿದೆ. ಆ ಮೂಲಕ ಬೆಂಗಳೂರು ಮೂಲ ನಗರದ ಪ್ರಾಥಮಿಕತೆಯನ್ನು ಉಳಿಸಿಕೊಂಡು, ಹೊರಗಡೆ ಜನತೆಗೆ ಮೂಲಭೂತ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾಪಿಸಿದೆ.

ನವ ಕರ್ನಾಟಕ – 2025 :

'ನವ ಕರ್ನಾಟಕ–2025' ರಡಿ ರಾಜ್ಯ ಸರ್ಕಾರವು ಈಗಾಗಲೇ ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಕಣ್ಣೋಟ ರೂಪಿಸಲು ಕಾರ್ಯಾಗಾರಗಳನ್ನು ನಡೆಸಿದೆ. ಅಲ್ಲಿನ ಚರ್ಚೆಗಳಮತೆ ಬೆಂಗಳೂರಿನ ಕೆರೆಗಳನ್ನು ಪುನರುಜ್ಜೀವನಗೊಳಿಸಲು, ಮೂಲಭೂತ ಸೌಲಭ್ಯಗಳೊಂದಿಗೆ ಮನೋರಂಜನ ಪಾರ್ಕ್‌ಗಳನ್ನು ಸ್ಥಾಪಿಸಲು, ನಮ್ಮ ಬೆಂಗಳೂರು ಮೆಟ್ರೋ ವಿಸ್ತರಿಸಲು, ಕನಿಷ್ಟ 25 ಶೇಕಡ ಸಾಮೂಹಿಕ ಸಾರಿಗೆ ಬಸ್‌ಗಳನ್ನು ಹವಾನಿಯಂತ್ರಿತಗೊಳಿಸಿ, ಕನಿಷ್ಟ 30 ಶೇಕಡ ಜನ ಅವುಗಳಲ್ಲಿ ಸಂಚರಿಸುವಂತೆ ಮಾಡಲು, ಎಲ್ಲಾ ಆಟೋ, ಟ್ಯಾಕ್ಸಿಗಳನ್ನು ವಿದ್ಯುತ್ ವಾಹನಗಳಾಗಿಸಲು, ಟೆಂಡರ್ ಶ್ಯೂರ್ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳನ್ನು ರಚಿಸಲು, ಪ್ರತಿ 5 ಲಕ್ಷ ಜನಸಂಖ್ಯೆಗೆ ಒಂದರಂತೆ ಕಸದಿಂದ ವಿದ್ಯುತ್ ಉಪತ್ಪಾದಿಸಲು, 50 ಶೇಕಡ ಕಸವನ್ನು ಇಂಧನವಾಗಿ ಮಾರ್ಪಡಿಸುವ, ಪ್ರತಿ ಲಕ್ಷ ಜನಸಂಖ್ಯೆಗೆ ಒಂದು ವೈದ್ಯಕೀಯ ಕ್ಲೀನಿಕ್ ಸ್ಥಾಪಿಸಿ, ಎಲ್ಲಾ ವಸತಿ ಮತ್ತು ವಾಣಿಜ್ಯ ಪ್ರದೇಶಗಳನ್ನು ಇಂದಿರಾ ಕ್ಯಾಂಟಿನ್‌ನೊಂದಿಗೆ ಸಜ್ಜುಗೊಳಿಸಲು, ಶಿಕ್ಷಣ ಮಾಧ್ಯಮವನ್ನು ಇಂಗ್ಲಿಷ್‌ನಲ್ಲಿ ನೀಡಲು ಶಿಫಾರಸ್ಸು ಮಾಡಿದೆ.

ರಾಮನಗರ ಜಿಲ್ಲೆ ಕುರಿತು ನವ ಕರ್ನಾಟಕ 2025 ಕಣ್ಣೋಟವು ಎಲ್ಲಾ ವಸತಿ ಪ್ರದೇಶಗಳಿಗೆ ಸ್ವಚ್ಛ ಕುಡಿಯುವ ನೀರಿನ್ನು ಒದಗಿಸಲು, ಕನಿಷ್ಟ 25 ಶೇಕಡ ವಸತಿ ಹೀನ ಮೂಲ ನಿವಾಸಿಗಳಿಗೆ ಸಮರ್ಪಕ ವಸತಿ ಒದಗಿಸಲು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಭಾಗವಾಗಿ ಹಳ್ಳಿಗಳನ್ನು ದತ್ತು ತೆಗೆದುಕೊಳ್ಳುವಂತೆ ಮಾಡಲು, ಆರಂಭಿಕ ಹಂತದ ಶಿಕ್ಷಣದಲ್ಲೇ ಕ್ರೀಡೆಗಳನ್ನು ಉತ್ತೇಜಿಸಲು, ಎಲ್ಲಾ ಜನಾಂಗಗಳಿಗೂ ಒಳಗೊಳ್ಳುವ ಸಾಮಾನ್ಯ ಸ್ಮಶಾನವನ್ನು ಸಾರ್ವಜನಿಕವಾಗಿ ತೆರೆಯಲು, ಮೆಟ್ರೋವನ್ನು ರಾಮನಗರದವರೆಗೆ ವಿಸ್ತರಿಸಲು, ಅಂತರಜಾತಿ, ಅಂತರ ಧರ್ಮೀಯ ವಿವಾಹಗಳನ್ನು ಪ್ರೋತ್ಸಾಹಿಸಿ ಅಂತವರಿಗೆ ಉದ್ಯೋಗ–ವಸತಿ ಒದಗಿಸಲು ಪ್ರಸ್ತಾಪ ನೀಡಿದೆ. ಮಲೇರಿಯವನ್ನು ನಿರ್ಮೂಲನೆ ಮಾಡಲು, ಜವಳಿ ಪಾರ್ಕ್, ಕ್ಯಾನ್ಸರ್, ಹೃದ್ರೋಗ ಆಸ್ಪತ್ರೆಗಳು ಮುಂತಾದವನ್ನು ಸ್ಥಾಪಿಸಲು ಶಿಫಾರಸ್ಸು ನೀಡಿದೆ.

ನೂತನ ಮಹಾನಗರ ಪಾಲಿಕೆಗಳು :

ಇದೇ ವೇಳೆ ಬಿ.ಎಸ್.ಪಾಟೀಲ್ ಸಮಿತಿಯು ಬಿ.ಬಿ.ಎಂ.ಪಿ. ಯನ್ನು 5 ಮಹಾನಗರ ಪಾಲಿಕೆಗಳಾಗಿ ಪುನರ್ ರಚಿಸಲು ಶಿಫಾರಸ್ಸು ಮಾಡಿದೆ. ಶಿಫಾರಸ್ಸು ಜಾರಿ ನಿಟ್ಟಿನಲ್ಲಿ ರಾಜ್ಯ ಶಾಸನ ಸಭೆಯು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆಗೆ ತಿದ್ದುಪಡಿ ಮಸೂದೆ ಅಂಗೀಕರಿಸಿ, ರಾಜ್ಯಪಾಲರ ಸಹಿಗೆ ಕಳುಹಿಸಿದೆ. ರಾಜ್ಯಪಾಲರು ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸಿದ್ದಾರೆ. ಸದರಿ ಮಸೂದೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೊಳೆಯುತ್ತಿದೆ. ಬಿಬಿಎಂಪಿ ವಿಭಜನೆಗೆ ಬಿಜೆಪಿ–ಜೆಡಿಎಸ್ ವಿರೋಧಿಸಿವೆ. ಜೆಡಿಎಸ್ ಜೊತೆ ಬಿಬಿಎಂಪಿ ಅಧಿಕಾರ ಹಂಚಿಕೊಂಡಿರುವ ಕಾರಣ ಕಾಂಗ್ರೆಸ್ ಕೂಡ ತಾವೇ ರೂಪಿಸಿರುವ ಮಸೂದೆಗೆ ಅಂಕಿತ ಹಾಕಲು ರಾಷ್ಟ್ರಪತಿಗಳ ಮೇಲೆ ಒತ್ತಡ ತರದೆ ನಿರ್ಲಕ್ಷ್ಯ ಮಾಡುತ್ತಿದೆ. ಸಮರ್ಥ ಆಡಳಿತಕ್ಕೆ ಅಗತ್ಯವಿರುವ ಕ್ರಮವಹಿಸಲು, ನಾಗರೀಕರ ಬವಣೆ ಪರಿಹರಿಸಲು ಶಾಸನಾತ್ಮಕ ಮುತುವರ್ಜಿಗೆ ಮೂರು ಪಕ್ಷಗಳು ಮುಂದಾಗದೆ, ತೋರಿಕೆಯ ಅಲಂಕಾರಿಕ ಕ್ರಮಗಳಲ್ಲೇ ಕಾಲಹರಣ ಮಾಡುತ್ತಿವೆ.

ಬೆಳೆದು ಬರುತ್ತಿರುವ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯ ಕೈಗಾರಿಕಾ ಪ್ರದೇಶಗಳ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಗ್ರಾಮ ಪಂಚಾಯಿತಿಯ ಸೀಮಿತ ಸಂಪನ್ಮೂಲಗಳಲ್ಲಿ ತೊಳಲಾಡುತ್ತಿದ್ದ ಅಂತಹ ಪ್ರದೇಶಗಳು ಇತ್ತೀಚೆಗೆ ನಗರ, ಪುರಸಭೆಗಳಾಗಿ ರೂಪಿತವಾಗಿವೆ. ಮತ್ತೊಂದೆಡೆ ಎಲೆಕ್ಟ್ರಾನಿಕ್ ಸಿಟಿಯಂತ ಪ್ರದೇಶಗಳು 'ಸ್ವಾಯತ್ತ ಕೈಗಾರಿಕಾ ನಗರ ನಿರ್ವಹಣ ಪ್ರಾಧಿಕಾರ'ಗಳಾಗಿ ಸ್ವತಂತ್ರವಾಗಿ ನಾಗರೀಕರ ನಿಗಾವಣೆಯಿಲ್ಲದೆ ಮುನ್ನಡೆದಿವೆ. ಅದಕ್ಕಾಗಿ ಮುನ್ಸಿಪಲ್ ಕಾಯ್ದೆಗೆ ತಿದ್ದುಪಡಿ ಮಾಡಿ ಅನುವುಗೊಳಿಸುವ ಕ್ರಮಗಳನ್ನು ಸರ್ಕಾರಗಳು ಮಾಡಿವೆ. ಇಂತಹ ಸಂದರ್ಭದಲ್ಲಿ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ವೈಜ್ಞಾನಿಕವಾಗಿ ಕೈಗಾರಿಕಾ ಪ್ರದೇಶಗಳ ಸುತ್ತಮುತ್ತಲ ವಸತಿ ಪ್ರದೇಶಗಳನ್ನು ಜನಸಂಖ್ಯೆಯನ್ನು ಒಟ್ಟುಗೂಡಿಸಿ 'ಮಹಾನಗರ ಪಾಲಿಕೆ'ಯನ್ನಾಗಿ ಸ್ಥಾಪಿಸಲು ಹಾಗೂ ಬಿಬಿಎಂಪಿ ಯನ್ನು ವೈಜ್ಞಾನಿಕವಾಗಿ ಭಾಗ ಮಾಡಿ ಸಣ್ಣ ಮಹಾನಗರ ಪಾಲಿಕೆಗಳನ್ನಾಗಿಸುವ ಕ್ರಮಗಳಾಗಬೇಕಿದೆ.

ನಾಗರಿಕ ಪ್ರಶ್ನೆಗಳು ಬಲಗೊಳ್ಳುತ್ತಿರುವ ಬಂಡವಾಳದ ಪಾತ್ರ:

ಬಿಬಿಎಂಪಿ ಆಡಳಿತ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ ಮುಂತಾದವು ವ್ಯಾಪಕ ಚರ್ಚೆಗೆ ಒಳಗಾಗಿದವು. ಅಂತೆಯೇ ನೂತನ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಆಡಳಿತದ ಆಸ್ತಿ ತೆರಿಗೆ ಹೆಚ್ಚಳ, ಪ್ರಮಾಣಿಕ ಅಧಿಕಾರಿಗಳ ವರ್ಗಾವಣೆ, ಮುಂತಾದ ವಿಚಾರಗಳು ವ್ಯಾಪಕ ಚರ್ಚೆ, ಹೋರಾಟಗಳಿಗೆ ಕಾರಣವಾಗಿವೆ. ಇದೇ ವೇಳೆ ಸ್ಥಳೀಯ ಆಡಳಿತದಲ್ಲಿ ಜನತೆಯ ಪಾಲ್ಗೊಳ್ಳುವಿಕೆಯನ್ನು ಬಲಪಡಿಸಬೇಕಿದ್ದ ಸರ್ಕಾರವು ಬಂಡವಾಳದ ಪ್ರತಿನಿಧಿಗಳನ್ನು ಒಳಗೊಂಡ ಕಾರ್ಯಪಡೆಯನ್ನು ರಚಿಸುತ್ತಿದೆ. ಎಸ್.ಎಂ.ಕೃಷ್ಣ ಆಡಳಿತದಲ್ಲಿ ರಚಿಸಿದ್ದ 'ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್' (BATF) 'ಬೆಂಗಳೂರು ಕಾರ್ಯಸೂಚಿ ಕಾರ್ಯಪಡೆ' ಮತ್ತು ಯಡಿಯೂರಪ್ಪ ಆಡಳಿತದಲ್ಲಿ ರಚಿಸಿದ್ದ ಬಿ.ಪಿ.ಎಲ್ ಮಾಲೀಕ ರಾಜೀವ್ ಚಂದ್ರಶೇಖರ್ ನೇತೃತ್ವದ Abide 'ಬೆಂಗಳೂರು ಮೂಲ ಸೌಕರ್ಯ ಅಭಿವೃದ್ಧಿಗೆ ಕಾರ್ಯಸೂಚಿ' ರೀತಿಯಲ್ಲಿ ಸಿದ್ದರಾಮಯ್ಯ ಆಡಳಿತವು ಸಹಾ 'ಬೆಂಗಳೂರು ನೀಲಿನಕ್ಷೆ ಕಣ್ಣೋಟ ತಂಡ' (BBPVG)ವನ್ನು ಇನ್ಫೋಸಿಸ್, ಬಯೋಕಾನ್, ವಿಪ್ರೋ ಮುಂತಾದ ಸಂಸ್ಥೆಗಳ ಮುಖ್ಯಸ್ಥರನ್ನು ಒಳಗೊಂಡು ರಚಿಸಿದೆ. ಅದೇ ಜನ ಬೆಂಗಳೂರು ರಾಜಕೀಯ ವ್ಯವಹಾರಗಳ ಸಮಿತಿ (BPaC) ಜನಾಗ್ರಹ, ನಮ್ಮ ಬೆಂಗಳೂರು ಫೌಂಡೇಶನ್‌ಗಳನ್ನು ರಚಿಸಿಕೊಂಡು ಜನಾಭಿಪ್ರಾಯಗಳನ್ನು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ರೂಪಿಸಲು ನಿರಂತರವಾಗಿ ಯತ್ನಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳ ಸಂವಿಧಾನದತ್ತ ಅಧಿಕಾರಕ್ಕೆ ಪರ್ಯಾಯ ರಾಜಕೀಯ ಒತ್ತಡ ಗುಂಪುಗಳಾಗಿ, ಕೇಂದ್ರಗಳಾಗಿ ಕಾರ್ಯಚರಿಸುತ್ತಿವೆ. ಒಟ್ಟಾರೆ ನಾಗರೀಕ ಪ್ರಶ್ನೆಗಳ ಮೇಲಿನ ಬಂಡವಾಳದ ಪ್ರತಿನಿಧಿಗಳ ನೇರ ಹಿಡಿತ ಹೆಚ್ಚುತ್ತಿದೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದುಡಿಯುವ ಜನತೆಯ ಪರಿಸ್ಥಿತಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳು ನಡೆಸಬೇಕಾದ ಹೋರಾಟಗಳ ರೂಪರೇಷೆಯನ್ನು ಸಿಪಿಐ(ಎಂ) ಬೆಂಗಳೂರು ದಕ್ಷಿಣ 22ನೇ ಜಿಲ್ಲಾ ಸಮ್ಮೇಳನವು ಚರ್ಚಿಸಿ ನಿರ್ಣಯಿಸಲಿದೆ. ●

ಜಿಮ್ ಮತ್ತು ಇಂಕ ಹಾಗು ಬಂಡವಾಳ ಹೂಡಿಕೆ

ವಿಶ್ವ ಬಂಡವಾಳಗಾರರ ಸಮಾವೇಶ 2010ರ ಮೂಲಕ ಹೂಡಿಕೆ ಮಾಡಲು ಉದ್ದೇಶಿಸಲಾಗಿದ್ದ ಬಂಡವಾಳದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.336.69 ಕೋಟಿ ಹೂಡಿಕೆಯೊಂದಿಗೆ 13 ಯೋಜನೆಗಳು ಜಾರಿಯಾಗಿದ್ದು, 3196 ಉದ್ಯೋಗಗಳು ಸೃಷ್ಠಿಯಾಗಿವೆ. ರಾಮನಗರ ಜಿಲ್ಲೆಯಲ್ಲಿ ರೂ.581.18 ಕೋಟಿ ಹೂಡಿಕೆಯೊಂದಿಗೆ 9 ಯೋಜನೆಗಳು ಜಾರಿಯಾಗಿದ್ದು, 2029 ಉದ್ಯೋಗಗಳು ಸೃಷ್ಠಿಯಾಗಿವೆ.

2012ರ ಸಮಾವೇಶದಲ್ಲಿ ರೂ. 6.7 ಲಕ್ಷ ಕೋಟಿ ಬಂಡವಾಳ ಹೂಡಿಕೆಯೊಂದಿಗೆ 751 ಯೋಜನೆಗಳನ್ನು 17 ಲಕ್ಷ ಉದ್ಯೋಗ ಸೃಷ್ಠಿಯೊಂದಿಗೆ ಆರಂಭಿಸುವ ಭರವಸೆ ಸಿಕ್ಕಿದ್ದರು ಸಹಾ ರಾಜ್ಯಾದ್ಯಂತ ಇದುವರೆಗೆ ರೂ.17,308.44 ಕೋಟಿ ಬಂಡವಾಳ ಹೂಡಿಕೆಯೊಂದಿಗೆ 24,694 ಉದ್ಯೋಗ ಸೃಷ್ಠಿಸಿ 58 ಯೋಜನೆಗಳು ಆರಂಭವಾಗಿರುವ ವರದಿಯಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರವು ಸಹಾ 2016 ಫೆಬ್ರವರಿಯಲ್ಲಿ Invest Karnataka ಎಂಬ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸಿದೆ. 1201 ಯೋಜನೆಗಳಿಗೆ 308810 ಕೋಟಿ ರೂಗಳ ಸಮ್ಮತಿ ಏರ್ಪಟ್ಟಿದೆ. MOUಗಳಿಗೆ ಸಹಿ ಮಾಡಲಾಗಿದೆ. 175633 ಕೋಟಿ ರೂಗಳ ಯೋಜನೆಗೆ ಸಮ್ಮತಿಸಲಾಗಿದೆ. Invest Karnataka ಕ್ಕೆ ಸಾಂಸ್ಥಿಕ ರೂಪ ನೀಡುವ ಪ್ರಸ್ತಾಪ ಮಾಡುತ್ತಿದೆ.

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಕಾರ್ಖಾನೆಗಳ ಸಂಖ್ಯೆ ಏರಿಳಿತವನ್ನು ಕಾಣುತ್ತಿದೆ. ಬೆಂಗಳೂರು ನಗರ ಹಾಗು ರಾಮನಗರ ಜಿಲ್ಲೆಯಲ್ಲಿ ಕಾರ್ಖಾನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸಣ್ಣ ಕೈಗಾರಿಕೆಗಳು ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚುತ್ತಿವೆ. ಸೇವಾ ವಲಯದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಮತ್ತು ಅವುಗಳಲ್ಲಿನ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ನಗರ ಪ್ರದೇಶದ ವ್ಯಾಪ್ತಿಯಿಂದ ಹೊರ ಭಾಗಕ್ಕೆ ರಾಜ್ಯದ ಇತರೆಡೆಗೆ ಸ್ಥಳಾಂತರಗೊಳ್ಳುತ್ತಿರುವುದು ಸಹಾ ಇದಕ್ಕೆ ಕಾರಣವಾಗಿದೆ.

ನೂತನ ಕೈಗಾರಿಕಾ ನೀತಿ ಮತ್ತು ಬೆಂಗಳೂರು


2014–19ರ ರಾಜ್ಯ ನೂತನ ಕೈಗಾರಿಕ ನೀತಿಯಲ್ಲಿ ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯ ಬೆಂಗಳೂರು ದಕ್ಷಿಣ, ಆನೇಕಲ್ ಮತ್ತು ರಾಮನಗರ ತಾಲ್ಲೂಕುಗಳನ್ನು ಕೈಗಾರಿಕಾವಾರು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಎಂದು ಗುರುತಿಸಿದೆ. ಉಳಿದಂತೆ ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳನ್ನು ಅಭಿವೃದ್ಧಿ ಹೊಂದುತ್ತಿರುವ ತಾಲ್ಲೂಕುಗಳೆಂದು ಗುರುತಿಸಿದೆ. ಬೆಂಗಳೂರಿನ ಮೇಲಿನ ಒತ್ತಡ ಕಡಿಮೆ ಮಾಡಲು ರಾಜ್ಯದ ಇತರೆ ಪ್ರದೇಶಗಳನ್ನು "ವಿಶೇಷ ಹೂಡಿಕೆ ಪ್ರದೇಶ" (SIR) ಗಳೆಂದು ಯೋಜನೆ ಗುರುತಿಸಿದೆ.

ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯಲ್ಲಿ ಅತ್ತಿಬೆಲೆ, ಬೊಮ್ಮಸಂದ್ರ, ಯಾರಂಡಹಳ್ಳಿ, ವೀರಸಂದ್ರ, ಎಲೆಕ್ಟ್ರಾನಿಕ್ಸ್ ಸಿಟಿ, ಜಿಗಣಿ, ಕುಂಬಳಗೊಡು ಪ್ರಮುಖ ಕೈಗಾರಿಕ ಪ್ರದೇಶಗಳಾಗಿವೆ. ರಾಮನಗರ ಜಿಲ್ಲೆಯಲ್ಲಿ ಹಾರೋಹಳ್ಳಿ ಮತ್ತು ಬಿಡದಿ ಪ್ರಮುಖ ಕೈಗಾರಿಕ ಪ್ರದೇಶಗಳಾಗಿವೆ. ನೂತನ ಕೈಗಾರಿಕ ನೀತಿಯಲ್ಲಿ ಬೆಂಗಳೂರು–ಮಂಡ್ಯ–ಮೈಸೂರು–ಚಾಮರಾಜನಗರ ಕೈಗಾರಿಕ ಕಾರಿಡಾರನ್ನು ಜ್ಞಾನ ಆಧಾರಿತ ಕೈಗಾರಿಕ ಕಾರಿಡಾರಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.


ಜಿಗಣಿಯಲ್ಲಿ ರಾಸಾಯನಿಕ ಮತ್ತು ತೈಲ ಉತ್ಪನ್ನ, ಬಿಡದಿಯಲ್ಲಿ ಆಟೋಮೊಬೈಲ್, ಮೈಸೂರು ರಸ್ತೆಯಲ್ಲಿ ಜವಳಿ, ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಎಲೆಕ್ಟ್ರಾನಿಕ್ಸ್ ಕುರಿತ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯಲ್ಲಿ ರಾಷ್ಟ್ರದ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಪ್ರಮುಖ ಸಂಸ್ಥೆಗಳಿವೆ. ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳ(IT-ITES)137 ಸಂಸ್ಥೆಗಳು ಮತ್ತು ಜೈವಿಕ ತಂತ್ರಜ್ಞಾನದ 97 ಸಂಸ್ಥೆಗಳು ಎಲೆಕ್ಟ್ರಾನಿಕ್ಸ್ ಸಿಟಿ ಪ್ರದೇಶದಲ್ಲಿವೆ.


ದಕ್ಷಿಣ ಜಿಲ್ಲಾ ಸಮಿತಿ ವ್ಯಾಪ್ತಿಯ ಪ್ರಮುಖ ಸಾರ್ವಜನಿಕ ಉದ್ದಿಮೆಯಾದ ಬಿ.ಹೆಚ್.ಇ.ಎಲ್. ಕಾರ್ಖಾನೆಯು ಸರ್ಕಾರದ ಶೇರು ವಿಕ್ರಯ ನೀತಿಗೆ ಬಲಿಯಾಗುತ್ತ ನಡೆದಿದೆ. ಖಾಸಗಿ ಬಹುರಾಷ್ಟ್ರೀಯ ಘನ ಕೈಗಾರಿಕೆಗಳಾದ ಬಾಷ್, ಟಯೋಟಾ, ಟೋಶಿಬೊ ಸಮೂಹದ ಕಂಪನಿಗಳು ಮುಂತಾದವು ಈ ವ್ಯಾಪ್ತಿಯಲ್ಲಿವೆ. ಸೇವಾ ರಂಗದ ಉದ್ದಿಮೆಗಳು,ಮಾಹಿತಿ ತಂತ್ರಜ್ಞಾನ/ಜೈವಿಕ ತಂತ್ರಜ್ಞಾನ (IT/BT), BPO ಕಂಪೆನಿಗಳು, ಆರೋಗ್ಯ ಕೇಂದ್ರಿತ ಆರೋಗ್ಯ ಪ್ರವಾಸೋದ್ಯಮ, ಉತ್ಪಾದನ ಕೈಗಾರಿಕೆಗಳು, ಗಾರ್ಮೆಂಟ್ಸ್, ಮನೋರಂಜನ ಪಾರ್ಕ್ ಮತ್ತಿತರ ಸಣ್ಣ ಮಧ್ಯಮ ಉದ್ದಿಮೆಗಳು ಹೆಚ್ಚುತ್ತಿವೆ.

ಇತ್ತ ಜಲವಿಮಾನ 'ಸಾಹಸ' ಪ್ರದರ್ಶನ; ಅತ್ತ ಹಣದುಬ್ಬರದ ನೆಗೆತ, ಉತ್ಪಾದನೆ ಕುಸಿತ



ಡಿಸೆಂಬರ್ 12 ರಂದು ಗುಜರಾತ್ ವಿಧಾನಸಭಾ ಚುನಾವಣೆಯು 2ನೇ ಮತ್ತು ಅಂತಿಮ ಘಟ್ಟದ ಮತದಾನಕ್ಕೆ ಪ್ರಚಾರಕಾರ್ಯ ಮುಕ್ತಾಯವಾಯಿತು. ಕಳೆದ ಕೆಲವು ವಾರಗಳಿಂದ ತನ್ನ 'ಮಾದರಿ' ರಾಜ್ಯವನ್ನು ಉಳಿಸಿಕೊಳ್ಳು ನಡೆಸಿರುವ ನಾನಾ ಕಸರತ್ತಿನ ಕೊನೆಯ ಭಾಗವಾಗಿ ಪ್ರಧಾನಿಗಳು ಅಹಮದಾಬಾದಿನಲ್ಲಿ ಸಾಬರಮತಿ ನದಿ ತಟದಿಂದ ಜಲವಿಮಾನದಲ್ಲಿ ಮೆಹಸಾನ ಜಿಲ್ಲೆಯ ಧರೋಯಿ ಆಣೆಕಟ್ಟಿಗೆ ಹೋಗಿ ಅಲ್ಲಿಂದ ರಸ್ತೆ ಮೂಲಕ ಪ್ರಸಿದ್ಧ ಅಂಬಾಜಿ ದೇವಸ್ಥಾನಕ್ಕೆ ಪಯಣಿಸಿ ಅಲ್ಲಿ ಪೂಜೆ ಸಲ್ಲಿಸಿ ಮತ್ತೆ ಧರೊಯಿ ಆಣೆಕಟ್ಟಿಗೆ ಹಿಂದಿರುಗಿ ಅಲ್ಲಿಂದ ಮತ್ತೆ ಜಲವಿಮಾನ ಹಾರಾಟದ 'ಸಾಹಸ'ಮಯ ಪ್ರದರ್ಶನ ಪ್ರಚಾರ ಮುಗಿಸಿದರು ಎಂದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯ್ತು.





ಪ್ರಧಾನ ಮಂತ್ರಿಗಳ ವೆಬ್‌ಸೈಟ್ ಅವರು ಭಾರತದ ಮೊತ್ತಮೊದಲ ಜಲವಿವಾನದ ವೊತ್ತವೊದಲ ಪ್ರಯಾಣಿಕರಾದರು ಎಂದು ಹೇಳಿಕೊಂಡಿತು. ನಂತರ ಈ ಶಿರೋನಾಮೆಯನ್ನು ಬದಲಿಸಲಾಯಿತು. ಏಕೆಂದರೆ ಅದು ದೇಶದ ಮೊತ್ತಮೊದಲ ಜಲವಿಮಾನ ಯಾನವೂ ಆಗಿರಲಿಲ್ಲ, ಪ್ರಧಾನಿಗಳು ಮೊದಲ ಜಲವಿಮಾನ ಹಾರಾಟದ ಮೊದಲ ಪ್ರಯಾಣಿಕರೂ ಆಗಿರಲಿಲ್ಲ ಎಂಬ ಜ್ಞಾನೋದಯ ವಾಯಿತಂತೆ. ಆದರೆ ಬಿಜೆಪಿಯ ಅಧಿಕೃತ ಟ್ವಿಟರ್ ಇನ್ನೂ ಅದನ್ನು ಒಪ್ಪಿಕೊಂಡಿಲ್ಲವಂತೆ.

ಇತ್ತ ದೇಶದ ಆರ್ಥಿಕ ಪರಿಸ್ಥಿತಿಯ ನಿರ್ವಹಣೆಯಲ್ಲೂ ಇಂತಹುದೇ ಆಭಾಸವನ್ನು ಅದೇ ದಿನ ಪ್ರಕಟವಾದ ಅಂಕಿ-ಅಂಶಗಳು ಕೂಡ ಪ್ರದರ್ಶಿಸಿದ್ದು ಕೇವಲ ಕಾಕತಾಳೀಯವೇನಲ್ಲ ಎನ್ನುತ್ತಾರೆ ಹಲವರು.

* ಹಣದುಬ್ಬರ ದರ ಅಕ್ಟೋಬರ್‌ನಲ್ಲಿ 3.58% ಇದ್ದದ್ದು ನವಂಬರ್‌ನಲ್ಲಿ 4.88%ಕ್ಕೆ ನೆಗೆದಿದೆ.

* ಕೈಗಾರಿಕಾ ಉತ್ಪಾದನೆ ದರ 2.2%ಕ್ಕೆ ಇಳಿದಿದೆ ಸಪ್ಟಂಬರ್‌ನಲ್ಲಿ ಅದನ್ನು 4.14% ಎಂದು ಪರಿಷ್ಕರಿಸಲಾಗಿತ್ತು.

ಹಣದುಬ್ಬರದ ದರ ಕಳೆದ 15 ತಿಂಗಳಲ್ಲೇ ಅತಿ ಹೆಚ್ಚು ಎನ್ನಲಾಗಿದೆ. ಇದು ಮುಖ್ಯವಾಗಿ ಪೆಟ್ರೋಲ್-ಡೀಸೆಲ್ ದರ ಏರಿಕೆಗಳು ಮತ್ತು ಆಹಾರವಸ್ತುಗಳ ವಿಪರೀತ ಬೆಲೆಯೇರಿಕೆಗಳಿಮದ ಆಗಿದೆ ಎನ್ನಲಾಗಿದೆ. ಅಂತರ್‍ರಾಷ್ಟ್ರೀಯ ಕಚ್ಚಾತೈಲ ಬೆಲೆಗಳಲ್ಲಿ ಏರಿಕೆ ಹಣದುಬ್ಬರವನ್ನು ಇನ್ನಷ್ಟು ತೀಕ್ಷ್ಣಗೊಳಿಸಬಹುದು ಎಂದೂ ಹೇಳಲಾಗುತ್ತಿದೆ.

ರಿಝರ್ವ್ ಬ್ಯಾಂಕ್ ಹಣದುಬ್ಬರ ದರ ಏರಬಹುದು(4.3% –4.7%) ಎಂದು ನಿರೀಕ್ಷಿಸಿದ್ದರೂ, ಅದರ ನಿರೀಕ್ಷೆಯನ್ನೂ ಮೀರಿ ಏರಿರುವುದು ಹಲವರಿಗೆ ಆಶ್ವರ್ಯ ಉಂಟು ಮಾಡಿದೆಯಂತೆ.

ಕೈಗಾರಿಕಾ ಉತ್ಪಾದನೆಯಲ್ಲಿ ಮೂಲರಚನೆ, ಉಕ್ಕು ಮತ್ತು ವಾಹನ ಕ್ಷೇತ್ರಗಳನ್ನು ಬಿಟ್ಟು ಬೇರೆಲ್ಲಾ ಕ್ಷೇತ್ರಗಳಲ್ಲೂ ಮಂದಗತಿ ಮುಂದುವರೆದಿದೆ, ನವಂಬರ್-ಡಿಸೆಂಬರ್ ತಿಂಗಳಲ್ಲೂ ಉತ್ಪಾದನೆಯ ಸಲೂಚ್ಯಂಕ ಏರದಿದ್ದರೆ ಈ ಹಣಕಾಸು ವರ್ಷದ ಅಂತ್ಯದ ವರೆಗೂ ಆರ್ತಿಕ ಸಥಗಿತತೆ ಮುಂದುವರೆಯಬಹುದು ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ.

ಮೋದಿ ಸರಕಾರ ಮೂರೂವರೆ ವರ್ಷಗಳಲ್ಲಿ ಬರಿಯ ಪ್ರಚಾರ-ಕ್ಕೇ 3755 ಕೋಟಿರೂ. ಖರ್ಚು ಮಾಡಿದೆ.

ಇದು ಮಾಹಿತಿ ಹಕ್ಕಿನ ಅಡಿಯಲ್ಲಿ ಸುದ್ದಿ ಮತ್ತು ಪ್ರಸಾರ ಇಲಾಖೆ ಕೊಟ್ಟಿರುವ ಮಾಹಿತಿ. ಇದು ಈ ಸರಕಾರದ ಕೆಲವು ಪ್ರಮುಖ ಇಲಾಖೆಗಳಿಗೆ ಮತ್ತು ಪ್ರತಿಷ್ಠೆಯ ಯೋಜನೆಗಳಿಗೆ ಬಜೆಟ್‌ನಲ್ಲಿ ಕೊಟ್ಟಿರುವ ಹಣಕ್ಕಿಂತಲೂ ಹೆಚ್ಚು. ಉದಾಹರಣೆಗೆ, 'ಪರಿಸರ ಮಾಲಿನ್ಯ ತಡೆ'ಗೆ ಕಳೆದ ಮೂರು ಬಜೆಟ್‌ಗಳಲ್ಲಿ ಕೊಟ್ಟ ಒಟ್ಟು ಮೊತ್ತ 56.6 ಕೋಟಿ ರೂ. –ಸುದ್ದಿ



ಗೋರಕ್ಷಣೆ ಹೆಸರಿನಲ್ಲಿ ದ್ವೇಷ ಕೃತ್ಯಗಳು: 2017ರಲ್ಲಿ ಅತಿ ಹೆಚ್ಚು

2010 ರಿಂದ ಈಚೆಗೆ ಗೋರಕ್ಷಣೆಯ ಹೆಸರಲ್ಲಿ ಒಟ್ಟು 78 ಕ್ರಿಮಿನಲ್ ಕೃತ್ಯಗಳು ನಡೆದಿವೆ. 2010 ಮತ್ತು 2011ರಲ್ಲಿ ಇಂತಹ ಕೃತ್ಯಗಳು ನಡೆದ ವರದಿಗಳೇನಿಲ್ಲ. 2012 ಮತ್ತು 2013ರಲ್ಲಿ ಒಂದು ಕೇಸು ದಾಖಲಾಗಿದೆ. ಆದರೆ 2014ರ ನಂತರ ಇದು ವೇಗವಾಗಿ ಏರುತ್ತ ಹೋಗಿದೆ. 2017ರಲ್ಲಿ ಇದು ತಾರಕಕ್ಕೆ ಏರಿದೆ. ಇವುಗಳಲ್ಲಿ 76 'ಅಚ್ಛೇ ದಿನ್'ಗಳ ಆರಂಭದ ನಂತರ ಘಟಿಸಿದವುಗಳು.

ಈ ದ್ವೇಷ ಕೃತ್ಯಗಳಿಗೆ 273 ಮಂದಿ ತುತ್ತಾಗಿದ್ದಾರೆ, ಅದರಲ್ಲಿ 29 ಮಂದಿ ಸಾವಪ್ಪಿದ್ದಾರೆ. ಹೀಗೆ ಬಲಿಯಾದ 29 ಜನರಲ್ಲಿ 25 ಅಂದರೆ 86% ಮುಸ್ಲಿಮರು. ತೀವ್ರವಾಗಿ ಗಾಯಗೊಂಡವರನ್ನೂ ಸೇರಿಸಿದರೆ 53% ಮುಸ್ಲಿಮರು, 12% ದಲಿತರು, 10% ಹಿಂದುಗಳು. 22% ಮಂದಿಯ ಬಗ್ಗೆ ವಿವರ ಲಭ್ಯವಿಲ್ಲ.

ಈ 78ರಲ್ಲಿ 26 ಕೇಸುಗಳಲ್ಲಿ ದ್ವೇಷಕೃತ್ಯಗಳಿಗೆ ಗುರಿಯಾದವರ ಮೇಲೆಯೇ ಗೋರಕ್ಷಣಾ ಕಾಯ್ದೆಗಳ ಅಡಿಯಲ್ಲಿ ಪೋಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಭೌಗೋಳಿಕವಾಗಿ, ಈ 78ರಲ್ಲಿ 50, ಅಂದರೆ 64% ಉತ್ತರಭಾರತದಲ್ಲಿ ಸಂಭವಿಸಿದೆ. 2015ರ ನಂತರ ಇದು ದಕ್ಷೀಣ, ಪಶ್ಚಿಮ ಮತ್ತು ಪೂರ್ವಕ್ಕೂ ಹರಡಿದೆ. ಹರ್ಯಾಣ, ಉತ್ತರಪ್ರದೇಶ ಮತ್ತು ಗುಜರಾತ್ ಇದರಲ್ಲಿ ಮೊದಲ ಮೂರು ಸ್ಥಾನಗಳಲ್ಲಿವೆ.

ಇದು 'ಇಂಡಿಯಾಸ್ಪೆಂಡ್' ವೆಬ್‌ತಾಣದ ಪರಿಣಿತರು ವಿವಿಧ ಮಾಧ್ಯಮಗಳಿಂದ ಕಲೆ ಹಾಕಿದ ಮಾಹಿತಿಗಳ ವಿಶ್ಲೇಷಣೆಗಳಲ್ಲಿ ಕಂಡುಬಂದಿರುವ ಸಂಗತಿಗಳು.

ಈ ಹಿಂದೆ ಹಿಂದುಸ್ತಾನ್ ಟೈಮ್ಸ್ ದಿನ ಪತ್ರಿಕೆ ಸಪ್ಟಂಬರ್ 2015ರಿಂದ ಗೋರಕ್ಷಣೆಯ ಹೆಸರಿನಲ್ಲಿ ಮಾತ್ರವಲ್ಲ, ಇತರ ರೀತಿಗಳಲ್ಲೂ ಧರ್ಮ, ಜಾತಿ, ಭಾಷೆ ಇತ್ಯಾದಿಗಳ ಹೆಸರಲ್ಲಿಯೂ ನಡೆದಿರುವ ಹಿಂಸಾಚಾರಗಳ ಪಟ್ಟಿಯನ್ನು ತಯಾರಿಸಿ ತನ್ನ ವೆಬ್‌ಸೈಟಿನಲ್ಲಿ 'ಹೇಟ್ ಟ್ರಾಕರ್' (ದ್ವೇಷದ ಜಾಡು) ಶಿರೋನಾಮೆಯ ಅಡಿಯಲ್ಲಿ ಪ್ರಕಟಿಸಲಾರಂಭಿಸಿತು. ಆದರೆ ಎರಡು ತಿಂಗಳ ಹಿಂದೆ ಸಪ್ಟಂಬರ್ 2015 ರ ನಂತರದ ಇಂತಹ ಕ್ರಿಮಿನಲ್ ಕೃತ್ಯಗಳ ಸಂಖ್ಯೆ 175 ದಾಟಿದಾಗ ಬಿಜೆಪಿಯ ಉನ್ನತ ಮುಖಂಡರ ಮಧ್ಯಪ್ರವೇಶದಿಂದಾಗಿ ಅದನ್ನು ನಿಲ್ಲಿಸಲಾಗಿದೆ ಎಂದು ಈ ಅಂಕಣದಲ್ಲಿ ಈ ಹಿಂದೆ ಗಮನಿಸಲಾಗಿತ್ತು. ಈಗ ಅದು ಆ ಪತ್ರಿಕೆಯ ವೆಬ್‌ಸೈಟಿನಿಂದಲೇ ಕಾಣೆಯಾಗಿದೆ.

ಈ ನಡುವೆ ಈ ವರ್ಷದ ಮಾನವ ಹಕ್ಕುಗಳ ದಿನದಂದು ದೇಶದ ನಿವೃತ್ತ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಆರ್‌ಎಂ ಲೋಧ ದೇಶದಲ್ಲಿ ಹೆಚ್ಚುತ್ತಿರುವ ದ್ವೇಷ ಕೃತ್ಯಗಳು ತನ್ನನ್ನು ಪ್ರತಿದಿನ ಅಲುಗಾಡಿಸುತ್ತಿದೆ ಎಂದು ಹೇಳಿದ್ದಾರೆ. ಸಾಕಷ್ಟು ಕಾನೂನುಗಳು, ಸಂವಿಧಾನಿಕ ರಕ್ಷಣೆಗಳು ಮತ್ತು ಬಲವಾದ ನ್ಯಾಯಾಂಗ ಇದ್ದರೂ ಮಾನವ ಹಕ್ಕುಗಳ ರಕ್ಷಣೆಯ ಉದ್ದೇಶ ಈಡೇರುತ್ತಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ, ಗೋರಕ್ಷಣೆಯ ಹೆಸರಲ್ಲಿ ಮಾನವ ಜೀವಿಗಳ ವಧೇ ನಡೆದಿದೆ, ಎಲ್ಲೆಲ್ಲು ಗೋರಕ್ಷಕರು ನಾಯಿಕೊಡೆಗಳಂತೆ ಹರಡಿಕೊಳ್ಳುತ್ತಿದ್ದಾರೆ ಎಂದು ಖೇದ ವ್ಯಕ್ತ ಪಡಿಸಿದ್ದಾರೆ.

53 ದಿನಗಳಲ್ಲೇ ಹೊಸ 2000ರೂ. ಖೋಟಾ ನೋಟುಗಳು!

ಖೋಟಾ ನೋಟುಗಳ ನಿರ್ಮೂಲನೆ ಅಚ್ಛೇದಿನ್‌ಗಳ ಅತ್ಯಂತ 'ಸಾಹಸಮಯ' ಕ್ರಮವಾದ ನೋಟುರದ್ಧತಿಯ ಉದ್ದೇಶಗಳಲ್ಲಿ ಒಂದು ಎನ್ನಲಾಗಿತ್ತು. ಆದರೆ ಸುಮಾರಾಗಿ ಎಲ್ಲ ರದ್ದಾದ ನೋಟುಗಳು ರಿಝರ್ವ್ ಬಯಾಂಕಿಗೆ ವಾಪಾಸಾಗಿರುವುದು ಈ ವಾದದ ಟೊಳ್ಳುತನವನ್ನು ಆಗಲೇ ಬಯಲು ಮಾಡಿದೆ.

ಆದರೆ ಈಗ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ ಇನ್ನೊಂದು ಸ್ವಾರಸ್ಯಕರ ಸಂಗತಿಯನ್ನು ಹೊರಗೆಡಹಿದೆ. ಜನಗಳು ಹೊಸ ನೋಟುಗಳಿಗೆ ಬ್ಯಾಂಕುಗಳ ಎದುರು ಸಾಲುಗಟ್ಟಿ ನಿಂತಿದ್ದಾಗಲೇ, 53 ದಿನಗಳೊಳಗೇ ಮೊದಲ ಬಾರಿಗೆ ತಂದ 2000 ರೂ.ಗಳ.

ಬ್ಯಾಂಕ್,ಕಾರ್ಪೊರೇಟ್‌ಗಳ ರಕ್ಷಣೆಗೆ ಸಾಮಾನ್ಯ ಠೇವಣಿದಾರರ ಹಿತಗಳ ಬಲಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಪುಟ 2ರಿಂದ

ಸುಧಾರಿಸಿಕೊಳ್ಳಲು ಬ್ಯಾಂಕುಗಳಿಗೆ ನೆರವಾಗಬಹುದಷ್ಟೇ ಎಂದು ಅಭಿಪ್ರಾಯ ಪಟ್ಟಿದೆ.

ಈ ಮಸೂದೆ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಶಿಫಾರಸುಗಳಿಗೆ ಅನುಸಾರವಾಗಿಯೇ ಇದೆ. 2008ರಲ್ಲಾದಂತೆ ಜಾಗತಿಕ ಹಣಕಾಸು ಕುಸಿತ ಮತ್ತೆ ಸಂಭವಿಸದಂತೆ ಮಾಡಬೇಕಾದರೆ ಸರಕಾರಗಳು 'ಬೇಲ್ ಔಟ್' ಅಂದರೆ ಹೊರಗಿಂದ ಪಾರು ಮಾಡುವ ಸರಕಾರದ ಯೋಜನೆಗಳ ಬದಲಾಗಿ ಒಳಗಿಂದಲೇ ಪಾರು ಮಾಡುವ 'ಬೇಲ್-ಇನ್' ಯೋಜನೆಗಳ ಪ್ರಕಿಯೆಯನ್ನು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಆರಂಭಿಸಬೇಕೆಂಬುದೇ ಆ ಶಿಫಾರಸು.

ವಿವಿಧ ಸರಕಾರಗಳು ಬ್ಯಾಂಕುಗಳಿಗೆ ಮತ್ತು ಇತರ ಹಣಕಾಸು ಸಂಸ್ಥೆಗಳಿಗೆ ಅವನ್ನು ದೊಡ್ಡ ಬಿಕ್ಕಟ್ಟಿನಿಂದ ಪಾರು ಮಡಲು ಕೊಟ್ಟ ಅಪಾರ ಮೊತ್ತದ ಯೋಜನೆಗಳು ಕಾರ್ಪೊರೇಟ್ ದಿವಾಳಿಗಳನ್ನು ಸಾರ್ವಭೌಮ (ಅಂದರೆ ಇಡೀ ದೇಶದ)ದಿವಾಳಿಗಳಾಗಿ ಪರಿವರ್ತಿಸಿದವು. ಇದು ಜಾಗತಿಕ ಬಂಡವಾಳಕ್ಕೆ ಹೊಸದೊಂದು ಬಿಕ್ಕಟ್ಟನ್ನು ಸೃಷ್ಟಿಸಿತು. ಈ ಬಿಕ್ಕಟ್ಟು ಈಗಲೂ ಬಾಧಿಸುತ್ತಲೇ ಇದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಒಂದು ಬ್ಯಾಂಕ್ ಕುಸಿಯುವ ಹಂತ ತಲುಪಿದಾಗ ಅದನ್ನು ಕಾಪಾಡಲು ಈ ಎಫ್‌ಆರ್‌ಡಿಐ ಕಾನೂನು ಈ ಮುಂದಿನ ಮೂರು ಕ್ರಮಗಳಲ್ಲಿ ಒಂದನ್ನು ಕೈಗೊಳ್ಳುವ ಅಧಿಕಾರವನ್ನು ಕೊಡುತ್ತದೆ–1. ಬೇರೆ ಯಾವುದಾದರೂ ಹಣಕಾಸು ಸಂಸ್ಥೆಗೆ ಮಾರಾಟ ಮಾಡುವುದು, ವಿದೇಶಿ ಕಾರ್ಪೊರೇಟ್‌ಗಳಿಗೂ ಮಾರಬಹುದು; 2.ಒಂದು ಸೇತು ಸಂಸ್ಥೆಯನ್ನು ರಚಿಸುವುದು(ಅಂದರೆ ಬ್ಯಾಂಕುಗಳ ವಿಲೀನ– ಬಿಜೆಪಿ ಸರಕಾರ ಈಗ ಇದನ್ನೇ ಮಾಡಬೇಕೆಂದಿದೆ); 3. 'ಬೇಲ್-ಇನ್' ಅಂದರೆ ಒಂದು ಒಳಪಾರು ಪ್ರಕ್ರಿಯೆಯನ್ನು ಆರಂಭಿಸುವುದು.

ಇದು ಜಾರಿಯಾದರೆ, ರಿಝರ್ವ್ ಬ್ಯಾಂಕಿಗೆ ಆಗ ದೇಶದ ಹಣಕಾಸು ಕುರಿತ ಉಸ್ತುವಾರಿ, ನಿಯಂತ್ರಣ ಮತ್ತು ಹಣಧೋರಣೆಯನ್ನು ರೂಪಿಸುವ ಕೆಲಸದ ಬದಲು ದೇಶದ ಹಣಕಾಸು ಸ್ಥಿರತೆಯನ್ನು ನೋಡಿಕೊಳ್ಳುವದಷ್ಟೇ ಕೆಲಸವಿರುತ್ತದೆ. ಅಂದರೆ ಕುಸಿತದಿಂದ ಬ್ಯಾಂಕುಗಳನ್ನು ಮತ್ತು ಅವುಗಳಿಂದ ದೊಡ್ಡ ಪ್ರಮಾಣದಲ್ಲಿ ಸಾಲ ಪಡೆದ ಕಾರ್ಪೊರೇಟ್‌ಗಳನ್ನು ರಕ್ಷಿಸಲಿಕ್ಕಾಗಿ ಬ್ಯಾಂಕುಗಳ ಸಾಮಾನ್ಯ ಠೇವಣಿದಾರರ ಹಿತಗಳನ್ನು ಬಲಿಗೊಡಲಾಗುವುದು ಎಂದೇ ಇದರ ಅರ್ಥ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಒಂದು ಕುಸಿಯುತ್ತಿರುವ ಬ್ಯಾಂಕಿಗೆ ಮರು ಬಂಡವಾಳ ಪೂರೈಕೆಗೆ ಠೇವಣಿದಾರರ ಠೇವಣಿ ಮತ್ತು ಇತರ ವಸ್ತುಗಳನ್ನು ಅವರ ಒಪ್ಪಿಗೆ ಪಡೆಯದೇನೇ ಬಳಸಲು ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಆದ್ದರಿಂದ **ಕೋಟ್ಯಂತರ ಠೇವಣಿದಾರರ ಜೀವಮಾನದ ಉಳಿತಾಯಗಳಿಗೆ ಕುತ್ತು ತರಲಿರುವ ಈ ಮಸೂದೆಯನ್ನು ಅದು ಈಗ ಇರುವ ಸ್ವರೂಪದಲ್ಲಿ ಸಿಪಿಐ(ಎಂ) ವಿರೋಧಿಸುತ್ತದೆ, ಮತ್ತು ಇದಕ್ಕೆ ಇತರ ಎಲ್ಲ ಪಕ್ಷಗಳ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತದೆಎ ಎಂದು ಪೊಲಿಟ್‌ಬ್ಯುರೊ ನಿರ್ಧರಿಸಿದೆ.**

ವ್ಯಂಗ್ಯಚಿತ್ರ: ಮಂಜುಲ್



ಎಫ್‌ಆರ್‌ಡಿಐ ಮಸೂದೆ: ಭ್ರಷ್ಟಾಚಾರದ ವಿರುದ್ಧ ಸಮರವಲ್ಲ, ಜನಸಾಮಾನ್ಯರ ವಿರುದ್ಧವೇ ಸಮರ



ಸಂಸತ್ತಿನ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಹಣಕಾಸು ಇತ್ಯರ್ಥ ಮತ್ತು ಠೇವಣಿ ವಿಮಾ(ಎಫ್‌ಆರ್‌ಡಿಐ) ಮಸೂದೆಯನ್ನು ತರಾತುರಿಯಿಂದ ಪಾಸು ಮಾಡಿಕೊಳ್ಳಬೇಕೆಂದಿದೆ. ವಿಜಯ್ ಮಲ್ಯರಿಂದ ಹಿಡಿದು, ಅನಿಲ್ ಅಂಬಾನಿ, ಲಲಿತ್ ಮೋದಿ, ಗೌತಮ್ ಅದಾನಿವರೆಗೆ ಎಲ್ಲ ಹೊಲಸು ಪ್ರಕರಣಗಳಲ್ಲಿ ಭ್ರಷ್ಟಾಚಾರ ವಿರುದ್ಧ ಹೋರಾಟ' ಎಂಬ ಅಬ್ಬರದ ಮಾತಿನ ಹಿಂದಿರುವ ಹಿಂದಿನ ವಾಸ್ತವಿಕತೆ ಏನು ಎಂಬುದನ್ನು ನಾವು ಕಂಡಿದ್ದೇವೆ.**15 ಲಕ್ಷ ರೂ.' ಭರವಸೆ ಈಡೇರಲಿಲ್ಲ. ಆದ-ರೆ ಸಾರ್ವಜನಿಕ ವಲಯ ಬ್ಯಾಂಕಿನಲ್ಲಿ ಮಗಳ ಮದುವೆಗೆಂದೋ ಮಗನ ಉನ್ನತ ಶಿಕ್ಷಣಕ್ಕೆಂದೋ ಸಾರ್ವಜನಿಕ ವಲಯದ ಬ್ಯಾಂಕಲ್ಲಿ ಭದ್ರವಾಗಿರುತ್ತದೆಂದು ಕೂಡಿಟ್ಟ 15ಲಕ್ಷರೂ. ವಾಪಸ್ಸು ಪಡೆಯುವಾಗ 1 ಲಕ್ಷವಾಗಬಹುದು –ಎಫ್‌ಆರ್‌ಡಿಐ ಪ್ರಸ್ತಾವಿಸುವುದು ಇದನ್ನೇ. ಇದಕ್ಕಿಂತ ಕ್ರೂರವಾದ ಸಂಗತಿ ಬೇರೆ ಇದೆಯೇ?ಜನ ಸಾಮಾನ್ಯರ ವಿರುದ್ಧದ ಈ ಯುದ್ಧವನ್ನು ನಮ್ಮ ಶಕ್ತಿ ಮೀರಿ ಎದುರಿಸಿ ನಿಲ್ಲಬೇಕಿದೆ ಎನ್ನುತ್ತಾರೆ ಈ ಮಸೂದೆಯ ವಿಶ್ಲೇಷನೆ ಮಾಡಿರುವ ಹಿರಿಯ ಸಿಪಿಐ(ಎಂ) ಮುಖಂಡರಾದ**

ನೀಲೋತ್ಪಲ ಬಸು. ಸಂಗ್ರಹಾನುವಾದ: ಭಾರತಿ ಗಾಂವ್ಕರ್

'ಭ್ರಷ್ಟಾಚಾರ ವಿರುದ್ದ ಸಮರ' ಎಂಬ ಪೊಳ್ಳು ಭರವಸೆ ಬಯಲಾಗಿದೆ. ಅಮಿತ್..ಷಾ ಅವರೇ ಇದನ್ನು ಒಪ್ಪಿಕೊಂಡಿದ್ದಾರೆ. ವಿದೇಶೀ ಬ್ಯಾಂಕು ಖಾತೆಯಲ್ಲಿ ಶೇಖರಿಸಿಡಲಾಗಿರುವ 15 ಲಕ್ಷ ರೂ. ಬೃಹತ್ ಉಡುಗೊರೆ ಇನ್ನೆಂದೂ ದೊರಕದು. ಇದೊಂದು ಸ್ಪಷ್ಟವಾದ ಜುಮ್ಲಾ ಎಂದು ಶಹಾ ಒಪ್ಪಿಕೊಂಡಿದ್ದಾರೆ. ಅನಾಣ್ಯೀಕರಣದಿಂದ ಹಿಡಿದು ಗಣಕೀಕರಣದವರೆಗೆ ಮತ್ತು ಜಿ.ಎಸ್.ಟಿ; ಈ ಎಲ್ಲ ನಾಟಕೀಯ ಉಪಕ್ರಮಗಳನ್ನು ಭ್ರಷ್ಟಾಚಾರದ ವಿರುದ್ದ ಹೂಡಲಾದ ತಂತ್ರ ಎಂದು ಹೇಳಿಕೊಂಡಿದ್ದಾರೆ. ಆದರೆ ಈ ಶುದ್ದೀಕರಣ ಪ್ರಕ್ರಿಯೆ ಕೇವಲ ಮೋಸಗಾರಿಕೆಯಷ್ಟೇಎಂದೂ ಬಯಲಾಗಿದೆ. ಇದರಿಂದ ಇಡೀ ಆರ್ಥಿಕತೆಯನ್ನು ಆಘಾತಕ್ಕೆ ಈಡಾಗಿದೆ.

ಇವೆಲ್ಲವುಗಳಲಲಿ ಕಾಣುವ ತೀರ್ವಾನ ' ಏನೆಂದರೆ, ನೈಜವಾಗಿ ಈ ಎಲ್ಲ ಕಸರತ್ತುಗಳು ಪೂರ್ಣಗೊಂದಲಮಯವಾದದ್ದಾಗಿದೆ. ಇವೆಲ್ಲದರ ಮುಖ್ಯ ಉದ್ದೇಶ ಬ್ಯಾಂಕಿಂಗ್ ವ್ಯವಸ್ಥೆಯ ಭಯಾನಕ ವಾಸ್ತವಿಕತೆಯಿಂದ ಜನ ಸಾಮಾನ್ಯರ ಗಮನವನ್ನು ಬೇರೆಡೆಗೆ ಸೆಳೆಯುವದಾಗಿತ್ತು; ಇದು ಚಮಚಾ ಬಂಡವಾಳಶಾಹೀ ವ್ಯವಸ್ಥೆಯ ಪರಿಣಾಮ. ತೆರಿಗೆ ವಿನಾಯಿತಿ ಮತ್ತು ಸುಸ್ತಿ ಸಾಲಗಳು ಭಾರತದ ಆರ್ಥಿಕತೆಯಲ್ಲಿರುವ ಚಮಚಾ ಬಂಡವಾಳಶಾಹಿಯ ಪ್ರಮುಖ ಸೂಚನೆಯಂತಿದ್ದು ಇದರ ಪರಿಣಾಮವಾಗಿ ತಡೆಹಿಡಿಯಲು ಸಾಧ್ಯವಾಗಷ್ಟರ ಮಟ್ಟಿಗೆ ಅಸಮಾನತೆ ಮತ್ತು ಸಂಪತ್ತಿನ ವ್ಯತಿರಿಕ್ತವಾದ ವರ್ಗಾವಣೆ ನಡೆಯುತ್ತಿದೆ.

ಮೋದಿಯವರ 'ನಾ ಖಾವುಂಗಾ ನಾ ಖಾನೇದ್‌ಊಂಗಾ' ಘೋಷಣೆ ಪ್ರಮಾಣಿಕವಾದುದ್ದಾಗಿದ್ದರೆ ನಮ್ಮ ಬ್ಯಾಂಕಿಂಗ ವ್ಯವಸ್ಥೆಯಲ್ಲಿ ಹಿಂದೆಂದೂ ಕಾಣದಷ್ಟ್ರಮಟ್ಟಿಗೆ ಸಂಗ್ರಹವಾಗಿಬಿದ್ದಿರುವ ಕಾರ್ಯನಿರ್ವಹಿಸದ–ಸ್ವತ್ತುಗಳು ಅವರ ತುರ್ತು ಆದ್ಯತೆಯಾಗಬೇಕಿತ್ತು; ಆದರೆ ಹಾಗಾಗಿಲ್ಲ.

ಭೀಕರ ಅವ್ಯವಸ್ಥೆ

ಸುಸ್ತಿ ಸಾಲಗಳ ಸಂಚಿತ ಗಾತ್ರವನ್ನು ತಡೆಹಿಡಿಯುವ ಬದಲು, ಕಳೆದ ಮೂರುವರೆ ವರ್ಷದ ಮೋದಿ ಸರಕಾರದ ಆಢಳಿತಾವಧಿಯಲ್ಲಿ ಒಟ್ಟೂ ಸಾಲ–ಮನ್ನಾ(ಬಂಡವಾಳಿಗರಿಗೆ) 2,39,082 ಕೋಟಿ ರೂಪಾಯಿಗಳು. ಈ ಹಿಂದೆ ಅಧಿಕಾರದಲ್ಲಿದ್ದ ಸರಕಾರ ಮಾಡಿದ ಕೆಲಸಗಳಿಂದ ದೇಶ ಬಳಲಿದೆ ಎಂದು ಜರಿಯುತ್ತಿದ್ದ ಈಗಿನ ಪ್ರಧಾನಿ ಆ ಎಲ್ಲ ಕೆಲಸವನ್ನು ಮಾಡಿ, ದಾಟಿ ಮುಂದೆ ನಡೆದಿದ್ದಾರೆ ಎಂಬುದಂತೂ ಸ್ಪಷ್ಟ.

ನವ–ಉದಾರವಾದೀ ಕಾರ್ಪೋರೇಟ್ ಪರವಾಗಿರುವ ಮತ್ತು ಜನವಿರೋದೀ ನೀತಿಗಳನ್ನು ಆಕ್ರಮಣಕಾರಿಯಾಗಿ ಅನುರಿಸುವುದನ್ನು ಬಿಟ್ಟರೆ ಇನ್ನೇನು ನಿರಿಕ್ಷಿಸಬಹುದು ಇವರಿಂದ. ಜಿ–20 ರ ಹಣಕಾಸು ಸ್ಥಿರತೆ ಮಂಡಳಿಯ ಶಿಫಾರಸ್ಸುಗಳನ್ನು ಸರಕಾರ ನಕಲು ಮಾಡಿದಂತೆ ತೋರುತ್ತದೆ. ಸರಕಾರದ ವಿನಾಶಕಾರೀ ಧೋರಣೆಗಳನ್ನು ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಜನವರಿ 2017ರ ತನ್ನ ನಿರ್ಣಯದಲ್ಲಿ ಸ್ಪಷ್ಟವಾಗಿ ಎಚ್ಚರಿಸಿತ್ತು "ಒಂದುವೇಳೆ ಇದೇನಾದರೂ ಕಾನೂನಾಗಿ ಜಾರಿಯಾದರೆ, ದೇಶದ ಹಣಕಾಸು ಸ್ಥಿರತೆಯನ್ನು ಖಾತ್ರಿಪಡಿಸುವ ಆರ್.ಬಿ.ಐ.ನ ಅಧಿಕಾರಗಳಾದ ಮೇಲುಸ್ತವಾರಿ, ನಿಯಂತ್ರಣ ಮತ್ತು ಹಣಕಾಸುನೀತಿಗಳಿಂದ ಬದಲಾಗಿಬಿಡುತ್ತದೆ. ಇದರ ಅರ್ಥ, ಕುಸಿತ ಎದುರಿಸುತ್ತಿರುವ ಬ್ಯಾಂಕುಗಳು ಮತ್ತು ಬ್ಯಾಂಕುಗಳಿಂದ ಎಗ್ಗಿಲ್ಲದೇ ಸಾಲಪಡೆದಿರುವ ಕಾರ್ಪೋರೇಟ್‌ಗಳ ಪರವಾಗಿ, ಭದ್ರತೆಗೆ ನೆರವಾಗುವ ಹೆಸರಿನಲ್ಲಿ ಸಾಮಾನ್ಯ ಠೇವಣಿದಾರರ ಹಿತಾಸಕ್ತಿಗಳ ಆಹುತಿಯಾಗುತ್ತದೆ."

ಹಣಕಾಸು ಸ್ಥಿರತೆ ಮಸೂದೇ(ಎಫ್.ಎಸ್.ಬಿ) ಪ್ರಸ್ತಾಪಿಸಿದಂತೆ, ನಿರ್ಣಯ ಆಧಿಕಾರ ಹೊಂಧಿರುವ ಮಂಡಳಿಯು, ಠೇವಣಿದಾರರ ಒಪ್ಪಿಗೆ ಇಲ್ಲದೇ ಅವರ ಹಣ ಮತ್ತು ವಸ್ತುಗಳೊಂದಿಗೆ ಮರುಬಂಡವಾಳ ನೀಡಿಕೆ ಮಾಡುವ ಅಧಿಕಾರ ಹೊಂದಿರುತ್ತದೆ ಎಂಬುದನ್ನು ಖಾತ್ರಿಪಡಿಸುತ್ತದೆ.

ಭಾರತದಲ್ಲಿ ಠೇವಣಿ ವಿಮೇ ಮತ್ತು ಸಾಲ ಖಾತರಿ ಕಾರ್ಪೋರೆಶನ್ ತನ್ನ ಅಧಿಕಾರಾವಧಿಯಲ್ಲಿ, ಬ್ಯಾಂಕು ಕುಸಿತಕ್ಕೆ ಒಳಗಾಗುವ ಸಂದರ್ಭದಲ್ಲಿ ಪ್ರತೀ ಠೇವಣಿದಾರನಿಂದ 1 ಲಕ್ಷರೂಪಾಯಿಯನ್ನು ವಿಮೆ ಮಾಡುತ್ತದೆ. ಪ್ರತಿಯೊಬ್ಬ ಠೇವಣಿದಾರನೂ ಒಂದುಲಕ್ಷಕ್ಕಿಂತ ಹೆಚ್ಚು ಎಷ್ಟುಬೇಕಾದರೂ ತನ್ನ ಖಾತೆಯಲ್ಲಿ ಠೇವಣಿ ಮಾಡಬಹುದು, ಆದರೆ ಒಂದು ವೇಳೆ ಬ್ಯಾಂಕ್ ಕುಸಿತಕ್ಕೊಳಗಾದರೆ, ಠೇವಣಿದಾರನಿಗೆ 1 ಲಕ್ಷರೂಪಾಯಿ ಮಾತ್ರ ದೊರೆಯುತ್ತದೆ, ಉಳಿದ ಹಣ ವಾಪಸ್ಸು ಪಡೆಯಲು ಯಾವುದೇ ಕಾನೂನಾತ್ಮಕ ಪರಿಹಾರ ಇರುವುದಿಲ್ಲ.

ಜಾರಿಮಾಡಲು ತುರಾತುರಿ.

2017ರ ಬಜೆಟ್ ನಂತರ ತಕ್ಷಣದಲ್ಲಿ, ಹಣಕಾಸು ಖಾತೆ ಸಮಿತಿಯೊಂದನ್ನು ರಚಿಸಿಲಾಯಿತು, ಅದು ತನ್ನ ವರದಿ ಮತ್ತು ಒಂದು ಕರಡು ಸಂಹಿತೆಯನ್ನು ಸಪ್ಟೆಂಬರ್ 28 2016ರಂದು ಸಲ್ಲಿಸಿತು. ತಡಮಾಡದೇ ಆ ವರದಿಯನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಲಾಯಿತು ಮತ್ತು ಹಣಕಾಸು ನಿರ್ಣಯ ಮತ್ತು ಠೇವಣಿ ವಿಮೆ(ಎಫ್.ಆರ್.ಡಿ.ಐ) ಮಸೂದೆ ಅಕ್ಟೋಬರ್ 14, 2016ರಲ್ಲಿ ರಚಿತವಾಯಿತು. ಜೂನ್ 14, 2017ರಂದು ಸಚಿವ ಸಂಪುಟ ಮಸೂಧೆಯನ್ನು ಅಧಿವೇಶನದಲ್ಲಿ ಮಂಡಿಸಲು ಒಪ್ಪಿಗೆ ನೀಡಿತು ಮತ್ತು ಅಂತಿಮವಾಗಿ ಲೋಕಸಭೆಯ ಮಳೆಗಾಲದ ಅಧಿವೇಶನದ ಅಂತಿಮ ದಿನವಾದ ಅಗಷ್ಟ 10ರಂದು ಮಂಡಿಸಲಾಯಿತು. ಹಣಕಾಸಿನ ಕುರಿತಾದ ಸಂಸದೀಯ ಸ್ಥಾಯೀ ಸಮಿತಿಯ ಮುಂದೆ ಈ ಮಸೂದೆಯನ್ನು ಉಲ್ಲೇಖಿಸುವ ಬದಲಾಗಿ; ಜಂಟೀ ಆಯ್ಕೆ ಸಮಿತಿಯ ಮುಂದೆ ಉಲ್ಲೇಖಿಸಲಾಯಿತು; ಇದರ ಸ್ಪಷ್ಟ ಉದ್ದೇಶ, ಸರಕಾರೀ ಮಸೂದೆಯ ಮೇಲೆ ಯಾವುದೇ ಮತದಾನ ನಡೆಯದಂತೆ ನೋಡಿಕೊಳ್ಳುವದು, ಹಾಗೆಯೇ ಜಂಟೀ ಸ್ಥಾಯಿ ಸಮಿತಿ ಏನು ತಿರ್ಮಾನಿಸುತ್ತದೆ ಎಂದು ಸಹ ನೋಡುವದು.

ಚಳಿಗಾಲದ ಅಧಿವೇಶನದ ಅಂತ್ಯದಲ್ಲಿ ಸರಕಾರವು ಈ ವಿನಾಶಕಾರೀ ಮಸೂದೆಯನ್ನು ತರುವ ಪ್ರಯತ್ನ ಮಾಡುತ್ತಿರುವಂತೆ ತೋರುತ್ತದೆ.

ಈ ಮಸೂದೆಯಲ್ಲಿ ಅಷ್ಟೊಂದು ಅಪಾಯಕಾರಿಯಾಗಿರುವಂತಹದ್ದು ಏನಿದೆ?

ಈ ಮಸೂದೆಯು ದಿವಾಳಿ ಅಥವಾ ಸಂಭಾವ್ಯ ದಿವಾಳೀ ಎಂದು ಪರಿಗಣಿಸಲಾಗುವ ಸಾರ್ವಜನಿಕ ವಲಯದ ಬ್ಯಾಂಕುಗಳ ಮತ್ತು ಇತರ ಹಣಕಾಸು ಸಂಸ್ಥೆಗಳ ಆಸ್ತಿಗಳನ್ನು ವರ್ಗಾವಣೆ ಮಾಡಲು ಒಂದು ಬ್ರಿಜ್ ಸರ್ವಿಸ್ ಪ್ರೊವೈಡರ್(ಇದು ಕಾಸಗಿ ವಲಯದ ಒಮದು ಸಂಸ್ಥೆಯೂ ಆಗಿರಬಹುದು) ರಚಿಸಲು ಅನುಕೂಲ ಮಾಡಿಕೊಡುತ್ತದೆ.

ಈ ಮಸೂದೆಯು ಒಂದು ಸರ್ವಶಕ್ತ ರಿಸೊಲುಶನ್ ಕಾರ್ಪೋರೇಶನ್('ಇತ್ಯರ್ಥ ನಿಗಮ' –ಆರ್‌ಸಿ)ಯನ್ನು' ಸ್ಥಾಪಿಸಲು ಅವಕಾಶ ನೀಡುತ್ತದೆ. ಇದು ಠೇವಣಿ ವಿಮೆಯನ್ನು ಒದಗಿಸಲು ಪ್ರಮುಖ ಏಜನ್ಸಿಯಾಗಿ, ಹಾನಿ ಸಂಭಾವ್ಯತೆಯನ್ನು ಆಧರಿಸಿ ಬ್ಯಾಂಕುಗಳ ವರ್ಗೀಕರಣ, ನಿರ್ದಿಷ್ಟಪಡಿಸಿದ ಸೇವಾಪೋರೈಕೆದಾರರ ಅಂದರೆ ಬ್ಯಾಂಕುಗಳ ಮತ್ತು ಇತರ ಹಣಕಾಸು ಸಂಸ್ಥೆಗನ್ನು ಕುರಿತಂತೆ ಇತ್ಯರ್ಥ ಮುಚ್ಚಲಿಕ್ಕೆ ಆಡಳಿತಗಾರನಾಗಿ ಕೆಲಸ ಮಾಡುತ್ತದೆ.

'ಇತ್ಯರ್ಥ ನಿಗಮ' ಮಂಡಳಿಯು 11 ಜನ ಸದಸ್ಯರನ್ನು ಒಳಗೊಳಗೊಂಡಿರುತ್ತದೆ ಅದರಲ್ಲಿ ಏಳುಜನ ಸದಸ್ಯರನ್ನು ನೇರವಗಿ ಹಣಕಾಸು ಖಾತೆ ನೇಮಿಸುತ್ತದೆ. ವಿಲೀನಿಕರಣ, ಮುಚ್ಚುವುದು, ಎಸ್.ಬಿ.ಐ ನಂತಹ ಪ್ರಮುಖ ಬೃಹತ್ ಬ್ಯಾಂಕುಗಳನ್ನೂ ಒಳಗೊಂಡು ಇತರ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು, ಸ್ಥಳೀಯ ಗ್ರಾಮೀಣ ಬ್ಯಾಂಕುಗಳು, ಸಹಕಾರೀ ಬ್ಯಾಂಕುಗಳು, ಪಾವತಿ ಬ್ಯಾಂಕುಗಳು, ಎಲ್.ಐ.ಸಿ ಮತ್ತು ಯಾವುದೇ ಸಾರ್ವಜನಿಕ ವಲಯದ ವಿಮಾ ಕಂಪನಿಗಳನ್ನ ಸ್ವಾಧೀನಪಡಿಸಿಕೊಳ್ಳುವಂತಹ ನೇರ ಅಧಿಕಾರವನ್ನು ಅದು ಹೊಂದಿರುತ್ತದೆ. 'ಇತ್ಯರ್ಥ ನಿಗಮ' ಮಂಡಳಿಯು ತಾನು ಹೊಂದಿರುವ ಅಧಿಕಾರಗಳ ಉಪಯೋಗದಿಂದ ಇಗಾಗಲೇ ಅಸ್ಥಿತ್ವದಲ್ಲಿರುವ ಸಂಸ್ಥೆಗಳಾದ ರಿಝರ್ವ್ ಬ್ಯಾಂಕ್, ಸೆಬಿ, ಐಆರ್‌ಡಿಎ ಮುಂತಾದವನ್ನು ನಿಯಂತ್ರಿಸಲು ಪ್ರಾರಂಬಿಸುತ್ತದೆ.

ದಿವಾಳಿಯಾಗುವ ಪ್ರಕ್ರಿಯೆಯನ್ನು ತಪ್ಪಿಸುವ ಅವಶ್ಯಕತೆಇದೆ ಎಂಬ ನೆಪದಿಂದ ಈ ಆರ್‌ಸಿ ಆರ್ಥಿಕ ವಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಸೇವಾ ಶರತ್ತುಗಳನ್ನು ಏಕಪಕ್ಷೀಯವಾಗಿ ಬದಲಾಯಿಸಬಹುದು ಎಂಬುದಂತೂ ಸ್ಪಷ್ಟ. ನಿಜ, ಇಂತಹ ಒಂದು ದುಸ್ಥಿತಿಯ ಸೃಷ್ಟಿಗೆ ಕಾರಣವಾಗಿರುವ ಕಾರ್ಪೋರೇಟ್ ಸಾಲವನ್ನು ವಸೂಲಿ ಮಾಡುವ ಯಾವುದೇ ಗಂಬೀರ ಪ್ರಯತ್ನಗಳ ಸೂಚನೆಯೇನೂ ಇಲ್ಲ.

ಈವರೆಗಿನ ಅನುಭವಗಳು

ಸರಕಾರ ಹೇಳಿಕೊಳ್ಳುವಂತೆ ಸಾಲವಸೂಲಿ ಮತ್ತು ದಿವಾಳಿ ಸಂಹಿತೆಗೆ ಒಂದು ಟ್ರಿಬ್ಯೂನಲ್ ರಚಿಸಿ, ಸಂಬಾವ್ಯ ದಿವಾಳಿಯಾಗುವ ಮತ್ತು ಸಾಲಮರುಪಾವತಿಸಲಾಗದ ಸಂಸ್ಥೆಗಳನ್ನು ಅವರ ಸಾಲ ಬೇಪಾವತಿ ಆಧಾರದಮೇಲೆ ಗುರುತಿಸಿ ಕಠಿಣ ದಂಡವಿಧಿಸಲಾಗುವದು ಎನ್ನುತ್ತದೆ, ಆದರೆ ಈ ವರೆಗಿನ ಅನುಭವ ಇದಕ್ಕೆ ವಿರುದ್ಧವಾದದ್ದು.

ಸಾಲಗ್ರಸ್ತ ಜಾಗತಿಕ ಆರ್ತಿಕ ವಯವಸ್ಥೆಯಲ್ಲಿ ಹೊಸದೊಂದು ಪದ ಸೃಷ್ಟಿಯಾಗಿದೆ–'ಹೇರ್ ಕಟ್' ಎಂದು. ಈ ಅಮಾಯಕ ಪದದ ಅರ್ಥ–,ಬ್ಯಾಂಕುಗಳು ಸುಸ್ತಿಯಾಗಬಹುದೆಂದು ಅಂದಾಜಿಸಿರುವ ಸಾಲಗಳಿಗಿಂತ ಹೆಚ್ಚಿನ ಸಾಲಬಾಕಿಯಾದರೆ ಅದನ್ನು ತಾವೇ ತುಂಬಬೇಕು. ಇತ್ಯರ್ಥ ಪ್ರಕ್ರಿಯೆಯಿಂದ ಎಷ್ಟು ಕಡಿಮೆ ವಸೂಲಾತಿ ಮಾಡಲಾಗುತ್ತದೆಯೊ, ಅಷ್ಟೇ ಹೆಚ್ಚನ 'ಹೇರ್‌ಕಟ್' ಬ್ಯಾಂಕುಗಳಿಗೆ, ಅಂದರೆ ಅಷ್ಟೆ ಹೆಚ್ಚಿನ ಮೊತ್ತವನ್ನು ಬ್ಯಾಕುಗಳು ತೆರಬೇಕಾಗುತ್ತದೆ. ಕ್ರಸಿಲ್ ಎನ್ನುವ ಗಂಡಾಂತರ ಮೌಲ್ಯಮಾಪನ ಮಾಡುವ ಸಮಾಲೋಚಕ ಕಂಪನಿ ಅಧ್ಯಯನ ನಡೆಸಿರುವ ಹಾಗೆ, ಅಗ್ರ 50 ಕಾರ್ಯನಿರ್ವಹಿಸದ ಸ್ವತ್ತಿನ 60% 'ಹೇರ್ ಕಟ್'ಗಳನ್ನು ಬ್ಯಾಂಕುಗಳೇ ವಹಿಸಬೇಕಾಗುತ್ತದೆ. ಆದರೆ, ವಾಸ್ತವಿಕವಾಗಿ ಇನ್ನೂ ಹೆಚ್ಚಾಗುವ ಸಾಧ್ಯತೆಯೇ ಹೆಚ್ಚು.

ಹಣಕಾಸು ಸ್ಥಿರತೆ ಮಂಡಳಿಯ ಅಗಷ್ಟ 2016ರ ವಿಮರ್ಶಾ ವರದಿಯ ಪ್ರಕಾರ 63% ಸಾಮಾನ್ಯ ಭಾರತೀಯರ ಹಣಕಾಸು ಹೂಡಿಕೆಯು ಬ್ಯಾಂಕಿಂಗ ವ್ಯವಸ್ಥೆಯ ಒಳಗಡೆಯೇ ನಡೆದಿರುತ್ತದೆ. ಅದರಲ್ಲಿ 63% ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು 18% ಖಾಸಗೀ ವಲಯದ ಬ್ಯಾಂಕುಗಳು. ಕಾರ್ಯನಿರ್ವಹಿಸದ ಸ್ವತ್ತಿಗೆ ಕಾರಣಕರ್ತರಾಗಿರುವ ಕಾರ್ಪೋರೇಟ್ ಸಂಸ್ಥೆಗಳಮೇಲೆ ಸಾರ್ವಜನಿಕ ಬ್ಯಾಂಕುಗಳಿಗೆ ಯಾವುದೇ ಹಿಡಿತ ಇಲ್ಲವಾದ್ದರಿಂದ, ಮೂಲ ಸಾಲದಿಂದ ಕೇವಲ 15ರಿಂದ 20% ಮಾತ್ರ ವಸೂಲು ಮಾಡಬಹುದಾಗಿದೆ. ರಿಝರ್ವ್ ಬ್ಯಾಂಕ್ ' ಮಧ್ಯಪ್ರವೇಶದ ಕೊರತೆಯಿಂದಾಗಿ ಕಾರ್ಪೋರೇಟ್ ಸಾಲ ಬೇಪಾವತಿ ಮಾಡುವವರ ಮೇಲೆ ಕಠಿಣ ಕ್ರಮ ಮಾಡಲಾಗುತ್ತಿಲ್ಲ.

ಈ ಹಂತದಲ್ಲಿ 2017 ರ ಎಫ್‌ಆರ್‌ಡಿಐ ಮಸೂದೆ ಬರುತ್ತಿದೆ. ಇದರಲ್ಲಿ ಬೇಲ್–ಇನ್ (ಅಂದರೆ ಒಳಗಿಂದ ಪಾರುಮಾಡುವ)ಅಂಶ ಇದೆ. . ಬ್ಯಾಂಕುಗಳ ನಷ್ಟವನ್ನು ಹೀರಲು ಠೇವಣಿದಾರರನ್ನು ಬಲವಂತವಾಗಿ ನೂಕ ಬಹುದು ಎಂಬುದೇ ಇದರ ಸರಳ ಅರ್ಥ. ಕಷ್ಟ ಪಟ್ಟು ತಮ್ಮ ಹಣ ಕೂಡಿಟ್ಟ ಪಿಂಚಣಿದಾರರು ಮತ್ತು ಸಣ್ಣ ಠೇವಣಿದಾರರು ಕಾರ್ಪೋರೇಟ್ ದುಷ್ಕೃತ್ಯ ಮತ್ತು ಸರಕಾರದ ಚಮಚಾಗಳಿಂದ ಬ್ಯಾಂಕುಗಳು ವಸೂಲಿ ಮಾಡಲಾಗದ್ದನ್ನು ಪಾವತಿಸಲು ಬಲವಂತಪಡಿಸಲಾಗುತ್ತದೆ. ಇದರಿಂದ ಕಾರ್ಪೋರೇಟ್ ಸಾಲಗಾರರು ಸುಲಭವಾಗಿ ಪಾರಾಗುತ್ತಾರೆ. ಈ ಆರ್‌ಸಿ ಯ ಪಾರು ಪ್ರಕ್ರಿಯೆಯ ನಿರ್ಧಾರಗಳ ಎಲ್ಲಕ್ಕಿಂತ ಕ್ರೂರವಾದ ಸಂಗತಿ ಎಂದರೆ, ಜನಸಾಮಾನ್ಯರ ಪರವಾನಿಗೆಯ ಮಾತು ದೂರ ಉಳಿಯಲಿ, ಈ ವಿಷಯಗಳನ್ನು ಅವರ ಗಮನಕ್ಕೇ ತರಲಾಗುವದಿಲ್ಲ!.

ಇದು ಕಾಲ್ಪನಿಕವಲ್ಲ, ಸೈಪ್ರಸ್ ದೇಶದಲ್ಲಿ, ಇದೇರೀತಿಯ ಒಂದು ಪರಿಸ್ಥಿತಿಯಲ್ಲಿ ಠೇವಣಿದಾರರು ವಸೂಲಿಮಾಡಲಾಗದೇ ಇರುವ 47.5 % ಮೊತ್ತವನ್ನು ಭರಿಸಬೇಕಾಯಿತು.

ವಿಜಯ್ ಮಲ್ಯರಿಂದ ಹಿಡಿದು, ಅನಿಲ್ ಅಂಬಾನಿ, ಲಲಿತ್ ಮೋದಿ, ಗೌತಮ್ ಅದಾನಿವರೆಗೆ ಎಲ್ಲ ಹೊಲಸು ಪ್ರಕರಣಗಳಲ್ಲಿ ಭ್ರಷ್ಟಾಚಾರ ವಿರುದ್ಧ ಹೋರಾಟ' ಎಂಬ ಅಬ್ಬರದ ಮಾತಿನ ಹಿಂದಿರುವ ಹಿಂದಿನ ವಾಸ್ತವಿಕತೆ ಏನು ಎಂಬುದನ್ನು ನಾವು ಕಂಡಿದ್ದೇವೆ. 15 ಲಕ್ಷ ರೂ.' ಭರವಸೆ ಈಡೇರಲಿಲ್ಲ. ಆದರೆ ಸಾರ್ವಜನಿಕ ವಲಯ ಬ್ಯಾಂಕಿನಲ್ಲಿ ಮಗಳ ಮದುವೆಗೆಂದೋ ಮಗನ ಉನ್ನತ ಶಿಕ್ಷಣಕ್ಕೆಂದೋ ಸಾರ್ವಜನಿಕ ವಲಯದ ಬ್ಯಾಂಕ್ನಲ್ಲಿ ಭದ್ರವಾಗಿ ಕೂಡಿಟ್ಟ 15ಲಕ್ಷರೂ. ವಾಪಸ್ಸು ಪಡೆಯುವಾಗ 1 ಲಕ್ಷವಾಗಬಹುದು ಎಫ್‌ಆರ್‌ಡಿಐ ಪ್ರಸ್ತಾವಿಸುವುದು ಇದನ್ನೇ. ಇದಕ್ಕಿಂತ ಕ್ರೂರವಾದ ಸಂಗತಿ ಬೇರೆ ಇದೆಯೇ?

ಜನ ಸಾಮಾನ್ಯರ ವಿರುದ್ಧದ ಈ ಯುದ್ಧವನ್ನು ನಮ್ಮ ಶಕ್ತಿ ಮೀರಿ ಎದುರಿಸಿ ನಿಲ್ಲಬೇಕಿದೆ. ಬ್ಯಾಂಕ್ ಅಧಿಕಾರಿಗಳು ಮತ್ತು ನೌಕರರ ಸಂಘಗಳು ಈಗಾಗಲೇ ಬೃಹತ್ ಹೋರಾಟವನ್ನು ನಡೆಸಿವೆ. ಹೆಚ್ಚುತ್ತಿರುವ ಪ್ರತಿರೋಧಕ್ಕೆ ಪ್ರತಿಕ್ರಿಯಿಸುತ್ತ ಅರುಣ್ ಜೇಟ್ಲಿ ನಿಭಂದನೆಗಳನ್ನು ಪರಿಶೀಲಿಸುವ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಸರಕಾರದ ಆಕ್ರಮಣಕಾರೀ ನೀತಿಯನ್ನು ಗಮನಿಸಿದರೆ ಇಂತಹ ಒಂದು ಪ್ರಕ್ರಿಯೆಯಿಂದ ಅದು ಹೊರಬರುವಂತೆ ತೋರುವದಿಲ್ಲ. ಇದು ಕೇವಲ ಸಾರ್ವಜನಿಕ ವಲಯವನ್ನು ಹಣಕಾಸು ಸಂಸ್ಥೆಗಳನ್ನು ಖಾಸಗೀಕರಿಸುವ ಮತ್ತು ಉದ್ಯೋಗ ಭದ್ರತೆಯ ಅಂಶವಷ್ಟೇ ಅಲ್ಲ; ಇದು ಜನರ ಉಳಿತಾಯ ಮತ್ತು ಭವಿಷ್ಯವನ್ನೂ ಅಪಾಯಕ್ಕೀಡು ಮಾಡಿದೆ. ಇದು ಜೀವನೋಪಾಯದ ಹಕ್ಕು; ಸಂವಿಧಾನ ಖಾತ್ರಿಪಡಿಸಿರುವ ಖಾಸಗೀ ಆಸ್ತಿ. ಆದ್ದರಿಂದ, ಒಂದು ಸಾಧ್ಯವಾದಷ್ಟೂ ವಿಶಾಲವಾದ ಐಕ್ಯತೆ ಬೆಸೆದು ಬೃಹತ್ ಹೋರಾಟವನ್ನು ನಡೆಸುವುದೇ ನಮ್ಮ ಮುಂದಿರುವ ಏಕೈಕ ದಾರಿ.



ಕಡುಬಡವರ ಸಬ್ಸಿಡಿ ಅನ್ನಕ್ಕೆ ಕತ್ತರಿ ಹಾಕಿದ ಮಹಾರಾಷ್ಟ್ರ ಬಿಜೆಪಿ ಸರಕಾರ

ಮಹಾರಾಷ್ಟ್ರದ ವಿದರ್ಭ ಮತ್ತು ಮರಾಠವಾಡ ಪ್ರದೇಶಗಳಲ್ಲಿ 2015ರಲ್ಲಿ ಹಸಿವಿನಿಂದ ಸಾವುಗಳು ಸಂಭವಿಸಿದಾಗ ಕಡು ಬಡವರಿಗೆ ತಿಂಗಳಿಗೆ 35 ಕೆಜಿ ಆಹಾರಧಾನ್ಯಗಳನ್ನು ಸಬ್ಸಿಡಿ ದರಗಳಲ್ಲಿ ಕೊಡುವ ಅಂತ್ಯೋದಯ ಅನ್ನ ಯೋಜನೆ(ಎಎವೈ)ಯನ್ನು ಆರಂಭಿಸಲಾಗಿತ್ತು. ಇದರಲ್ಲಿ 25 ಲಕ್ಷ ಕುಟುಂಬಗಳನ್ನು ದಾಖಲು ಮಾಡಿಕೊಳ್ಳಲಾಗಿತ್ತು. ಇದರಲ್ಲಿ ಹೆಚ್ಚಿನವು ಆದಿವಾಸಿ ಮತ್ತು ಭೂಹೀನ ಕುಟುಂಬಗಳು.

ಆದರೆ ಈಗ ಫಡ್ನವೀಸ್ ನೇತೃತ್ವದ ಬಿಜೆಪಿ ಸರಕಾರ ಇದ್ದಕ್ಕಿದ್ದಂತೆ 6 ಲಕ್ಷ ಕುಟುಂಬಗಳನ್ನು ಈ ಪಟ್ಟಿಯಿಂದ ಪಿಹೆಚ್‍ಹೆಚ್ (ಅಂದರೆ ಆದ್ಯತೆಯ ಕುಟುಂಬಗಳು) ಪಟ್ಟಿಗೆ ವರ್ಗಾಯಿಸಿದೆ. ಈ ಯೋಜನೆಯಲ್ಲಿ ಒಂದು ಕುಟುಂಬಕ್ಕೆ ತಿಂಗಳಿಗೆ 5 ಕೆಜಿ ಆಹಾರಧಾನ್ಯಗಳು ಮಾತ್ರ ಸಬ್ಸಿಡಿ ದರಗಳಲ್ಲಿ ಸಿಗುತ್ತದೆ. ಅಂದರೆ ಈ 6 ಲಕ್ಷ ಕುಟುಂಬಗಳಿಗೆ ತಿಂಗಳಿಗೆ 30 ಕೆಜಿ ಆಹಾರ ಧಾನ್ಯಗಳ ತೀವ್ರ ಕಡಿತ.

ಇಂತಹ ತೀವ್ರ ಕಡಿತಕ್ಕೆ ಸರಕಾರ ಕೊಡುವ ಕಾರಣವೇನು? ಈ 6 ಲಕ್ಷ ಕುಟುಂಬಗಳು ಒಂದು ಅಥವ ಎರಡು ಸದಸ್ಯರಿರುವ ಕುಟುಂಬಗಳು. ಇವರಿಗೆ ತಿಂಗಳಿಗೆ 5 ಕೆಜಿ ಆಹಾರಧಾನ್ಯಗಳಷ್ಟೇ ಸಾಕು. ಉಳಿದದ್ದನ್ನು ಅವರು ಕಾಳಸಂತೆಯಲ್ಲಿ ಮಾರುತ್ತಿದ್ದಾರಂತೆ. ಸರಕಾರ ಈ ನಿರ್ಧಾರಕ್ಕೆ ಯಾವ ಆಧಾರದಲ್ಲಿ ಬಂದಿದೆ, ಈ ಬಗ್ಗೆ ಸರ್ವೆಯೇನಾದರೂ ನಡೆದಿದೆಯೇ ಎಂದು ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಕಿರಣ್ ಮೋಘೆ ಕೇಳುತ್ತಾರೆ. ಎಎವೈ ಫಲಾನುಭವಿಗಳು ಬಡವರಲ್ಲಿ ಕಡು ಬಡವರು, ಅವರ ಆದಾಯ ಅತ್ಯಂತ ಕಡಿಮೆ ಎಂಬುದನ್ನು ಅವರು ನೆನಪಿಸುತ್ತಾರೆ.

ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಮುಖ್ಯ ಕಾರ್ಯದರ್ಶಿಯವರ ಪ್ರಕಾರ ಒಬ್ಬನಿಗೆ ಒಂದು ತಿಂಗಳಿಗೆ 5 ಕೆಜಿ ಆಹಾರಧಾನ್ಯಗಳು ಸಾಕಲ್ಲವೇ, ಆದರೂ ಇಂತವರ ಮನೆಗೆ ಹೋದಾಗ ಹೆಚ್ಚುವರಿ ಧಾನ್ಯಗಳು ಕಾಣ ಸಿಗುವುದಿಲ್ಲ, ಏಕೆಂದರೆ ಇದನ್ನು ಅವರು ಕಾಳಸಂತೆಯಲ್ಲಿ ಮಾರುತ್ತಾರೆ, ಹೀಗೆಂದು ಸ್ಥಳೀಯ ವ್ಯಾಪಾರಿಗಳೂ ಹೇಳುತ್ತಿದ್ದಾರೆ, ಎಂದು ಈ ಉನ್ನತ ಸರಕಾರೀ ಅಧಿಕಾರಿ ಹೇಳಿದ್ದಾರಂತೆ.

ವಾಸ್ತವವಾಗಿ ಇದು ರಾಜ್ಯ ಸರಕಾರದ ಕಾನೂನುಬಾಹಿರ ಕ್ರಮ, ಏಕೆಂದರೆ ಎಎವೈ ಫಲಾನುಭವಿಗಳನ್ನು ಒಂದು ನಿರ್ದಿಷ್ಟ ಮಾನದಂಡದ ಮೇಲೆ ದಾಖಲು ಮಾಡಿಕೊಳ್ಳಲಾಗಿದೆ. ಅವರನ್ನು ಮನಬಂದಂತೆ ಬೇರೆ ಪಟ್ಟಿಗೆ ವರ್ಗಾಯಿಸಲು ಸಾಧ್ಯವಿಲ್ಲ ಎನ್ನುತ್ತಾರೆ ಕೊಂಕಣ ಪ್ರದೇಶದಲ್ಲಿ ಆಹಾರ ಹಕ್ಕು ಆಂದೋಲನದ ಕಾರ್ಯಕರ್ತರಾದ ಉಲ್ಕಾ ಮಹಾಜನ್.

ವಿದರ್ಭ ಪ್ರದೇಶದ ಒಬ್ಬ ರೈತರ ಹಕ್ಕುಗಳ ಚಳುವಳಿಯ ಕಾರ್ಯಕರ್ತ ಕಿಶೋರ್ ತಿವಾರಿ ಕೂಡ, ಇದು ಕಾನುನಿನ ಉಲ್ಲಂಘನೆ ಎನ್ನುತ್ತಾರೆ . ಏಕೆಂದರೆ ಇದು ಕೇಂದ್ರೀಯ ಕಾನೂನು, ಇದನ್ನು ರಾಜ್ಯಸರಕಾರ ತನ್ನ ಮನಬಂದಂತೆ ಬದಲಿಸಲು ಸಾಧ್ಯವಿಲ್ಲ ಎನ್ನುತ್ತಾರೆ ಅವರು. ಒಬ್ಬ ವ್ಯಕ್ತಿಗೆ ಒಂದು ತಿಂಗಳಿಗೆ 5 ಕೆಜಿ ಆಹಾರಧಾನ್ಯ ಖಂಡಿತಾ ಸಾಲುವುದಿಲ್ಲ. ಈ ಯೋಜನೆಯ ಫಲಾನುಭವಿಗಳು ಹೆಚ್ಚಾಗಿ ಬಡ ಆದಿವಾಸಿಗಳು ಮತ್ತು ಬರಪಿಡಿತ ಪ್ರದೇಶಗಳಲ್ಲಿ ಮನರೇಗ ಕೆಲಸವೂ ಸಿಗದೆ ಪರದಾಡುವವರು, ಅಪೌಷ್ಟಿಕತೆಯಿಂದ ನರಳುತ್ತಿರುವವರು. ಅವರಿಗೆ ತಿಂಗಳಿಗೆ 30 ಕೆಜಿ ಆಹಾರಧಾನ್ಯ ಕಡಿತ ಮಾಡಿದರೆ ಅವರನ್ನು ಸಾವಿನ ದವಡೆಗೆ ತಳ್ಳಿದಂತೆಯೇ ಎನ್ನುತ್ತಾರೆ ತಿವಾರಿ. ಆದ್ದರಿಂದ ಸರಕಾರ ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು, ಕನಿಷ್ಠ, ಈ ಜನಗಳನ್ನು ಅನ್ನಪೂರ್ಣ ಯೋಜನೆಯಲ್ಲಾದರೂ ಒಳಗೊಳ್ಳಬೇಕು ಎನ್ನುತ್ತಾರೆ ಅವರು. ಈ ಯೋಜನೆಯಲ್ಲಿ 20 ಕೆಜಿ ಆಹಾರಧಾನ್ಯಗಳನ್ನು ಸಬ್ಸಿಡಿ ದರಗಳಲ್ಲಿ ಕೊಡಲಾಗುತ್ತದೆ.

ಆದರೆ ಸರಕರಕ್ಕೆ ಬಡವರ ಪಬಗ್ಗೆ ಏನೇನೂ ಕಾಳಜಿ ಇಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಕಿರಣ್ ಮೋಘೆ ಹೇಳುತ್ತಾರೆ.

ಮಹಾರಾಷ್ಟ್ರ ಬಿಜೆಪಿ ಸರಕಾರ ಈಗ ಈ ಎಎವೈ ಯೋಜನೆಯನ್ನೇ ನಿಲ್ಲಿಸುವ ಬಗ್ಗೆ ಯೋಚಿಸುತ್ತಿರುವಂತಿದೆ ಎಂದು' ಪುಣೆಯ ಸ್ವತಂತ್ರ ಪತ್ರಕರ್ತ ವರ್ಷಾ ತೋಗಾಲ್ಕರ್ ಹೇಳುತ್ತಾರೆ. ಅಂದರೆ ಎಲ್ಲ 25 ಲಕ್ಷ ಕಡುಬಡತನದ ಕುಟುಂಬಗಳನ್ನು ಸಾವಿನತ್ತ ತಳ್ಳುವ ನಿರ್ಧಾರ!

ಹಿಸ್ಸಾರ್‌ನಲ್ಲಿ ಆರು ವರ್ಷದ ಬಾಲಕಿಯ ಅಮಾನುಷ ಅತ್ಯಾಚಾರಕ್ಕೆ ಯಾರು ಹೊಣೆ? ಮಹಿಳಾ ಹಕ್ಕುಗಳ ಕಾರ್ಯಕರ್ತೆಯರ ತೀವ್ರ ಆಕ್ರೋಶ

ಹರ್ಯಾಣದ ಹಿಸ್ಸಾರ್ ಜಿಲ್ಲೆಯ ಉಕ್ಲಾನ ಹಳ್ಳಿಯಲ್ಲಿ ಡಿಸೆಂಬರ್ 8–9ರ ರಾತ್ರಿ ಆರು ವರ್ಷದ ಬಾಲಕಿಯನ್ನು ಅವಳ ಮನೆಯಿಂದಲೇ ಅಪಹರಿಸಿ ಅತ್ಯಂತ ಹೀನ ರೀತಿಯಲ್ಲಿ ಅತ್ಯಾಚಾರಕ್ಕೆ ಗುರಿಮಾಡಿ ಸಾಯಿಸಿದ ವರದಿ ಇಡೀ ರಾಜ್ಯವನ್ನು ತಲ್ಲಣಗೊಳಿಸಿದೆ ಮಾತ್ರವಲ್ಲ, ಅದರ ವಿರುದ್ಧ ಆಕ್ರೋಶ ದೇಶದ ರಾಜಧಾನಿಯನ್ನೂ ತಲುಪಿದೆ.

ಇದು ಸರಿಯಾಗಿ 5ವರ್ಷಗಳ ಹಿಂದೆ ಇಡೀ ದೇಶವನ್ನು ತಲ್ಲಣಗೊಳಿಸಿದ ದಿಲ್ಲಿಯ ನಿರ್ಭಯಾಳ ಭೀಕರ ಅತ್ಯಾಚಾರವನ್ನು ನೆನಪಿಸುವಂತದ್ದು. ಆದರೆ ಇಲ್ಲಿಯ ವಿಶೇಷವೆಂದರೆ ಈಕೆ ಕೇವಲ ಆರು ವರ್ಷದ ಬಾಲಕಿ. ಇದು ನಡೆದಿರುವುದು ಒಂದು ಹಳ್ಳಿಯಲ್ಲಿ.

ಇಂತಹ ಘಟನೆ ಕೇವಲ ಇಂಡಿಯಾದಲ್ಲಿ ನಡೆ–ಯುತ್ತದೆ, ಭಾರತದಲ್ಲಿ ನಡೆಯುತ್ತಿಲ್ಲೆಂದು ಈ ಹಿಂದೆ ಆರೆಸ್ಸೆಸ್ ಮುಖ್ಯಸ್ಥರು ಅಪ್ಪಣೆ ಕೊಡಿಸಿದ್ದರು. ಅಂದರೆ 'ಇದು ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ ಮಾಡುವ ನಗರಗಳಲ್ಲಿ ಮಾತ್ರ ನಡೆಯುವಂತದ್ದು, ಹೆಣ್ಣುಮಕ್ಕಳ ''ಸುಸಂಸ್ಕೃತ'ವಲ್ಲದ ವೇಷ ಭೂಷಣಗಳು, ನಡೆ–ನುಡಿಗಳಿಂದಾಗಿ ನಡೆಯುವಂತದ್ದು ಎಂಬ ಮುಖ್ಯವಾಗಿ ಸಂಘಪರಿವಾರದ ಮುಖಂಡರ ಟಿಪ್ಪಣಿಗಳು ಬಹಳ ಸಲ ಕೇಳಬಂದಿವೆ.

ಆದರೆ ಈ ಬಾಲಕಿಯ ಅಂತ್ಯ ಸಂಸ್ಕಾರದಲ್ಲಿ ಬಿಜೆಪಿಯ ರಾಜ್ಯ ಮುಖ್ಯಸ್ಥರು ಮತ್ತು ಹಿಸ್ಸಾರ್‌ನ ಬಿಜೆಪಿ



ಶಾಸಕರೂ ಹಾಜರಿದ್ದರು ಎಂದು ವರದಿಯಾಗಿದೆ. ಇನ್ನೂ ಯಾವುದೇ ಬಂಧನ ನಡೆದಿಲ್ಲ.

ಇಂತಹ ಬಲಾತ್ಕಾರದ ಸಂಸ್ಕೃತಿ, ಜತೆಗೆ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರಕ್ಕೆ ಸಿಕ್ಕಿಂತಿರುವ ಅಧಿಕೃತ ಸಮ್ಮತಿ ಇಂತಹ ಘಟನೆಗಳು ನಡೆಯುವದಕ್ಕೆ ಕಾರಣ ಎಂದು ಅಭಿಪ್ರಾಯ ಪಟ್ಟಿರುವ ಹಲವಾರು ಮಹಿಳಾ ಸಂಘಟನೆಗಳು ದಿಲ್ಲಿಯ ಹರ್ಯಾಣ ಭವನದ ಮುಂದೆ ಒಂದು ದೊಡ್ಡ ಪ್ರತಿಭಟನೆಯನ್ನು ಡಿಸೆಂಬರ್ 12 ರಂದು ನಡೆಸಿವೆ. ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸುವ ವರೆಗೆ ಪ್ರತಿಭಟನೆಗಳು ಮುಂದುವರೆಯುತ್ತವೆ ಎಂದು ಮಹಿಳಾ ಸಂಘಟನೆಗಳು ಎಚ್ಚರಿಸಿವೆ.

ಡಿಸಿಐಎಲ್ ಕಾರ್ಮಿಕನ ಆಘಾತಕಾರಿ ಆತ್ಮಹತ್ಯೆಗೆ ಮೋದಿ ಸರಕಾರ ಹೊಣೆ: ಸಿಐಟಿಯು

29 ವರ್ಷದ ವೆಂಕಟೇಶ ಡ್ರೆಡ್ಜಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್(ಡಿಸಿಐಎಲ್)ನ ಕಾರ್ಮಿಕ. ಇಬ್ಬರು ಸೋದರಿಯರು ಮತ್ತು ತಂದೆ–ತಾಯಿಯವರಿದ್ದ ಒಂದು ಕುಟುಂಬದ ಏಕೈಕ ಜೀವನಾಧಾರ. ಡಿಸೆಂಬರ್ 4ರಂದು ಡಿಸಿಐಎಲ್‍ನ್ನು ಸಂಪೂರ್ಣವಾಗಿ ಖಾಸಗೀಕರಿಸುವುದರ ವಿರುದ್ಧ ಪ್ರತಿಭಟಿಸುತ್ತ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಶಾಖಪಟ್ಟಣಂನಲ್ಲಿ ಮುಖ್ಯ ಕಚೇರಿಯಿರುವ ಡಿಸಿಐಎಲ್ ಭಾರತದ ಎಲ್ಲ ಸಣ್ಣ–ದೊಡ್ಡ ಬಂದರುಗಳಲ್ಲಿನ ಹೂಳು ತೆಗೆದು ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಹಡಗು ಸಾಗಾಣಿಕೆಯನ್ನು ಸುಗಮಗೊಳಿಸಲೆಂದು ಸ್ಥಾಪನೆಗೊಂಡಿರುವ ಸಂಸ್ಥೆ. ಇದು ತನಗೆ ವಹಿಸಿದ ಕೆಲಸವನ್ನು ಚೆನ್ನಾಗಿಯೇ ಮಾಡಿಕೊಂಡು ಬಂದಿದೆ.

ಆದರೂ ಇದನ್ನು ಸಂಪೂರ್ಣವಾಗಿ ಖಾಸಗೀಕರಿಸಲು ಮೋದಿ ಸರಕಾರ ನಿರ್ಧರಿಸಿದೆ. ಇದನ್ನು ವಿರೋಧಿಸಿ, ಇದನ್ನು ತಡೆಯಲು ಮಧ್ಯಪ್ರವೇಶಿಸಬೇಕು ಎಂದು ಸ್ಥಳೀಯ ಎಂಪಿ ಮತ್ತು ಶಾಸಕರನ್ನು ವಿನಂತಿಸಿಕೊಳ್ಳಲು ಹೋದ ಡಿಸಿಐಎಲ್ ಕಾರ್ಮಿಕರ ನಿಯೋಗದಲ್ಲಿ ವೆಂಕಟೇಶ್ ಕೂಡ ಇದ್ದರು. ಆದರೆ ತಮ್ಮ ಕೇಂದ್ರ ಸರಕಾರ ಆಗಲೇ ಈ ಬಗ್ಗೆ ನಿರ್ಧರಿಸಿರುವುದರಿಂದ ಅವರಿಬ್ಬರೂ ಮಧ್ಯಪ್ರವೇಶಿಸಲು ನಿರಾಕರಿಸಿದ್ದರಿಂದ ಆಘಾತಗೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವೆಂಕಟೇಶ್ ತಮ್ಮ ಆತ್ಮಹತ್ಯೆ ಟಿಪ್ಪಣಿಯಲ್ಲಿ ಬರೆದಿರುವುದಾಗಿ ವರದಿಯಾಗಿದೆ.

ಡಿಸಿಐಎಲ್‍ನ ಕಾರ್ಯನಿರ್ವಹಣೆ ಅತ್ಯುತ್ತಮವಾಗಿದೆ. ಸತತವಾಗಿ ಲಾಭ ಗಳಿಸಿಕೊಂಡು ಬರುತ್ತಿದ್ದು ಅಪಾರ ಆಸ್ತಿಗಳನ್ನು ದೇಶಕ್ಕೆ ಗಳಿಸಿಕೊಟ್ಟಿದೆ. ಅಲ್ಲದೆ ತನ್ನ ಕಾರ್ಯಾಚರಣೆಗಳನ್ನು ದೇಶದ ಗಡಿಯಾಚೆಗೂ ವಿಸ್ತರಿಸಿ ದೇಶಕ್ಕೆ ಸಾಕಷ್ಟು ವಿದೇಶಿ ವಿನಿಮಯವನ್ನೂ ಗಳಿಸಿ ಕೊಡುತ್ತಿದೆ. ಆದ್ದರಿಂದ ಇದನ್ನು ಖಾಸಗಿಯವರಿಗೆ ಹಸ್ತಾಂತರಿಸುವುದು ದೇಶದ ಆರ್ಥಿಕ ಶಕ್ತಿಯನ್ನು ಉಡುಗಿಸುವ ಕ್ರಿಮಿನಲ್ ಕೃತ್ಯ ಎಂದು ಸಿಐಟಿಯು ಹೇಳಿದೆ.

ವೆಂಕಟೇಶ್ ಸಾವಿಗೆ ಮೋದಿ ಸರಕಾರವೇ ಹೊಣೆ ಎಂದಿರುವ ಸಿಐಟಿಯು ಆತನ ಕುಟುಂಬಕ್ಕೆ ಸಾಕಷ್ಟು ಪರಿಹಾರ ಒದಗಿಸಬೇಕು, ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ಒದಗಿಸಬೇಕು, ಡಿಸಿಐಎಲ್‍ನ ಖಾಸಗೀಕರಣದ ನಿರ್ಧಾರವನ್ನು ಕೈಬಿಡಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಪ್ರತಿಗಾಮಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟ: 'ಭಾರತ ಉಳಿಸಿ" ಸಮಾವೇಶದ ಕರೆ

ಪುಟ 2 ರಿಂದ

ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಸೈಬರ್ ಜಗತ್ತಿನಲ್ಲೂ ದ್ವೇಷ ಪ್ರಚಾರದ ಕಾರ್ಯಾಚರಣೆ ನಡೆಸುತ್ತಿರುವ ಈ ಸಂಘ ಪರಿವಾರದ ಮಂದಿಗಳ ಆನ್‍ಲೈನ್ ಪ್ರಹಾರಗಳಿಗೆ ಗುರಿಯಾದ ಗುರ್ಮೆಹರ್ ಮಾತಾಡುತ್ತ "ನಾನು ಮಹಿಳೆಯರ ಸಂಗದಲ್ಲೆ ಬೆಳೆದವಳು. ಮನೆಯಲ್ಲಿ ಗಂಡು ಸದಸ್ಯರಿಲ್ಲ. ಒಂದು ಮಹಿಳಾ ಸಂಘಟನೆಯ ಗೌರವದಿಂದ ನಾನು ವಿನೀತಳಾಗಿದ್ದೇನೆ" ಎನ್ನುತ್ತ "ಮೊದಲ ದಿನದಿಂದಲೇ, ಮಹಿಳೆ ಅಥವ ಹುಡುಗಿಯಾಗಿರುವುದಕ್ಕೆ, ನಾವು ಹಿಂದೇಟು ಹಾಕುತ್ತಿರಬೇಕಾಗುತ್ತದೆ, ಒಬ್ಬ ಪುರುಷ ಅಥವ ಹುಡುಗನಿಗೆ ಸಿಗುವುದನ್ನು ಪಡೆಯಲು ದುಪ್ಪಟ್ಟು ಹೋರಾಟ ಮಾಡಬೇಕಾಗುತ್ತದೆ" ಎಂದಳು. ಈ ಹೋರಾಟವೇ ತನಗೆ ಆನ್‍ಲೈನ್ ಟ್ರಾಲ್‍ಗಳನ್ನು ಎದುರಿಸಲು ಸಿದ್ಧಗೊಳಿಸಿತು ಎಂದು ಆಕೆ ಹೇಳಿದಳು.



ಜೆಎನ್‍ಯುನಲ್ಲಿ ಲೈಂಗಿಕ ಕಿರುಕುಳದ ಸೆಲ್‍ಅನ್ನು ದುರ್ಬಲಗೊಳಿಸಿರುವ ಬಗ್ಗೆ ಅಲ್ಲಿನ ವಿದ್ಯಾರ್ಥಿನಿ ಶರ್ಬಾಣಿ ಮಾತಾಡಿದಳು.

ಸುಪ್ರಿಂ ಕೋರ್ಟ್ ವಕೀಲೆ ಕೀರ್ತಿ ಸಿಂಗ್ ಮಹಿಳೆಯರ ಹಕ್ಕುಗಳನ್ನು ಸ್ಥಾಪಿಸುವಲ್ಲಿ ನಿರ್ಣಾಯಕವಾದ ಕಾನೂನುಗಳ ಬಗ್ಗೆ, ಅವನ್ನು ದುರ್ಬಲಗೊಳಿಸುತ್ತಿರುವುದರ ಬಗ್ಗೆ ಮಾತಾಡಿದರು. ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ದುರ್ಗಾ ಸ್ವಾಮಿ ಮತ್ತು ನೀನಾ ಶರ್ಮ ಮಾತಾಡಿದರು. ಸಿಪಿಐ(ಎಂ) ಪೊಲಿಟ್‍ಬ್ಯುರೊ ಸದಸ್ಯರೂ ಆದ ಸುಭಾಷಿಣಿ ಅಲಿ ಮಾತಾಡುತ್ತ, ಹಿಂದುತ್ವದ ಶಕ್ತಿಗಳು ಯಾರ್ಯಾರನ್ನು ಶತ್ರುಗಳು ಎಂದು ಗುರಿಯಿಡುತ್ತಾರೋ ಅವರ ನಡುವೆ ಹೋಗಿ ವಾಸ್ತವವಾಗಿ ಈ ಸರಕಾರವೇ ಎಲ್ಲರ ಶತ್ರು ಎಂದು ಹೇಳಬೇಕಾಗಿದೆ ಎಂದು ಹೇಳಿದರು.

ಸಮಾವೇಶ ಭವಿಷ್ಯದ ಹೋರಾಟಗಳ ಭಾಗವಾಗಿ ಈ ಕಾರ್ಯಕ್ರಮವನ್ನು ರೂಪಿಸಿದೆ: **1. ಇಂಡಿಯನ್ ಪೀನಲ್ ಕೋಡ್(ಐಪಿಸಿ)ನ ಸೆಕ್ಷನ್ 498ಎ ನ್ನು ದುರ್ಬಲಗೊಳಿಸುವುದರ ವಿರುದ್ಧ ಸಹಿ ಸಂಗ್ರಹ 2. ಜನವರಿ 3, 2018ರಂದು ಪ್ರತಿಗಾಮಿ ಸಿದ್ಧಾಂತಗಳ ವಿರುದ್ಧ ಪ್ರತಿಭಟನೆಯ ದಿನವಾಗಿ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನಾಚರಣೆ. 3. ಜನವರಿ 30, 2018ರಂದು ಕೋಮು ಸೌಹಾರ್ದದ ದಿನಾಚರಣೆ. 4. ಕೆಲಸದ ಮತ್ತು ಆಹಾರದ ಹಕ್ಕುಗಳ ರಕ್ಷಣೆಗೆ ಹೋರಾಟಗಳನ್ನು ಕಟ್ಟಿ ಬೆಳೆಸುವುದು.**

ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷದ 14ನೇ ಮಹಾಧಿವೇಶನ

ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಗೆ ಕಮ್ಯುನಿಸ್ಟ್ ಅಭ್ಯರ್ಥಿ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ನವೆಂಬರ್ 17–19, 2017 ರಲ್ಲಿ ಬ್ರೆಜಿಲ್ ರಾಜಧಾನಿ ಬ್ರೆಸಿಲಿಯಾದಲ್ಲಿ ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷದ 14ನೇ ಮಹಾಧಿವೇಶನ ನಡೆಯಿತು.

ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷ (ಪಿಸಿಡೊಬ್–PCdoB) ವು 60,000 ಸದಸ್ಯರನ್ನು ಹೊಂದಿದ್ದು, 547 ಪ್ರತಿನಿಧಿಗಳು ಈ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ದಕ್ಷಿಣ ಆಫ್ರಿಕಾ, ಅಂಗೋಲಾ, ಅರ್ಜೆಂಟೀನಾ, ಬೆಲ್ಜಿಯಂ, ಚೀನಾ, ಕೊಲಂಬಿಯಾ, ಕ್ಯೂಬಾ, ಉತ್ತರ ಕೊರಿಯಾ, ಎಲ್‌ಸಾಲ್ವಡಾರ್, ಸ್ಪೇನ್ ಗ್ರೀಸ್, ಫ್ರಾನ್ಸ್ ನಿಕರಾಗುವಾ, ಪೆರು, ಪೋರ್ಚುಗಲ್, ಝೆಕ್, ಟರ್ಕಿ, ಉಕ್ರೇನ್, ಉರುಗ್ವೆ, ವಿಯೆಟ್ನಾಂ ಮುಂತಾದ 27 ದೇಶಗಳ 32 ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ಸಿಪಿಐ(ಎಂ) ನಿಂದ ಕಾಂ. ಜಿ. ರಾಮಕೃಷ್ಣನ್ ಹಾಗೂ ಸಿಪಿಐ ನಿಂದ ಬಿನಾಯ್ ವಿಶ್ವಂ ಭಾಗವಹಿಸಿದ್ದರು.

ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷವು ದೀರ್ಘವಾದ ಕ್ರಾಂತಿಕಾರಿ ಸಂಪ್ರದಾಯವನ್ನು ಹೊಂದಿದೆ. 1922 ರಲ್ಲಿಯೇ ಈ ಪಕ್ಷವು ಅಸ್ತಿತ್ವಕ್ಕೆ ಬಂದಿತು. 95 ವರ್ಷಗಳ ಇತಿಹಾಸದಲ್ಲಿ, ಬ್ರೆಜಿಲಿಯನ್ ಕಮ್ಯೂನಿಸ್ಟ್ ಪಕ್ಷವು ಹಲವು ಬಿಕ್ಕಟ್ಟುಗಳನ್ನೂ ಮತ್ತು ದಮನವನ್ನು ಎದುರಿಸಿದೆ. ಮತ್ತು ಎದುರಿಸುವ ಸಂದರ್ಭದಲ್ಲಿಯೇ ತನ್ನ ಕಾರ್ಯಯೋಜನೆಯನ್ನು ಮುಂದುವರಿಸಿದೆ. 1962 ರಲ್ಲಿ ಪಕ್ಷವು ವಿಭಜನೆಗೊಂಡಿತು. ಪರಿಷ್ಕರಣವಾದಿ ಮುಂದುವರಿಸುವ ವಿಭಾಗವು ಇದೀಗ ಅತ್ಯಂತ ದುರ್ಬಲ ಮತ್ತು ನಿಷ್ಕ್ರಿಯವಾಗಿದೆ.

ಪಿಸಿಡೊಬ್ ತನ್ನ ಕೆಂಪು ಧ್ವಜ, ಮಾರ್ಕ್ಸಿಸಂ–ಲೆನಿನಿಸಂ ಸಿದ್ಧಾಂತ ಮತ್ತು ಕಾರ್ಮಿಕರ ಅಂತರರಾಷ್ಟ್ರೀಯತೆಗಳನ್ನು ತ್ಯಜಿಸದೆ, ತನ್ನ ಮಹಾಧಿವೇಶನವನ್ನು ಯಶಸ್ವಿಯಾಗಿ ನಡೆಸಿತು.

2001 ರಲ್ಲಿ ಪಕ್ಷದ ಸಾಮಾನ್ಯ ಸದಸ್ಯತ್ವ 1.51 ಲಕ್ಷ ಇದ್ದಿದ್ದು, 2017 ರಲ್ಲಿ 4 ಲಕ್ಷಕ್ಕೆ ಏರಿದೆ. ಬ್ರೆಜಿಲಿಯನ್ ಪಕ್ಷವು ಎರಡು ರೀತಿಯ (ಸಾಮಾನ್ಯ ಮತ್ತು ಸಕ್ರಿಯ) ಸದಸ್ಯತ್ವದ ಪಟ್ಟಿಗಳನ್ನು ನಿರ್ವಹಿಸುತ್ತದೆ. 2001 ರಲ್ಲಿ ಪಕ್ಷದ ಸಕ್ರಿಯ ಸದಸ್ಯತ್ವ 34 ಸಾವಿರ ಇತ್ತು. ಇದು ಈಗ 60 ಸಾವಿರಕ್ಕೆ ತಲುಪಿದೆ. ಸಾಮಾನ್ಯ ಸದಸ್ಯತ್ವವನ್ನು ಚುನಾವಣಾ ಕಮಿಶನಿಗೆ ಕೊಡಲಾಗುತ್ತದೆ.

ಟ್ರೇಡ್ ಯೂನಿಯನ್‌ನಲ್ಲಿ ಕಮ್ಯೂನಿಸ್ಟ್ ಪಕ್ಷದ ಯೂನಿಯನ್‌ಗಳು ದೇಶದಲ್ಲಿ ಎರಡನೆ ಸ್ಥಾನ ಹೊಂದಿವೆ. ವಿದ್ಯಾರ್ಥಿ ರಂಗದಲ್ಲಿ ಇದರ ಸದಸ್ಯತ್ವ ಮೊದಲ ಸ್ಥಾನದಲ್ಲಿದೆ. ಪಕ್ಷದ ದಿನ ನಿತ್ಯದ ಕೆಲಸ–ಕಾರ್ಯ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ತುಂಬ ಉತ್ತಮವಾಗಿದೆ. ಪಕ್ಷದ ಈ ಮಹಾಧಿವೇಶನದಲ್ಲಿ ಭಾಗವಹಿಸಿದ್ದ ಹಲವು ಮಹಿಳಾ ಪ್ರತಿನಿಧಿಗಳ ಮಕ್ಕಳನ್ನು ನೋಡಿಕೊಳ್ಳಲು 'ಶಿಶು' ವಿಹಾರ ವನ್ನು ಸಮ್ಮೇಳನದ ಆವರಣದಲ್ಲಿಯೇ ತೆರೆಯಲಾಗಿತ್ತು. ಪಕ್ಷದ ಸಂವಿಧಾನದ ನಿಯಮದಂತೆ, ಸಮಿತಿಗಳಲ್ಲಿ ಶೇ. 30 ರಷ್ಟು ಮಹಿಳೆಯರು ಕಡ್ಡಾಯವಾಗಿ ಇರುತ್ತಾರೆ. ಪಕ್ಷದ ನಾಯಕಿ ಲೂಸಿಯಾನಾ ಒಬ್ಬ ಮಹಿಳೆ, ಅವರು 14ನೇ ಕಾಂಗ್ರೆಸ್‌ನಲ್ಲಿ ಮರು ಚುನಾಯಿತರಾಗಿದ್ದಾರೆ.

ಬ್ರೆಜಿಲ್ ನ ಒಟ್ಟು ಜನಸಂಖ್ಯೆಯಲ್ಲಿ ಶೇ. 85 ರಷ್ಟು ಜನಸಂಖ್ಯೆ ನಗರ ಪ್ರದೇಶದಲ್ಲಿ ಕೇಂದ್ರಿಕೃತಗೊಂಡಿದೆ. ಹೆಚ್ಚು ನಗರೀಕರಣಗೊಂಡ ದೇಶವಾಗಿದೆ. 2001 ರ ಮುನಿಸಿಪಲ್ ಕೌನ್ಸಿಲ್ ನಲ್ಲಿ ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷವು 757 ಸ್ಥಾನಗಳಲ್ಲಿ ಸ್ಪರ್ಧಿಸಿ, ಅದರಲ್ಲಿ 150 ಸೀಟುಗಳನ್ನು ಗೆದ್ದಿತ್ತು. 2016 ರಲ್ಲಿ ಅದು 2301 ಸ್ಥಾನಗಳಿಗೆ ಸ್ಪರ್ಧಿಸಿ 1001 ಸೀಟುಗಳನ್ನು ಗೆದ್ದಿತ್ತು. ಬ್ರೆಜಿಲ್ ನ ಸಂಸತ್ತಿನ ಚುನಾವಣೆಗಳಲ್ಲಿ 2010 ರಲ್ಲಿ ಒಟ್ಟು ಮತಗಳ ಪೈಕಿ ಶೇ. 2.89 ರಷ್ಟು ಬಂದಿತ್ತು. ಅದರಲ್ಲಿ ಪಕ್ಷವು 15 ಸ್ಥಾನಗಳನ್ನು ಪಡೆದುಕೊಂಡಿತ್ತು.

2014 ರಲ್ಲಿ ಶೇ. 2.18 ಮತಗಳನ್ನು ಪಡೆದು 10 ಸ್ಥಾನಗಳನ್ನು ಗೆದ್ದಿತ್ತು. ಬ್ರೆಜಿಲ್ 27 ಪ್ರಾಂತ್ಯಗಳನ್ನು ಹೊಂದಿದೆ. ಮಾರಾದ್‌ಹಾವೋ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಮುಖಂಡರಾದ ಫ್ಲಾವಿಯಾ ಡಿನೋ ಗವರ್ನರ್ ಹುದ್ದೆಯನ್ನು ಗೆದ್ದಿದ್ದಾರೆ. ಮತ್ತು ಆ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಪಕ್ಷವೇ ಅಧಿಕಾರದಲ್ಲಿದೆ. (ಬ್ರೆಜಿಲ್ ಪ್ರಾಂತ್ಯದ ಗವರ್ನರ್ ಎಂದರೆ ಭಾರತದ ಒಂದು ರಾಜ್ಯದ ಮುಖ್ಯಮಂತ್ರಿಗೆ ಸಮನಾಗಿದೆ ಎಂದು ಹೋಲಿಸಬಹುದು).


ಕಮ್ಯುನಿಸ್ಟ್ ಅಭ್ಯರ್ಥಿ ಮ್ಯಾನುಯೆಲಾ ಮಾಜಿ ಅಧ್ಯಕ್ಷ ಲೂಲಾರೊಂದಿಗೆ

1964 ರಲ್ಲಿ ಬ್ರೆಜಿಲ್‌ನಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ಸಂಭವಿಸಿತು. ಮಿಲಿಟರಿ ಜನರಲ್ ಅಲ್ಲಿ ಸರ್ವಾಧಿಕಾರ ಸ್ಥಾಪಿಸಿದ್ದ. ಆ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಹಕ್ಕುಗಳನ್ನು ನಾಶಗೊಳಿಸಲಾಗಿತ್ತು. ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಲಾಗಿತ್ತು. ಅರಗುವಾಯಾ ಪ್ರದೇಶದಲ್ಲಿ ಕಮ್ಯೂನಿಸ್ಟ್ ಪಕ್ಷವು ಗೆರಿಲ್ಲಾ ಹೋರಾಟವನ್ನು ನಡೆಸಿತ್ತು. ಈ ಹೋರಾಟವು ದೇಶದಾದ್ಯಂತ ಸರ್ವಾಧಿಕಾರದ ವಿರುದ್ಧ ಬಲವಾದ ಚಲನೆಗೆ ಕ್ರಿಯಶೀಲತೆ ನೀಡಿತು. ಇದರಿಂದಾಗಿ 1985 ರಲ್ಲಿ ಸರ್ವಾಧಿಕಾರ ಕೊನೆಗೊಂಡಿತು ಮತ್ತು ಒಂದು ಹೊಸ ಸಂವಿಧಾನವು ಅಂಗೀಕರಿಸಲ್ಪಟ್ಟಿತ್ತು.

2003 ರ ಸಂಸತ್ತಿನ ಚುನಾವಣೆಗಳಲ್ಲಿ ವರ್ಕರ್ಸ್ ಪಾರ್ಟಿಯ ನಾಯಕ ಲೂಲಾ 'ಡಿ' ಸಿಲ್ವಾ ರವರು, ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷದ ಬೆಂಬಲದೊಂದಿಗೆ ಅಧ್ಯಕ್ಷರಾದರು.

1959 ರಿಂದ, ಲ್ಯಾಟಿನ್ ಅಮೆರಿಕಾದ ಪುಟ್ಟ ದೇಶ ಸಮಾಜವಾದಿ 'ಕ್ಯೂಬಾ' ಏಕೈಕ ಪ್ರಕಾಶಮಾನ ನಕ್ಷತ್ರವಾಗಿತ್ತು. ಆ ನಂತರ ಕಳೆದ 20 ವರ್ಷಗಳಲ್ಲಿ, ಲ್ಯಾಟಿನ್ ಅಮೆರಿಕಾದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧದ ಬಂಡಾಯ ಹಲವಾರು ದೇಶಗಳಲ್ಲಿ ಎಡ–ನೇತೃತ್ವದ ಸರ್ಕಾರಗಳ ರಚನೆಗೆ ಕಾರಣವಾಯಿತು. ಹ್ಯೂಗೋ ಚಾವೆಜ್ ನೇತೃತ್ವದಲ್ಲಿ ವೆನಿಜುವೆಲಾದ ಸರ್ಕಾರವನ್ನು ರಚಿಸಿದ ನಂತರ, ಬ್ರೆಜಿಲ್, ಅರ್ಜೆಂಟೀನಾ, ಉರುಗ್ವೆ, ಚಿಲಿ, ಬೊಲಿವಿಯಾ, ನಿಕರಾಗುವಾ, ಪರಾಗ್ವೆ, ಹೊಂಡುರಾಸ್, ಎಲ್ ಸಾಲ್ವಡರ್ ಮತ್ತು ಡೊಮಿನಿಕನ್ ರಿಪಬ್ಲಿಕ್‌ಗಳಲ್ಲಿ ಸಾಮ್ರಾಜ್ಯಶಾಹಿ ಶಕ್ತಿಯನ್ನು ವಿರೋಧಿಸುವ ಎಡ–ನೇತೃತ್ವದ ಸರ್ಕಾರಗಳು ಹೊಮ್ಮಿದವು.

ಅಮೆರಿಕನ್ ಸಾಮ್ರಾಜ್ಯಶಾಹಿಯ ಹಸ್ತಕ್ಷೇಪದಿಂದಾಗಿ, ಈಗ ಸಾಮ್ರಾಜ್ಯಶಾಹಿ ಬೆಂಬಲಿಗರು ಮತ್ತು ವೆನಿಜುವೆಲಾದ ಎಡಪಕ್ಷದ ಸರ್ಕಾರದ ನಡುವೆ ಬೀದಿ ಕದನಗಳು ನಡೆಯುತ್ತಿವೆ. ವೆನಿಜುವೆಲಾ ಸರ್ಕಾರದ ಬೊಲಿವಾರಿಯನ್ ಕ್ರಾಂತಿಯ ಆಶಯಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಜನಪರ ಕಲ್ಯಾಣ ಮಾರ್ಗಗಳನ್ನು ಅನುಷ್ಠಾನಗೊಳಿಸುತ್ತಿರುವುದನ್ನು ಸಹಿಸದ ಪ್ರತಿಗಾಮಿ ಸಾಮ್ರಾಜ್ಯಶಾಹಿಯ ಬೆಂಬಲಿಗರು ಪ್ರತಿಭಟನೆಯನ್ನು ಅಮೆರಿಕನ್ ಪಡೆಗಳು ಬೆಂಬಲಿಸುತ್ತಿವೆ. ಹಾಗೆಯೇ, ಬ್ರೆಜಿಲ್‌ನಲ್ಲಿಯೂ ಯು.ಎಸ್. ಬೆಂಬಲಿತ ಉಪಾಧ್ಯಕ್ಷರು ಜನರಿಂದ ಚುನಾಯಿತರಾದ ವರ್ಕರ್ಸ್ ಪಾರ್ಟಿಯ ಸರ್ಕಾರವನ್ನು ಉರುಳಿಸಿ ಅಧಿಕಾರ ವಶ ಪಡಿಸಿಕೊಂಡಿದೆ.

ಬ್ರೆಜಿಲ್‌ನ ಕಮ್ಯೂನಿಸ್ಟ್ ಪಕ್ಷ 2003 ರಿಂದ 2014 ರ ವರೆವಿಗೂ ವರ್ಕರ್ಸ್ ಪಾರ್ಟಿ ನೇತೃತ್ವದ ಸರ್ಕಾರದಲ್ಲಿ ಭಾಗಿಯಾಗಿತ್ತು. ಮೊದಲು ಲೂಲಾ 'ಡಿ'ಸಿಲ್ವಾ ಆನಂತರ ದಿಲ್ಮಾ ರೌಸೆಫ್ ರ ಅಧ್ಯಕ್ಷರಾಗಿದ್ದಾಗ ಭಾಗಿಯಾಗಿತು.

2002 ರಿಂದ 2014 ರವರೆವಿಗೂ ವರ್ಕರ್ಸ್ ಪಾರ್ಟಿಯ ನೇತೃತ್ವದಲ್ಲಿ ಸರ್ಕಾರ ಜಾರಿಗೆ ತಂದ ಜನಪರ ಕಲ್ಯಾಣ ಕಾರ್ಯಕ್ರಮಗಳ ಕಾರಣ 36 ದಶಲಕ್ಷ ಜನರನ್ನು ಬಡತನದ ರೇಖೆಯಿಂದ, ಮೇಲಕ್ಕೆ ಎತ್ತಲಾಯಿತು. ಶಿಕ್ಷಣ ಮತ್ತು ಆರೋಗ್ಯಕ್ಕೆ ಆ ಸರ್ಕಾರ ಹೆಚ್ಚು ಮಹತ್ವ ನೀಡಿತ್ತು. ರೈತರಿಗೆ ಸಹಾಯಧನದ ಮೂಲಕ ಬೆಂಬಲ ಬೆಲೆ ಹೆಚ್ಚಿಸಲಾಗಿತ್ತು. ಇದರಿಂದ ಅವರ ಆದಾಯಗಳು ಈ ಅವಧಿಯಲ್ಲಿ ಹೆಚ್ಚಾಯಿತು. ಸುಮಾರು 70ಲಕ್ಷ ಕುಟುಂಬಗಳಿಗೆ ಮನೆಗಳನ್ನು ಒದಗಿಸಲಾಯಿತು. 2003 ರ ನಂತರ ಸುಮಾರು 18 ವಿಶ್ವವಿದ್ಯಾಲಯಗಳನ್ನು ಹೊಸದಾಗಿ ತೆರೆಯಲಾಯಿತು. ಉನ್ನತ ಶಿಕ್ಷಣದಲ್ಲಿನ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣ ಗಣನೀಯವಾಗಿ ಏರಿತು. ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಗೊಳಿಸಲಾಗಿದ್ದು, ಅದು ಶೇ. 71.5 ರಷ್ಟು ಹೆಚ್ಚಿತು. ಸ್ವಾವಲಂಬಿ ಆರ್ಥಿಕ ನೀತಿಗಳನ್ನು ಜಾರಿಗೆ ತಂದು, ಬಡವರಿಗೆ ಹೆಚ್ಚು ಅನುಕೂಲವನ್ನು ಕಲ್ಪಿಸಿಕೊಟ್ಟಿತು. 2002 ರಿಂದ 2014 ರವರೆಗಿನ ಸರ್ಕಾರದಲ್ಲಿ ಕಮ್ಯೂನಿಸ್ಟ್ ಪಕ್ಷ ಭಾಗವಹಿಸಿದ್ದರ ಪರಿಣಾಮ ಇದಾಗಿದೆ.

ಪ್ರಸಕ್ತ ಯು.ಎಸ್. ಬೆಂಬಲಿತ ಸರ್ಕಾರ, ಸರ್ಕಾರಿ ಸ್ವಾಮ್ಯದ ಪೆಟ್ರೋಕೆಮಿಕಲ್ ಕಂಪನಿಯನ್ನು ಖಾಸಗೀಕರಣಗೊಳಿಸಲು ಪ್ರಯತ್ನಿಸುತ್ತಿದೆ ಮತ್ತು ದೇಶದ ಖನಿಜ ಸಂಪನ್ಮೂಲವನ್ನು ಬಹುರಾಷ್ಟ್ರೀಯ ಕಂಪನಿಗಳ ವಿಲೇವಾರಿಗೆ ಒಪ್ಪಿಸಲು ಪ್ರಯತ್ನ ನಡೆಯುತ್ತಿದೆ. ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ಕಾರ್ಯ ಚಟುವಟಿಕೆಗಳನ್ನು ಗಾಳಿಗೆ ತೂರಿ, ತಿದ್ದುಪಡಿ ತರಲಾಗುತ್ತಿದೆ. ಪಿಂಚಣಿ ಯೋಜನೆಗಳನ್ನು ಖಾಸಗೀಕರಣಗೊಳಿಸುವ ಪ್ರಯತ್ನದಲ್ಲಿ ಮುಳುಗಿದೆ. ಕಲ್ಯಾಣ ಕಾರ್ಯಕ್ರಮಗಳಿಗೆ ಹಣಕಾಸು ಹಂಚಿಕೆಯನ್ನು ಗಣನೀಯವಾಗಿ ಕಡಿತಗೊಳಿಸಲಾಗುತ್ತಿದೆ.

ಮುಂದಿನ 20 ವರ್ಷಗಳಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಹಣಕಾಸಿನ ಹಂಚಿಕೆಗಳಲ್ಲಿ ಯಾವುದೇ ಹೆಚ್ಚಳ ಮಾಡದಂತೆ ಹೊಸ ಕಾನೂನು ರೂಪಿಸಲಾಗಿದೆ. ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಈ ಎಲ್ಲ ಜನವಿರೋಧಿ, ಕಾರ್ಮಿಕ ವಿರೋಧಿ ಸರ್ಕಾರದ ವಿರುದ್ಧ ವರ್ತಕರು, ರೈತರು ಮತ್ತು ಇತರೆ ಕಾರ್ಮಿಕ ಸಂಘಟನೆಗಳು ಬೀದಿಗಳಲ್ಲಿ ಹೋರಾಡುತ್ತಿವೆ.

ಬ್ರೆಜಿಲ್‌ನ ಅಧ್ಯಕ್ಷೀಯ ಚುನಾವಣೆ 2018 ರಲ್ಲಿ ನಡೆಯಲಿದೆ. ಲೂಲಾ ಮೇಲಿನ ಭ್ರಷ್ಟಾಚಾರದ ಆರೋಪದ ಹಿನ್ನೆಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಲೂಲಾ ಸ್ಪರ್ಧೆಯನ್ನು ನ್ಯಾಯಾಲಯ ತಡೆಹಿಡಿದಿದೆ. ಸುಳ್ಳು ಆರೋಪ ಹಾಕಿ ಬೇಕೆಂತಲೆ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದನ್ನು ತಪ್ಪಿಸಲು ಯು. ಎಸ್. ಬೆಂಬಲಿತ ಸರ್ಕಾರ ಪಿತೂರಿ ಹೂಡಿದೆ.

ಕಮ್ಯೂನಿಸ್ಟ್ ಪಕ್ಷವು 35 ವರ್ಷದ ಮಹಿಳಾ ಒಡನಾಡಿ ಮ್ಯಾನುಯೆಲಾರನ್ನು ಸ್ಪರ್ಧೆಗಿಳಿಸುವ ಸಾಧ್ಯತೆ ಇದೆ. ಲೂಲಾ ಸೇರಿದಂತೆ ಇತರ ಎಡಪಕ್ಷಗಳ ನಾಯಕರು ಮಹಾಧಿವೇಶನಕ್ಕೆ ಶುಭ ಕೋರಿದರು.

ಪ್ರಜಾಪ್ರಭುತ್ವದ ಪುನರ್ ಸ್ಥಾಪನೆ:

ಈ ಹಿನ್ನೆಲೆಯಲ್ಲಿ, ಪ್ರಜಾಪ್ರಭುತ್ವದ ಪುನರ್ ಸ್ಥಾಪಿಸಲು ಸ್ವತಂತ್ರ ಹೋರಾಟಗಳನ್ನು ನಡೆಸುವ, ಎಲ್ಲರಿಗೂ ಒಂದೇ ಕಾನೂನಿನ ಅನ್ವಯದ ಸ್ಥಾಪನೆ; ಸಂವಿಧಾನದ ರಕ್ಷಣೆ; ರಾಷ್ಟ್ರದ ಸಾರ್ವಭೌಮತ್ವದ ರಕ್ಷಣೆ; ಕಾರ್ಮಿಕರು ಮತ್ತು ಇತರ ದುಡಿಯುವ ಜನರು ಹೋರಾಟಗಳಿಂದ ಗಳಿಸಿರುವ ಹಕ್ಕುಗಳು–ರಿಯಾಯಿತಿಗಳನ್ನು ರಕ್ಷಣೆ ಮಾಡುವುದು; ಜಂಟಿ ಹೋರಾಟಗಳಿಗಾಗಿ ಪ್ರಜಾಪ್ರಭುತ್ವ ಶಕ್ತಿಗಳು, ಸಾಮಾಜಿಕ ಚಳುವಳಿಗಳು ಮತ್ತು ಎಡ ಪಕ್ಷಗಳ ಜೊತೆ ವಿಶಾಲವಾದ ವೇದಿಕೆ ವಿಕಸನಗೊಳಿಸಲು, ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷದ 14ನೇ ಮಹಾಧಿವೇಶನ ನಿರ್ಣಯಗಳನ್ನು ಕೈಗೊಂಡಿದೆ.

ಮೇಲೆ ಪ್ರಸ್ತಾಪಿಸಿರುವ ರಾಜಕೀಯ ಘೋಷಣೆಯಲ್ಲದೆ, ಮಹಾಧಿವೇಶನ ಈ ಕೆಳಗಿನ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ಕಾರ್ಯಕ್ರಮಗಳನ್ನು ರೂಪಿಸಿದೆ:

- ಕೆಲಸದ ಸ್ಥಳಗಳಲ್ಲಿ ವರ್ಗ ಪ್ರಜ್ಞೆ ಇರುವ ಕಾರ್ಮಿಕ ಕಾರ್ಯಾಚರಣೆಗಳು ಮುಂದುವರಿಯಬೇಕು. ಇವಲ್ಲದೆ, ನಗರ ಸಾರಿಗೆ, ಶಿಕ್ಷಣ, ಆರೋಗ್ಯ, ಸಂಸ್ಕೃತಿ ಮುಂತಾದ ಹೊಸ ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಮಾನ ಮನಸ್ಕರೊಂದಿಗೆ ಒಟ್ಟಾಗಿ ಹೋರಾಟ ಮಾಡಬೇಕು. ಈ ಕಾರ್ಯದಲ್ಲಿ ಕಾರ್ಮಿಕ ಸಂಘಟನೆಗಳು ಮಾತ್ರ ಮಾಡಿದರೆ ಸಾಲದು, ಜೊತೆಗೆ ಪಕ್ಷದ ಘಟಕಗಳೂ ಕೂಡಾ ಇದರಲ್ಲಿ ತೊಡಗಿಸಿಕೊಳ್ಳಬೇಕು.
- ರಾಜಕೀಯ ಹೋರಾಟಗಳನ್ನು ತೀವ್ರಗೊಳಿಸಬೇಕು ಮತ್ತು ಸಮರಶೀಲವಾಗಿಸಬೇಕು. ಅಭಿವೃದ್ಧಿ ಹಾಗೂ ಪ್ರಚಾರದ ರಂಗಗಳನ್ನು ಅರ್ಥೈಸಿಕೊಂಡು ಸೈದ್ಧಾಂತಿಕ ಹೋರಾಟಗಳನ್ನು ಬಲಪಡಿಸಲು ಹೊಸ ಪರಿಹಾರಗಳನ್ನು ಹುಡುಕಬೇಕು.
- ರಾಜಕೀಯ ಮತ್ತು ಸೈದ್ಧಾಂತಿಕ ಕಾರ್ಯ ವಿಧಾನಗಳನ್ನು ಬಲಪಡಿಸಿ, ಜಾರಿಗೆ ತರುವ ನಿಟ್ಟಿನಲ್ಲಿ – ಶಾಖೆಯ ಮಟ್ಟದಿಂದ ಪಾಲಿಟ್‌ಬ್ಯೂರೊ ವರೆವಿಗೂ ಪಕ್ಷದ ಸಂಘಟನೆಗಳು ಪರಿಷ್ಕರಣಗೊಳ್ಳಬೇಕು. ●



JANASHAKTHI KANNADA VARA PATRIKE December 18-24, 2017 Price: Rs. 10/- Date of Publication: 15 December 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಯಶಸ್ವಿ 11ನೇ ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮ್ಮೇಳನ

ಆರ್ಥಿಕ ಸಾರ್ವಭೌಮತ್ವ ಒತ್ತೆ ಇಟ್ಟ ಮೋದಿ : ಜಿ.ವಿ.ಎಸ್.

ದೇಶ ಮಾರಾಟ ಮಾಡೋದಿಲ್ಲ ಎನ್ನುವ ಪ್ರಧಾನಿ ಮೋದಿ ದೇಶದ ಆರ್ಥಿಕ ಸಾರ್ವಭೌಮತೆ ಒತ್ತೆಯಿಡುವ ಮೂಲಕ ದೇಶವನ್ನು ಅಪಾಯದಂಚಿಗೆ ತಳ್ಳಿದ್ದಾರೆ. ಮುಂದಿನ ದಿನಗಳಲ್ಲಿ ರಾಜಕೀಯ ಸ್ವಾತಂತ್ರ್ಯ ಕಳೆದುಕೊಳ್ಳುವ ಭೀತಿ ಕಾಡಲಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಕಳವಳ ವ್ಯಕ್ತಪಡಿಸಿದರು.

"ಕೋಮು ಸೌಹಾರ್ದತೆಗಾಗಿ ಮತ್ತು ಬಳ್ಳಾರಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ" ಹೊಸಪೇಟೆ ತಾಲೂಕಿನ ಕಂಪ್ಲಿಯ ಪುರಸಭೆಯ ಮುಂಭಾಗದಲ್ಲಿ ಸಿಪಿಐ(ಎಂ) ಡಿಸೆಂಬರ್ 9ರಂದು ಆಯೋಜಿಸಿದ್ದ 11ನೇ ಬಳ್ಳಾರಿ ಜಿಲ್ಲಾ ಸಮ್ಮೇಳನದ ಉದ್ಘಾಟನೆ ಮಾಡಿ ಪ್ರಸನ್ನ ಕುಮಾರ್ ವೇದಿಕೆಯ ಮೇಲೆ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು. ವಿಶ್ವಬ್ಯಾಂಕ್, ಐ.ಎಂ.ಎಫ್., ಕಾರ್ಪೊರೆಟ್ ಸಂಸ್ಥೆಗಳಿಗೆ ಶೇ. 90ರಷ್ಟು ಆರ್ಥಿಕ ನಿಯಂತ್ರಣಕ್ಕೆ ಒಳಪಡಿಸುವ ಮೂಲಕ ದೇಶದ ಸಾರ್ವಭೌಮತೆಗೆ ಧಕ್ಕೆ ತಂದಿದ್ದಾರೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕ ಎಂದು ಹೇಳಿದರು.




ಆರ್.ಎಸ್. ಬಸವರಾಜ್

ದೇಶದಲ್ಲಿ ಶ್ರೀಮಂತರ ಸಂಪತ್ತು ಹೆಚ್ಚುತ್ತಿದೆ. ಅದನ್ನೇ ದೇಶದ ಅಭಿವೃದ್ಧಿಯೆಂದು ಹೇಳುತ್ತಿದ್ದಾರೆ. ಮೋದಿ ಚುನಾವಣೆಯ ಸಂದರ್ಭದಲ್ಲಿ ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆಂದು ಹೇಳಿದ್ದರು. ಚುನಾವಣೆಯಲ್ಲಿ ಕೊಟ್ಟ ಎಲ್ಲಾ ಆಶ್ವಾಸನೆಗಳನ್ನು ಗಾಳಿಗೆ ತೂರಿದ್ದಾರೆಂದು ಟೀಕಿಸಿದರು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ ಯು. ಬಸವರಾಜ್ ಮಾತನಾಡಿ ದೇಶದ ಸರಕಾರಿ ಭೂಮಿಯನ್ನು ರೈತರು, ದಲಿತರು, ದೇವದಾಸಿಯರಿಗೆ ನೀಡದೆ ವಿದೇಶೀ ಕಂಪನಿಗಳಿಗೆ ನೀಡುವ ಮೂಲಕ ವಂಚಿಸುತ್ತಿದ್ದಾರೆ. ಆಹಾರ ವಸ್ತುಗಳ ಉತ್ಪಾದನೆ ಶೇ. 1ರಷ್ಟು ಕುಸಿತವಾಗಿದೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಕಾ. ಎಸ್.ವೈ. ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಆರ್.ಎಸ್ ಬಸವರಾಜ್, ಬಿ.ಮಾಳಮ್ಮ, ಜೆ.ಸತ್ಯಬಾಬು, ಎಂ.ಜಂಬಯ್ಯ ನಾಯಕ್, ಮುಂತಾದ ಪಕ್ಷದ ಜಿಲ್ಲಾ ನಾಯಕರು ಮಾತನಾಡಿದರು. ಸ್ವಾಗತ ಸಮಿತಿ ಅಧ್ಯಕ್ಷ ವಿ.ಎಸ್. ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು.

ಸ್ಫೂರ್ತಿದಾಯಕ ಮೆರವಣಿಗೆ

ಕಂಪ್ಲಿ ಪಟ್ಟಣದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲಾ ಸಿಪಿಐ(ಎಂ) ಸಮ್ಮೇಳನ ನಡೆಯುತ್ತಿದ್ದು, ಸಾವಿರಾರು ಜನ ಭಾಗವಹಿಸಿದ ಬೃಹತ್ ಮೆರವಣಿಗೆ ಮುದ್ದಾಪುರ ಅಗಸಿಯ ಹೊಸ ಬಸ್ ನಿಲ್ದಾಣದಿಂದ ಆರಂಭವಾಗಿ, ಮಸೀದಿ, ಮಾರಮ್ಮ ಗುಡಿ, ಸರ್ಕಾರಿ ಆಸ್ಪತ್ರೆ, ಹಳೆ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ ಹಾದು ಹೋಗುತ್ತಾ ದಾರಿಯುದ್ದಕ್ಕೂ ಪಟ್ಟಣದಲ್ಲಿ ಸಂಚಲನ ಮೂಡಿಸಿತು. ಕೆಂಬಾವುಟಗಳು, ಲಾಲ್ ಸಲಾಂ ಮುಂತಾದ ಕ್ರಾಂತಿಕಾರಿ ಘೋಷಣೆಗಳು ಮೆರವಣಿಗೆಗೆ ಮೆರುಗು ಕೊಟ್ಟು, ಇಕ್ಕೆಲಗಳಲ್ಲಿ ಜನ ನಿಂತು ನೋಡುವಂತೆ ಮಾಡಿತು.



ಪ್ರತಿನಿಧಿ ಸಭೆ

ಸಮ್ಮೇಳನದ ಪ್ರತಿನಿಧಿ ಸಭೆಯಲ್ಲಿ ಜಿಲ್ಲೆಯ ತಾಲೂಕುಗಳಿಂದ 97 ಪ್ರತಿನಿಧಿಗಳು ಭಾಗವಹಿಸಿದ್ದರು. ಬಳ್ಳಾರಿ ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಆರ್.ಎಸ್.ಬಸವರಾಜ್ ವರದಿಯನ್ನು ಮಂಡಿಸಿದರು. ಚರ್ಚೆಯ ನಂತರ ಪ್ರತಿನಿಧಿಗಳಿಂದ ಬಂದ ಸಲಹೆ–ಸೂಚನೆಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಸಮ್ಮೇಳನ 15 ನಿರ್ಣಯಗಳನ್ನು ಅಂಗೀಕರಿಸಿತು. ತುಂಗಭದ್ರಾ ಹೂಳು ತೆಗೆಯುವುದಕ್ಕೆ, ಕನಿಷ್ಟ ಕೂಲಿ ನಿಗದಿಗೆ, ಗುತ್ತಿಗೆ ಪದ್ಧತಿ ರದ್ದು ಪಡಿಸಲು, ಕಂಪ್ಲಿ ಸಕ್ಕರೆ ಕಾರ್ಖಾನೆಗೆ, ಬಗರ್ ಹುಕುಂ ಸಾಗುವಳೀದಾರರಿಗೆ ಪಟ್ಟಾ ನೀಡಲು, ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು– ಒತ್ತಾಯಿಸಿ: ಕೋಮು ಸೌಹಾರ್ದತೆಗಾಗಿ, ಕರ್ನಾಟಕ ಮಾನವ ಸರಪಣಿ ಕುರಿತು – ನಿರ್ಣಯಗಳೂ ಇವುಗಳಲ್ಲಿ ಸೇರಿವೆ.

ಮುಂದಿನ ಮೂರು ವರ್ಷಗಳಿಗೆ 17 ಸದಸ್ಯರ ಜಿಲ್ಲಾ ಸಮಿತಿ ರಚಿಸಲಾಯಿತು. ಆರ್.ಎಸ್. ಬಸವರಾಜ್ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಬಿ.ಮಾಳಮ್ಮ, ಜೆ.ಸತ್ಯಬಾಬು, ಎಂ.ಜಂಬಯ್ಯ ನಾಯಕ್, ಕೆ.ನಾಗರತ್ನಮ್ಮ, ಆರ್. ಭಾಸ್ಕರ ರೆಡ್ಡಿ, ಎಚ್.ತಿಪ್ಪಯ್ಯ, ಗಾಳಿ ಬಸವರಾಜ್ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಆಯ್ಕೆಯಾದರು. ●

---

8 ನೇ ಮಂಡ್ಯ ಜಿಲ್ಲಾ ಸಿಪಿಐ(ಎಂ) ಸಮ್ಮೇಳನ

ಕೋಮುವಾದಕ್ಕೆ ನೆಲೆ ನೀಡದಿರಲು ಮತ್ತು ಜನತೆಯ ಉತ್ತಮ ಬದುಕಿಗಾಗಿ ಹೋರಾಡಲು ತೀರ್ಮಾನ





ಡಿಸೆಂಬರ್ 12 – 13 ರಂದು ಯಶಸ್ವಿಯಾಗಿ ಮಳವಳ್ಳಿ ಪಟ್ಟಣದಲ್ಲಿ ನಡೆದ ಸಿಪಿಐ(ಎಂ)ನ 8 ನೇ ಜಿಲ್ಲಾ ಸಮ್ಮೇಳನ ಜಿಲ್ಲೆಯ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕನಕ್ಕೆ ಒಳಪಡಿಸಿ ಕೋಮುವಾದಕ್ಕೆ ನೆಲೆ ಸಿಗಲಾರದಂತೆ ಹಾಗೂ ಜನರ ಬದುಕನ್ನು ಉತ್ತಮ ಪಡಿಸಲು ನಿರ್ದಿಷ್ಟ ಹೋರಾಟಗಳನ್ನು ರೂಪಿಸಲು ಸರ್ವಾನುಮತದಿಂದ ತೀರ್ಮಾನಿಸಿತು. ರಾಜ್ಯ ಸರ್ಕಾರ ನಡೆಸುತ್ತಿದ್ದರೂ ಜಿಲ್ಲೆಯಲ್ಲಿ ಕಾಂಗ್ರೆಸ್ ಗುಂಪುಗಾರಿಕೆಯಿಂದ ಸಂಘಟನಾತ್ಮಕವಾಗಿ ದುರ್ಬಲವಾಗಿರುವುದನ್ನು, ಅವಕಾಶವಾದಿ ನಿಲುವುಗಳಿಂದಾಗಿ ಜೆಡಿ(ಎಸ್) ಪಕ್ಷದ ವಿಶ್ವಾಸಾರ್ಹತೆ ಕುಸಿದಿರುವ ಹಿನ್ನೆಲೆಯಲ್ಲಿ ಒಕ್ಕಲಿಗರು ಮತ್ತು ದಲಿತರ ನಡುವೆ ತಮ್ಮ ನೆಲೆ ಕಂಡುಕೊಳ್ಳಲು ಪಕ್ಷಾಂತರಿ ಚನ್ನಪಟ್ಟಣದ ಶಾಸಕನ ಮೂಲಕ ಪಕ್ಷಾಂತರ ನಡೆಸಿ ಬಿಜೆಪಿ ಬಲ ಕ್ರೋಡೀಕರಿಸಲು ತೀವ್ರ ಪ್ರಯತ್ನ ನಡೆಸುತ್ತಿರುವುದನ್ನು ಸಮ್ಮೇಳನ ವಿವರವಾಗಿ ಚರ್ಚಿಸಿತು. ಜಿಲ್ಲೆಯ ಧಾರ್ಮಿಕ ಸಂಸ್ಥೆಗಳಾದ ಚುಂಚನಗಿರಿ ಮಠ, ಬೇಬಿ ಮಠ, ಕಾವೇರಿ ಪುಷ್ಕರಣಿ ಮೂಲಕ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಸಂಘಪರಿವಾರದ ಪ್ರಭಾವ ಕಾಣಿಸಿಕೊಳ್ಳತೊಡಗಿದೆ. ಭೈರವ ಮಾಲೆ, ಹನುಮ ಮಾಲೆ ಮುಂತಾದ ಕಾರ್ಯಕ್ರಮಗಳ ಮೂಲಕ ಜಿಲ್ಲೆಯ ಜನರ ಧಾರ್ಮಿಕ ದುರುಪಯೋಗ ಪಡಿಸಿಕೊಳ್ಳುವ ರಾಜಕೀಯ ಯತ್ನ ನಡೆಯುತ್ತಿದೆ.



ಕಳೆದ ಮೂರು ವರ್ಷಗಳಲ್ಲಿ 280 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಗ್ರಾಮೀಣ ಜನತೆಯ ವಲಸೆ ತೀವ್ರಗೊಂಡಿದೆ. ಹಸಿವು ಸಾಲಭಾದೆ,ವಲಸೆ, ಆತ್ಮಹತ್ಯೆ ಗ್ರಾಮೀಣ ಜೀವನದ ಪ್ರಧಾನ ಅಂಶಗಳಾಗಿ ಎದ್ದು ಕಾಣುತ್ತಿವೆ. ತೀವ್ರ ಬೆಲೆಯೇರಿಕೆಯಿಂದ ಜೀವನವೆಚ್ಚ ದುಬಾರಿಯಾಗಿ ಆದಾಯ ಮತ್ತು ಖರ್ಚು ಸಮತೋಲನವಾಗದೆ ಜನರ ಬದುಕು ಗಾಣಕ್ಕೆ ಸಿಕ್ಕ ಕಬ್ಬಿನಂತಾಗಿದೆ.


ಪುಟ್ಟಮಾದು

ಈ ಎಲ್ಲಾ ವಿಷಯಗಳನ್ನು ವಿವರವಾಗಿ ಚರ್ಚಿಸಿದ ಸಮ್ಮೇಳನ ಮಹಿಳೆಯರು,ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಕುರಿತು ಆತಂಕ ವ್ಯಕ್ತಪಡಿಸಿ ದೌರ್ಜನ್ಯ ತಡೆಗೆ ಹೋರಾಡಲು ನಿರ್ಣಯಗಳನ್ನು ಕೈಗೊಂಡಿತು.

ಇದಕ್ಕೂ ಮೊದಲು ಸಾವಿರಾರು ಜನರ ಆಕರ್ಷಕ ಮೆರವಣಿಗೆಯೊಡನೆ ಆರಂಭವಾದ ಮೆರವಣಿಗೆಯು ಪಟ್ಟಲದಮ್ಮ ದೇವರ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಉದ್ಘಾಟನಾ ಭಾಷಣ ಮಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್ ನಾಗರಾಜ್ ರಾಜ್ಯದ ಮೂರು ಪ್ರಮುಖ ಪಕ್ಷಗಳ ಜಾಥಾಗಳಲ್ಲಿ ರಾಜ್ಯದ ಜನರ ಬದುಕಿನ ಪ್ರಶ್ನೆಗಳು ಚರ್ಚೆಯಾಗುವ ಬದಲು ವೈಯಕ್ತಿಕ ಕೆಸರೆರಚಾಟದ ವೇದಿಕೆಗಳಾಗಿ ಮಾರ್ಪಟ್ಟಿದ್ದು ಹೊಲಸುನಿಂದನೆಯ ತಿಪ್ಪೆಗುಂಡಿಯಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಿಪಿಐ(ಎಂ) ಮಾತ್ರವೇ ಜನರ ಹಿತಕ್ಕಾಗಿ ಇರುವ ಪಕ್ಷ ಎಂದು ಉದಾಹರಣೆಗಳ ಮೂಲಕ ವಿವರಿಸಿದರು. ನಂತರ ಮಾತನಾಡಿದ ಮತ್ತೊಬ್ಬ ರಾಜ್ಯ ಮುಖಂಡ ಕೆ.ಎನ್ ಉಮೇಶ್ ಸಿದ್ದರಾಮಯ್ಯನವರ ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಕಿವುಡಾಗಿದೆ. ಮೋದಿ ಸರ್ಕಾರದ ಆರ್ಥಿಕ ನೀತಿಗಳ ತದ್ರೂಪಿಯಂತೆ ಕೆಲಸ ಮಾಡುತ್ತಿದೆ. ಅದೇ ಜನವಿರೋಧಿ ಖಾಸಗೀಕರಣ ಉದಾರೀಕರಣ ನೀತಿಗಳನ್ನು ಅನುಸರಿಸುತ್ತಿದೆ ಎಂದು ಟೀಕಿಸಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಜಿ.ರಾಮಕೃಷ್ಣ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪುಟ್ಟಮಾದು, ಕೃಷ್ಣೇಗೌಡ, ಕುಮಾರಿ, ಯಶವಂತ, ದೇವಿ ಉಪಸ್ಥಿತರಿದ್ದರು.

ಕೊನೆಯಲ್ಲಿ 13 ಜನರ ನೂತನ ಜಿಲ್ಲಾ ಸಂಘಟನಾ ಸಮಿತಿಯನ್ನು ಆರಿಸಲಾಯಿತು. ಸಂಗಾತಿಗಳಾದ ಪುಟ್ಟಮಾದು, ರಾಮಕೃಷ್ಣ, ಕೃಷ್ಣೇಗೌಡ, ಕುಮಾರಿ, ಯಶವಂತ, ದೇವಿ, ಲಿಂಗರಾಜಮೂರ್ತಿ, ಭರತ್‌ರಾಜ್, ಬಸವರಾಜ್, ಕೃಷ್ಣ, ಸುಶೀಲಾ, ಶೋಭಾ, ಹನುಮೇಶ್ ಆಯ್ಕೆಯಾದರು. ನೂತನ ಜಿಲ್ಲಾ ಕಾರ್ಯದರ್ಶಿಯಾಗಿ ಪುಟ್ಟಮಾದು ಸರ್ವಾನುಮತದಿಂದ ಆಯ್ಕೆಯಾದರು.

– ಟಿ.ಎಲ್.ಕೃಷ್ಣೇಗೌಡ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**